

ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 41
ಅಕ್ಟೋಬರ್ 12, 2003 ಬೆಲೆ ರೂ. 3.00



ದುಡಿವ ಜನರ ಪ್ರಾಣಮಿತ್ರನಿಗೀಗ 40 ವರ್ಷಗಳು



ಆತ್ಮಹತ್ಯೆಗಳ ನಡುವೆ ನಡೆದುಹೋದ ಸೋನಿಯಾ




ಕೋಮುವಾದಿ ಅಜೆಂಡಾ ವಿದೇಶಾಂಗ ನೀತಿಯಾಗಬೇಕೆ?

ಕಿಯಲ್ಲಿ ಚೇತರಿಸಿದ ಭಾರತ

ಸಿನಿಮಾ : 'ರಕ್ತಕಣ್ಣೀರು'

ಪರ್ಯಾಯಕ್ಕಾಗಿ ಪಾದಯಾತ್ರೆ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

47



ಕಳೆದ ಸಂಚಿಕೆಯಲ್ಲಿ ನಮ್ಮ ಹಕ್ಕನ್ನು ನಿರಾಕರಿಸುವುದರ ವಿರುದ್ಧ ಹೋರಾಡುವ ನಮ್ಮನ್ನು ಡಕಾಯಿತರು ಎಂದು ಕರೆದರೆ ಹಾಗೆನಿಸಿಕೊಳ್ಳಲು ನಮಗೆ ಹೆಮ್ಮೆಯಾಗುತ್ತದೆ ಎಂದ 35 ರ ಹರೆಯದ ಗೆರಿಲ್ಲಾ ಸಂಗಾತಿ, ಸದಾ ಪಯಣಿಸುತ್ತಿದ್ದ ಹೋರಾಟಗಾರರು, ಅವರಿಗೆ ಕೊಡುತ್ತಿದ್ದ ಆಹಾರವನ್ನು ಬೆನ್ನು ಅಥವಾ ತಲೆಯ ಮೇಲೆ ಹೊತ್ತೊಯ್ಯುತ್ತಿದ್ದದ್ದು ಮತ್ತು ಕ್ರಾಂತಿಕಾರಿ ತೊಟ್ಟಿಲಲ್ಲಿ ಹುಟ್ಟಿ ಪ್ರಜ್ಞಾಪೂರ್ವಕ ಶಿಸ್ತಿನಲ್ಲಿ ಬೆಳೆದ ಹೋರಾಟ ನಿರತ ಘಟಕವೊಂದನ್ನು ನೋಡಿದ ಜಯಪಲಾರ ಅನುಭವ ಈ ಬಗ್ಗೆ ಓದಿರುವಿರಿ. ಮುಂದೆ....

ಕನ್ನಡಕ್ಕೆ: **ವಿಶ್ವ ಕುಂದಾಪುರ**

ಸಾಗುವ ಹಾದಿ ಯಾವುದು?

"ನನಗೆ ತುಂಬಾ ಚಿಂತೆಯಾಗಿತ್ತು-ಯುವ ಕಮಾಂಡರ್ ಕಳವಳದ ದನಿಯಿಂದ ಪಿಸುಗುಟ್ಟಿದ. ನಾವು ಬರುತ್ತಿದ್ದ ದಿಕ್ಕಿನಲ್ಲೇ ವೈರಿಪಡೆ (ಪೊಲೀಸ್ ತುಕಡಿ) ಹೋಗಿದ್ದರಿಂದ ಅವರಿಗೆ ಕಸಿವಿಸಿಯಾಗಿತ್ತು. 'ಹೀಗಾಗಿ, ನೀವು ಬರುವ ಹಾದಿಯಲ್ಲೇ ಒಂದು ವೇಳೆ ಅವರು ಬಂದರೆ ಓಡಿಹೋಗಿ ಅವರತ್ತ ಗುಂಡು ಹಾರಿಸಲೆಂದು ಇಬ್ಬರು ಸ್ಕೌಟ್‌ಗಳನ್ನು ಕಳಿಸಿದ್ದೆ' ಎಂದು ಕಮಾಂಡರ್ ಹೇಳಿದರು.

ಇನ್ನೊಂದು ಗೆರಿಲ್ಲಾದ ಕೂಗು ಕೇಳಿಸಿತು. ಸ್ಕ್ವಾಡ್‌ಗಳು ಏದುಸಿರು ಬಿಡುತ್ತಾ ಬಂದರು. ಅವರ ಪಾದಗಳು ಬೆವರಿನಿಂದ ಒದ್ದೆಯಾಗಿದ್ದವು. "ಪೊಲೀಸ್ ತುಕಡಿ ಇಲ್ಲಿಂದ ಎರಡು ಮೈಲು ದೂರದ ಬೆಟ್ಟದ ಮೇಲೆ ವಿಶ್ರಾಂತಿ ಪಡೆಯುತ್ತಿವೆ. ಅಲ್ಲೊಂದು ನೀರಿನ ಸ್ಥಳವಿದೆ. 'ಡಕಾಯಿತರು' ನೀರು ತರಲು ಅಲ್ಲಿಗೆ ಬರಬಹುದೆಂದು ಅವರು ಭಾವಿಸಿದ್ದಾರೆ' ಎಂದು ಆ ಸಂಗಾತಿಗಳು ಹೇಳಿದರು.

"ಬನ್ನಿ, ನಾವು ಅವರ ಮೇಲೆ ಆಕ್ರಮಣ ಮಾಡೋಣ" ಸಹನೆ ಕಳೆದುಕೊಂಡ ಒಬ್ಬ ಗೆರಿಲ್ಲಾ ಹೇಳಿದ.

"ಬೇಡ, ಬೇಡ ನಾವು ಅಂಗರಕ್ಷಣೆಯ ಕರ್ತವ್ಯದ ಮೇಲೆ ಇದ್ದೇವೆ ಎನ್ನುವುದು ನಿನಗೆ ಗೊತ್ತಿಲ್ಲವೆ? ಯೋಜನೆಯಿಲ್ಲದ ಆತುರದ ಕೃತ್ಯಗಳಿಂದ ಎಷ್ಟೊಂದು ಅಪಾಯವಾಗುತ್ತದೆಂದು ನಿನಗೆ ತಿಳಿದಿಲ್ಲವೆ? ನಾವು ಮಾಡುತ್ತಿದ್ದ ತಪ್ಪುಗಳಿಂದ ನೀನು ಪಾಠ ಕಲಿತಿಲ್ಲವೆ? ಆ ತಪ್ಪುಗಳಿಂದ ನಮಗೆ ಎಷ್ಟೊಂದು ಹಾನಿಯಾಗಿದೆ ಎನ್ನುವುದರ ಅರಿವಿಲ್ಲವೆ?" - 19 ವರ್ಷದ ಕುಂದನ 35 ವರ್ಷ ಪ್ರಾಯದ ಸ್ಕ್ವಾಡ್ ಕಮಾಂಡರ್‌ನತ್ತ ಗದರಿಸುತ್ತಾ ಕೇಳಿದ.

"ಹೌದು, ಇದು ತಪ್ಪು, ನಾನು ಅಂಗರಕ್ಷಣೆಯ ಕರ್ತವ್ಯದ ಬಗ್ಗೆ ಮರೆತೇಬಿಟ್ಟಿದ್ದೆ" - ಎಂದು ಕಮಾಂಡರ್ ಕ್ಷಮೆ ಕೋರಿದರು.

"ಇರಲಿ, ಇರಲಿ. ಆದರೆ ಶತ್ರು ಪಡೆ ಬೀಡುಬಿಟ್ಟಿರುವ ಸ್ಥಳದ ಸಮೀಪವೇ ಇರುವ ನಮ್ಮ ತಂಡದ ತಂಡನಾಯಕರ ಬಳಿ ಇಬ್ಬರು ಸಂಗಾತಿಗಳನ್ನು ತಕ್ಷಣವೇ ಕಳಿಸಿ, ಅಲ್ಲಿಂದ ಜಾಗ ಬದಲಾಯಿಸಲು ತಿಳಿಸಿ" - ಎಂದು ಕುಂದನ್ ಆದೇಶಿಸಿದ.

ಕೇವಲ ಐದೇ ನಿಮಿಷದಲ್ಲಿ ಇಬ್ಬರು ತರುಣ ಗೆರಿಲ್ಲಾಗಳು ಸಾವಿರ ಅಡಿ ಎತ್ತರದ ಬೆಟ್ಟವನ್ನು ಹತ್ತಲಾರಂಭಿಸಿದರು. ಅವರ ಹೆಗಲುಗಳ ಮೇಲೆ ಆಹಾರದ ಮೂಟೆಯಿತ್ತು. ತಮ್ಮ ತಮ್ಮ ರೈಫಲ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿಕೊಂಡಿದ್ದರು. ಅವರು ಆಗಷ್ಟೇ 15 ಕಿ.ಮೀ ದೂರ ಬರಿಗಾಲಲ್ಲಿ ಸವೆಸಿ ಬಂದವರಾಗಿದ್ದರು. ಕಾಲುಗಳಲ್ಲಿ ನೋವಿತ್ತು. ಆದರೂ ಅವರು ಮತ್ತೆ ಐದು ಮೈಲು ದೂರ ಕಡಿದಾದ ಮಾರ್ಗದಲ್ಲಿ ಸಾಗಿದರು, ಸ್ಕ್ವಾಡ್ ಲೀಡರ್ 'ಎಕ್ಸ್' ಅವರನ್ನು ಸಂಧಿಸಿ ಸಂದೇಶ ನೀಡಲು.

ನಾನು ಸಾಗರ್ ಮುಖ ನೋಡಿದೆ. ಜೀವನ ಎಷ್ಟು ಕಷ್ಟದಾಯಕ ಹಾಗೂ ಅದನ್ನು ಎಷ್ಟೊಂದು ಸ್ಫೂರ್ತಿ, ಸವಾಲಿನಿಂದ ಸ್ವೀಕರಿಸಿದ್ದಾರೆ- ಮೆಚ್ಚುಗೆ ಸೂಸುತ್ತಿದ್ದ ಅವರ ಮುಖಭಾವ ಹೀಗೆ ಅನ್ನುತ್ತಿತ್ತು.

ಆಹಾರಕ್ಕಾಗಿ ವಾದ!

ಐದಾರು ಸಂಗಾತಿಗಳು ಕುಳಿತು ಆಹಾರ ಪಡಿತರದ ಬಗ್ಗೆ ವಾದ ಮಾಡುತ್ತಿದ್ದರು. ಒಬ್ಬ ಸಂಗಾತಿ ಆರು ಮೆಣಸಿನಕಾಯಿ ಹೆಚ್ಚಿಗೆ ಅಥವಾ ಅರ್ಧ ಸೇರು ಹಣಸೆಹಣ್ಣನ್ನು ಜಾಸ್ತಿ ಕೊಡಬೇಕು ಎಂದು ಒತ್ತಾಯಿಸುತ್ತಿದ್ದ. ಇನ್ನೊಬ್ಬ ಸಂಗಾತಿ ತನಗೆ ಹೆಚ್ಚಿಗೆ ಅನ್ನ ಬೇಕೆನ್ನುತ್ತಿದ್ದ. ಎಲ್ಲರೂ ತಮ್ಮ ತಮ್ಮ ಪಾಲಿಗೆ ಬಂದ ಆಹಾರವನ್ನು ಬಿಳಿಬಟ್ಟೆಯಲ್ಲಿ ಸುತ್ತಿ ಗಂಟು ಹಾಕಿದ್ದರು. ಅದು ಕತ್ತೆ ಮೇಲಿನ ಬಟ್ಟೆಯ ಮೂಟೆಗಳಂತೆ ಕಾಣುತ್ತಿದ್ದವು.

ನಾವು ಸಾಗಬೇಕಾದ ದಾರಿಯ ಬಗ್ಗೆ ಚಿಂತಿಸುವುದರಲ್ಲಿ ನಮ್ಮ ತಂಡ ಮಗ್ನವಾಗಿತ್ತು. ದಾರಿಯ ಆಯ್ಕೆ ವಿಚಾರದಲ್ಲಿ ಸ್ಕ್ವಾಡ್ ಕಮಾಂಡರ್ ಮತ್ತು ಕುಂದನರ ನಡುವೆ ಬಿಸಿ ಬಿಸಿ ಚರ್ಚೆಯಾಯಿತು. "ಈ ಸಂಗಾತಿಗಳನ್ನು ಈ ಮಾರ್ಗವಾಗಿ ಕರೆದೊಯ್ಯುವಂತೆ ನನಗೆ ಏರಿಯಾ ಹೆಡ್‌ಕ್ವಾರ್ಟರ್ಸ್‌ನಿಂದ ಸೂಚನೆ ಬಂದಿದೆ. ನಾನು ಆ ಆದೇಶಗಳನ್ನು ಪಾಲಿಸುತ್ತೇನೆ" - ಎಂಬುದಾಗಿ ಕಮಾಂಡರ್ ವಾದಿಸಿದರು. ಆದರೆ ಕುಂದನ್ ತನ್ನ ಅಭಿಪ್ರಾಯದಿಂದ ಕಿಂಚಿತ್ತೂ ಕದಲಲು ಸಿದ್ಧನಿರಲಿಲ್ಲ.

ಕೇವಲ ಐದೇ ನಿಮಿಷದಲ್ಲಿ ಇಬ್ಬರು ತರುಣ ಗೆರಿಲ್ಲಾಗಳು ಸಾವಿರ ಅಡಿ ಎತ್ತರದ ಬೆಟ್ಟವನ್ನು ಹತ್ತಲಾರಂಭಿಸಿದರು. ಅವರ ಹೆಗಲುಗಳ ಮೇಲೆ ಆಹಾರದ ಮೂಟೆಯಿತ್ತು. ತಮ್ಮ ತಮ್ಮ ರೈಫಲ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿಕೊಂಡಿದ್ದರು. ಇಷ್ಟು ಕಷ್ಟದಾಯಕ, ಆದರೆ ಎಷ್ಟೊಂದು ಸ್ಫೂರ್ತಿ ಸವಾಲಿನಿಂದ ಸ್ವೀಕರಿಸಿದ್ದರು.

"ಹೆಡ್‌ಕ್ವಾರ್ಟರ್ಸ್ ಆದೇಶಗಳನ್ನು ನಾನು ಗೌರವಿಸುತ್ತೇನೆ. ಒಂದು ವಾರದ ಹಿಂದೆ ನಾನು ಸಲ್ಲಿಸಿದ ಪರಿಸ್ಥಿತಿಯ ವರದಿ ಆಧಾರದಲ್ಲಿ ಅವರು ಈ ಮಾರ್ಗವನ್ನು ಆಯ್ಕೆ ಮಾಡಿದ್ದಾರೆ. ಈ ನಡುವೆ ಎಷ್ಟೋ ದಿನಗಳಷ್ಟು ದೀರ್ಘ ಕಾಲ ಕಳೆದಿದೆ, ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಈ ದಾರಿಯಲ್ಲಿ ಎರಡು ಹೊಸ ಶಿಬಿರಗಳು ಸ್ಥಾಪನೆಯಾಗಿವೆ. ಭಾರೀ ಪೊಲೀಸ್ ಕಾವಲು ಹಾಕಲಾಗಿದೆ ಎಂದು ರಂಗಣ್ಣ ವರದಿ ಮಾಡಿದ್ದಾರೆ" - ಎಂದು ಕುಂದನ್ ತನ್ನ ವಾದವನ್ನು ಸಮರ್ಥಿಸುತ್ತ ವಿವರಿಸಿದ.

ರಂಗಣ್ಣನನ್ನು ಕರೆಕಳಿಸಲಾಯಿತು. ಪಡಿತರದ ಬಗ್ಗೆ ವಾದ ಮಾಡುತ್ತಿದ್ದ ಗುಂಪಿನ ನಡೆಯಿಂದ ರಂಗಣ್ಣ ಬಂದ. 'ಚಿಂತಪಂಡು' ತುಂಡನ್ನು ಅಗೆಯುತ್ತಾ ಬಂದ ರಂಗಣ್ಣ "ಎಸ್, ಕಾಮ್ರೇಡ್" ಎಂದು ನಿಂತರು. (ಚಿಂತಪಂಡು' - ತೆಲುಗು ಜನರಿಗೆ ಕ್ರಾಂತಿಯಷ್ಟೇ ಅನಿವಾರ್ಯ ವಸ್ತು)

"ಈ ಸಂಗಾತಿಗಳನ್ನು ಕರೆದೊಯ್ಯಲು ಈ ಮಾರ್ಗ ಸುರಕ್ಷಿತ ಎಂಬುದು ಸ್ಕೌಟ್ ಕಮಾಂಡರ್ ಭಾವನೆ. ನಿಮಗೆ ಈ ದಾರಿ ಗೊತ್ತಿದೆಯೇ?" ರಂಗಣ್ಣರನ್ನು ಪ್ರಶ್ನಿಸಲಾಯಿತು.

"ನನಗೆ ಈ ಮಾರ್ಗ ಗೊತ್ತಿದೆ! ಐದು ವರ್ಷ ಕಾಲ ಹಗಲೂ ರಾತ್ರಿ ಈ ಮಾರ್ಗದಲ್ಲಿ ಓಡಾಡಿದ್ದೇನೆ. ಕಾಡಿನಲ್ಲಿ ಒಳ್ಳೆಯ ಜೇನುಗೂಡುಗಳಿರುತ್ತವೆ. ಜೇನು ತೆಗೆಯಲು ನಾನು ಆಗಾಗ ಹೋಗಿದ್ದೇನೆ" - ರಂಗಣ್ಣರ ಉತ್ತರ.

"ನಿಮ್ಮ ಜೀವನದ ಇತಿಹಾಸದ ಬಗ್ಗೆ ಹೇಳಬೇಡಿ. ಈ ಮಾರ್ಗದ ಬಗ್ಗೆ ನಿಮ್ಮ ಅಭಿಪ್ರಾಯ ವೇನು, ಅಷ್ಟೇ ಹೇಳಿ" ಕುಂದನರ ಸ್ಪಷ್ಟ ನುಡಿ.

"ಮಾರ್ಗ, ಒಂದು ಹುಚ್ಚು ನಾಯಿ ಕೂಡ ಆ ದಾರಿಯಲ್ಲಿ ಹೋಗಲಾರದು. ಇದು ಜನರ ದಾರಿ (ಜನಮಾರ್ಗ) ಪ್ರತಿದಿನ ನೂರಾರು ಜನರು ಈ ದಾರಿಯಲ್ಲಿ ಓಡಾಡುತ್ತಾರೆ. ಶತ್ರುಗಳು ಕೂಡ ಸುಲಭವಾಗಿ ಸಾಮಾನ್ಯ ಜನರಂತೆ ವೇಷಮರೆಸಿ ಅಲ್ಲಿ ಓಡಾಡಬಹುದು. ಈಗಾಗಲೇ ಹೀಗೆ ಮಾಡುತ್ತಿದ್ದಾರೆ. ನೀವು (ಕುಂದನ್) ಸೂಚಿಸುತ್ತಿರುವ ಮಾರ್ಗ ಕೂಡ ಸುರಕ್ಷಿತವಾದುದಲ್ಲ. ಅಲ್ಲೆಲ್ಲ ತುಂಬಾ ಕಷ್ಟದಾಯಕ ಜವುಗು ಪ್ರದೇಶಗಳಿವೆ, ಹೀಗಾಗಿ ರಾತ್ರಿ ವೇಳೆ ಅದು ಸುರಕ್ಷಿತವಲ್ಲ. ಒಂದು ಸಲ ನಾನು ಜೇನು ತೆಗೆಯಲೆಂದು ಹೋಗಿದ್ದಾಗ ಕೆಸರಿನಲ್ಲಿ ಬಹುತೇಕ ಹೂತುಹೋಗಿದ್ದೆ. ಇದು ಸುರಕ್ಷಿತವಲ್ಲ. ಈ ಮಾರ್ಗದಲ್ಲಿ ಏಕೆ ಹೋಗಬಾರದು? ಇದು ಅತ್ಯುತ್ತಮವಾದುದು ಹಾಗೂ ಅತಿ ಸುರಕ್ಷಿತವಾದುದು- ಎರಡು ನದಿಗಳಿವೆ, ಒಂದು ರಸ್ತೆಯಿದೆ, ಐದು ಗುಡ್ಡಗಳಿವೆ ಇವುಗಳನ್ನು ಹಾದು ಹೋಗಬೇಕು. ಆದರೆ ಕಷ್ಟಪಟ್ಟರೆ ಪ್ರಾಣ ಉಳಿಯುತ್ತದೆ. ಆ ಮಾರ್ಗದಲ್ಲಿ ಕಾವಲಿರಲು ಶತ್ರುಗಳ ಅಪ್ಪನಿಗೂ ಸಾಧ್ಯವಾಗುವುದಿಲ್ಲ. ಸಿಖ್ ಸೈನಿಕರು ಬೆಟ್ಟ ಹತ್ತಬೇಕಾಗುತ್ತದೆಂಬುದು ನಿಮಗೆ ತಿಳಿದಿಲ್ಲವೆ? ಮಲಬಾರ್ ವಿಶೇಷ ಪೋಲೀಸರು ಕಾಡಿನಲ್ಲಿ ಹಗಲು ಹೊತ್ತಿನಲ್ಲೂ ದಾರಿತಪ್ಪುತ್ತಾರೆ. ಹೀಗಾಗಿ ಇದು ತುಂಬಾ ಸುರಕ್ಷಿತ ಮಾರ್ಗ. ಹಾಗೆ ನೋಡಿದರೆ ಇದು ದಾರಿಯೇ ಅಲ್ಲ; ಇದು ಬೆಟ್ಟಗುಡ್ಡ ಪ್ರಯಾಣ, ನಾನು ಈ ಮಾರ್ಗದಲ್ಲಿ ಹಲವು ಬಾರಿ ಸಂಚರಿಸಿದ್ದೇನೆ

ರಂಗಣ್ಣ ವಿವರವಾಗಿ ಹೇಳಿದರು.

"ಜೇನು ಮನುಷ್ಯ" ನಿಗೆ ಸ್ಕ್ವಾಡ್‌ಗಳ ಮಾರ್ಗದ ಬಗ್ಗೆ ಏನು ಗೊತ್ತಿರುತ್ತದೆ. ನಾನು ಏರಿಯಾ ಹೆಡ್‌ಕ್ವಾರ್ಟರ್ಸ್‌ನ ಆದೇಶವನ್ನು ಪಾಲಿಸುತ್ತೇನೆ"- ಎಂದು ಸ್ಕ್ವಾಡ್ ಲೀಡರ್ ಪಟ್ಟುಹಿಡಿದರು.

ಇದರಿಂದಾಗಿ ಪ್ರತಿಭಟನೆಯ ಅಲೆಯೇ ಎದ್ದಿತು. ಒಂದು 'ಸಮಾವೇಶ' ನಡೆಯಿತು. ವಿವಾದಾತ್ಮಕ ವಿಷಯಗಳನ್ನು ಇತ್ಯರ್ಥಪಡಿಸಲು ಇದು ಪ್ರಮುಖ ಸಾಧನ ಎಂಬುದನ್ನು ನಾನು ಆಮೇಲೆ ಕಂಡುಕೊಂಡೆ. ಸಮಾವೇಶದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರೂ ಮಾತನಾಡಿ ತಮಗೆ ಸರಿಕಂಡ ಸಲಹೆಯನ್ನು ಮಂಡಿಸಿದರು.

ಸಾಮೂಹಿಕ ನಿರ್ಧಾರಗಳು ಮತ್ತು ಚರ್ಚೆಗಳಿಗೆ ಎಷ್ಟು ಮಹತ್ವ ಹಾಗೂ ಪ್ರಾಮುಖ್ಯತೆಯಿದೆ ಎಂಬುದು ಗೊತ್ತಾಯಿತು. ಸಮಾವೇಶ ನಡೆದ ಒಂದೇ ನಿಮಿಷದಲ್ಲಿ ಎಲ್ಲರೂ ಜವಾಬ್ದಾರಿಯುತ ವಾತಾವರಣದಲ್ಲಿ ಒಟ್ಟಾದರು.

ಕುಂದನ್ ಸ್ಪರ್ಧಿಗಳಲ್ಲಿ ಒಬ್ಬನಾಗಿದ್ದರಿಂದ ಆತ ಈಗ ಕೇವಲ ಭಾಗಿದಾರನಷ್ಟೆ. ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿ ಪಕ್ಷದ ಅತ್ಯಂತ ಹಿರಿಯ ಪ್ರತಿನಿಧಿಯಾಗಿದ್ದರೂ ಬೇರೆಯವರಿಗೆ ಗೊತ್ತಿರುವಷ್ಟು ಆ ಹಳ್ಳಿಗಾಡಿನ ಮಾರ್ಗದ ಬಗ್ಗೆ ತಿಳಿದಿಲ್ಲವಾದ್ದರಿಂದ ಸ್ವತಃ ಆತನೇ ನಿರ್ಧಾರ ತೆಗೆದುಕೊಳ್ಳುವಂತಿರಲಿಲ್ಲ. ಆತ 'ಸಮಾವೇಶದ' ಮುಂದೆ ಮೂರು ಪರ್ಯಾಯ ಮಾರ್ಗಗಳನ್ನು ಮಂಡಿಸಿದ. ಎಲ್ಲರೂ ಮೌನವಾಗಿ ಆಲಿಸಿದರು. ಕ್ಯಾಥೆಲಿಕ್ ಚರ್ಚ್‌ನ ಸಮಾರಂಭದ ದೃಶ್ಯವನ್ನು ಹೋಲುತ್ತಿತ್ತು ಅಲ್ಲಿನ ವಾತಾವರಣ - ಬಾಯಿಯನ್ನು ಅಗಲವಾಗಿ ಬಿಟ್ಟು ಭಾಷಣಕಾರರತ್ತ ಕಣ್ಣುರೆಪ್ಪೆ ಮಿಟುಕಿಸದೆ ನೋಡುತ್ತಾ ಅವರು ಹೇಳುವ ಪ್ರತಿಯೊಂದು ಮಾತನ್ನು ನುಂಗುವಂತಿದ್ದರು ಪ್ರತಿಯೊಬ್ಬರೂ.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಅಕ್ಟೋಬರ್ 9**
  ಮುಂದುವರಿಕೆ ಶಿಕ್ಷಣ ಕೇಂದ್ರಗಳ ಪ್ರೇರಕರು ಮತ್ತು ಸಹಪ್ರೇರಕರ ವಿಧಾನ ಸೌಧ ಚಲೋ, ಬೆಂಗಳೂರಿನ ಚಿಕ್ಕಲಾಲ್ ಭಾಗ್ ನಿಂದ ಬೆಳಿಗ್ಗೆ 11.30 ಕ್ಕೆ ಮೆರವಣಿಗೆ ಆರಂಭ. ಸಂಘಟಕರು ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ಮತ್ತು ಡಿವೈಎಫ್‌ಐ
- **ಅಕ್ಟೋಬರ್ 10**
  ಡಿವೈಎಫ್‌ಐ ರಾಜ್ಯ ಸಮಾವೇಶ
  ಬಬ್ಬೂರು ಗಿಡ್ಡಣ್ಣ ಛತ್ರ, ಬೆಳಿಗ್ಗೆ 11 ಕ್ಕೆ
  ಉದ್ಘಾಟನೆ : ಕೆ.ಎಸ್.ಬಾಲಗೋಪಾಲ್, ಡಿವೈಎಫ್‌ಐ, ಅ.ಭಾ. ಜಂಟಿ ಕಾರ್ಯದರ್ಶಿ,
  ಅಧ್ಯಕ್ಷತೆ : ಕೆ.ಎನ್.ಉಮೇಶ್, ಡಿವೈಎಫ್‌ಐ ರಾಜ್ಯಾಧ್ಯಕ್ಷರು
- **ಅಕ್ಟೋಬರ್ 11**
  ಚಿಂತನ-ಮಂಥನ, ಸಮುದಾಯ ಬೆಂಗಳೂರು ಇವರಿಂದ
  'ರೈತರ ಆತ್ಮಹತ್ಯೆ-ಕಾರಣ-ಪರಿಹಾರೋಪಾಯ' ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಮಧ್ಯಾಹ್ನ 3 ಗಂಟೆಗೆ
- **ಅಕ್ಟೋಬರ್ 16 ರಿಂದ 19**
  ಸಿಐಟಿಯು ರಾಜ್ಯ ಸಮ್ಮೇಳನ
  ಉದ್ಘಾಟನೆ : ಡಾ. ಎಂ.ಕೆ.ಪಂಧೆ, ಅ.ಭಾ. ಪ್ರ.ಕಾರ್ಯದರ್ಶಿ, ಸಿಐಟಿಯು
  ಅಧ್ಯಕ್ಷತೆ : ಬಿ.ಮಾಧವ, ಕ. ರಾಜ್ಯಾಧ್ಯಕ್ಷರು, ಸಿಐಟಿಯು
  ಸ್ಥಳ : (ಕಾಂ. ಸೂರಿ ನಗರ), ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಮೈಸೂರು
- **ಅಕ್ಟೋಬರ್ 18**
  ದುಡಿಯುವ ಮಹಿಳೆಯರ ರಾಜ್ಯ ಸಮಾವೇಶ
  ಉದ್ಘಾಟನೆ : ಡಾ. ಹೇಮಲತಾ ಸಿಐಟಿಯು ಅ.ಭಾ. ಕಾರ್ಯದರ್ಶಿ
  ಸ್ಥಳ : (ಕಾಂ. ಸೂರಿ ನಗರ), ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಮೈಸೂರು


ಆತ್ಮಹತ್ಯೆಗಳ ನಡುವೆ ನಡೆದುಹೋದ ಸೋನಿಯಾ.....

ಕರ್ನಾಟಕದಲ್ಲಿ ಕಾಂಗ್ರೆಸ್ ಚುನಾವಣಾ ಜ್ವರ ಹತ್ತಿಸಿಕೊಂಡಿದೆ. ಪ್ರಸಕ್ತ ವಿಧಾನಸಭೆಯ ಅವಧಿ ಮುಗಿಯಲು ಕೆಲವು ತಿಂಗಳುಗಳಿರುವಾಗಲೇ ಮುಂದಿನ ವಧಿಯಲ್ಲಿಯೂ ಕಾಂಗ್ರೆಸ್ ಸರ್ಕಾರ ಅಧಿಕಾರ ಹಿಡಿಯಬೇಕೆಂಬುದು ಅದರ ನಿರ್ಧಾರ. ಅಷ್ಟು ಮಾತ್ರವಲ್ಲ ಸೋನಿಯಗಾಂಧಿ ಪ್ರಧಾನಿ ಪಟ್ಟ ಗಿಟ್ಟಿಸಬೇಕಾದರೂ ರಾಜ್ಯದಿಂದ ಹೆಚ್ಚಿನ ಎಂ.ಪಿ.ಗಳು ಬೇಕಾಗುತ್ತದೆ. ಹೀಗಾಗಿ ಕಾಂಗ್ರೆಸ್ ಪೂರ್ಣ ಪ್ರಮಾಣದಲ್ಲಿ ಈ ಕೆಲಸಕ್ಕೆ ದುಮುಕಿದೆ. ವೇಮಗಲ್ ಮತ್ತು ಹುನಗುಂದದಂತಹ ಉಪ ಚುನಾವಣೆಯಲ್ಲಿ ಗೆಲ್ಲಲು ಕಾಂಗ್ರೆಸ್ ಶತಾಯಗತಾಯ ಎಲ್ಲಾ ...ೀತಿಯ ವ್ಯವಹಾರ-ವಿದ್ಯೆ ...ಳಸಿತು. ಕೋಟಿಕೋಟಿ ...ಣ ನೀರಿನಂತೆ ಹರಿಯ ...ಡಲಾಯಿತು. ...ಪ್ರಸಕ್ತವಾಗಿ ರಾಜ್ಯ ...ರ್ಕಾರದ ದುರಾಡಳಿತದ ...ರುದ್ಧ ಜನರ ಅತೃಪ್ತಿ ಸ್ಫೋಟಗೊಳ್ಳದಂತೆ ಹಲವು ...ಟಕಗಳನ್ನು ಆಡಲಾಗುತ್ತಿದೆಯಲ್ಲದೇ ಕಾಂಗ್ರೆಸ್‌ಗೆ ...ಕ್ಯುಲರ್ ಪರ್ಯಾಯ ರೂಪುಗೊಳ್ಳದಂತೆ ತಂತ್ರ-...ತಂತ್ರಗಳನ್ನು ನಡೆಸಿರುವುದು ತಿಳಿದ ವಿಚಾರ

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಇಂತಹ ಹಲವಾರು ವರಸೆಗಳ ನಡುವಿನಲ್ಲೂ ಬಾಧಿತ ಜನತೆಯ ಅತೃಪ್ತಿ ಸ್ಫೋಟಗೊಳ್ಳುತ್ತಿದೆ. ಸರ್ಕಾರದ ನೀತಿಯಿಂದಾಗಿ ಜನಸಾಮಾನ್ಯರು ದಿವಾಳಿಯಾಗುತ್ತಿದ್ದಾರೆ. ರೈತರ ಆತ್ಮಹತ್ಯೆ ನಡೆದೇ ಇದೆ. ಸಾಂತ್ವನದ ಸಭೆಗಳು, ಉಪದೇಶಗಳು ಅರ್ಥಹೀನವೆಂಬುದು ಎದ್ದುಕಂಡಿದೆ. ತನ್ನ ಪಾಲಿನ ಕರ್ತವ್ಯವನ್ನು ಮಾಡದ ಹೊಣೆಗೇಡಿ, ನಿರ್ಲಜ್ಜ ಸರ್ಕಾರ ವಿನಾಶಕಾರಿ ನೀತಿಗಳನ್ನು ಕೈಬಿಡುತ್ತಿಲ್ಲ. ಆದರೆ ವಂಚಕ ನಾಟಕ ಮುಂದುವರಿಸಿದೆ:

ಮೊನ್ನೆ ಸೋನಿಯಾಗಾಂಧಿ ಮತ್ತೆ ಕರ್ನಾಟಕಕ್ಕೆ ಬಂದಿದ್ದರು. ಇದು ಇನ್ನೂ ತಿಂಗಳು ತುಂಬುವ ಒಳಗೆ ಎರಡನೇ 'ಮಿಂಚಿನ' ಭೇಟಿ! ರಾಜ್ಯ ಕಾಂಗ್ರೆಸ್ಸಿಗರು ಸೋನಿಯಾಗೆ ರಾಜ್ಯದ ಬಗೆಗಿನ ಮಮಕಾರದ ಪ್ರತೀಕವೆನ್ನುತ್ತಾರೆ! ಹೋದಸಲ ಬಂದದ್ದು ಬಿಸಿಯೂಟ, ಸ್ತ್ರೀಶಕ್ತಿ ಗುಂಪಿನ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಅವುಗಳನ್ನು ರಾಜಕೀಯಕ್ಕೆ ತಿರುಗಿಸಲು ಬಯಸಿದ್ದರು. ಆಡಳಿತದಲ್ಲಿ ಅನೇಕ ಕಪ್ಪುಚುಕ್ಕೆಗಳಿಂದ ಕೂಡಿದ ಕೃಷ್ಣ ಸರ್ಕಾರಕ್ಕೆ ಶಹಬ್ಬಾಸ್ ಹೇಳಲು ಹೆಣಗಿದ್ದರು. ಈ ಸಲ ಆತ್ಮಹತ್ಯೆಗೀಡಾದ ಕೆಲ ರೈತಕುಟುಂಬಗಳಿಗೆ ಸಾಂತ್ವನ ಹೇಳಿ, ಪರಿಹಾರ ಧನ ಒಂದೆರೆಡು ವಿತರಿಸಿ ಅಪಾರ ಕಾಳಜಿ ವಹಿಸುವುದು ಅವರ ಭೇಟಿ ಕಾರ್ಯಕ್ರಮ. ಇದೇನೇ ಹೇಳಿಕೊಂಡರೂ ಕೃಷ್ಣ ಸರ್ಕಾರದ ವೈಫಲ್ಯ ಮರೆಮಾಚಲು, ತಮ್ಮ ಹೊಣೆ ಜಾರಿಕೊಂಡು ಕೇಂದ್ರ ಸರ್ಕಾರದತ್ತ ಸಾಗಹಾಕಲು ಸೋನಿಯಾ ಮುಂದಾದರು. ಇಂತಹ ಹೇಳಿಕೆಯ ಹೋರಾಟ ಮಾಡುವ ಮೊದಲು ತಮ್ಮ ಪಾಲಿನ ಕರ್ತವ್ಯ ನೆರವೇರಿಸಿ ಕೇಂದ್ರ ಸರ್ಕಾರದೆದುರು ಆಗ್ರಹಿಸಲು ಧರಣಿ ಕುಳಿತುಕೊಳ್ಳಲು ಸಿದ್ಧರೇ ಇವರು? ಇದಕ್ಕೆ ಕಾರಣವಾದ ಜಾಗತೀಕರಣ-ಉದಾರೀಕರಣದ ನೀತಿ ಕೈಬಿಡುತ್ತಾರೆಯೇ?



ಜೆಡಿ(ಎಸ್)ನತ್ತ ಇನ್ನಷ್ಟು ನಾಯಕರು

ಜನತಾದಳದ ಬಣಗಳು ಒಗ್ಗೂಡದಂತೆ ...ಲವು ವರಸೆಗಳನ್ನು ಕಾಂಗ್ರೆಸ್-ಬಿಜೆಪಿ ...ಯತ್ನ ನಡೆಸಿರುವಾಗಲೂ ಅಖಿಲ ಭಾರತ ಪ್ರಗತಿಪರ ಜನತಾದಳದ ಇನ್ನೊಂದು ಪ್ರಮುಖ ಬಣ ಜನತಾದಳ (ಎಸ್) ನೊಂದಿಗೆ ವಿಲೀನವಾಗಲು ನಿರ್ಧರಿಸಿದೆ. ಮಾಜಿಸಚಿವ ಎಂ.ಪಿ. ಪ್ರಕಾಶ್‌ರೊಂದಿಗೆ ಒಟ್ಟು ಹತ್ತು ಜನ ಶಾಸಕರು ಒಳಗೊಂಡು ವಿಲೀನಕ್ಕೆ ಮುಂದಾಗಿದ್ದಾರೆ. ಇದು ಒಂದು ಸ್ವಾಗತಾರ್ಹ ಬೆಳವಣಿಗೆ.

ಉತ್ತರ ಕರ್ನಾಟಕ-ಹೈದ್ರಾಬಾದ್ ಕರ್ನಾಟಕದಲ್ಲಿ ಜನತಾದಳ (ಎಸ್) ದುರ್ಬಲವೆಂಬ ಸ್ಥಿತಿಯಿತ್ತು. ಆದರೆ ಈಚೆಗಿನ ಕೆಲವು ಬೆಳವಣಿಗೆಗಳು ಈ ಸ್ಥಿತಿಯನ್ನು ಬದಲಾಯಿಸುತ್ತಿದ್ದವು. ಇಂತಹ ಸಂದರ್ಭದಲ್ಲೇ ವಿಜಾಪುರದಲ್ಲಿ ದೇವೇಗೌಡರು ಹೇಳಿದರೆನ್ನಲಾದ ಒಂದು ಹೇಳಿಕೆಯನ್ನೇ ತಿರುಚಿ ವಿಕೃತಗೊಳಿಸಿ ಲಿಂಗಾಯತರು ಮತ್ತು ಒಕ್ಕಲಿಗರ ನಡುವೆ ಜೆಡಿ(ಎಸ್)ನ ಪ್ರಭಾವ-ಬೆಂಬಲ ಕುಗ್ಗಿಸಲು ಬಿಜೆಪಿ-ಕಾಂಗ್ರೆಸ್ ಪ್ರಯತ್ನಿಸಿದ್ದವು. ಇದಾದ ನಂತರವೂ ಈ ವಿಲೀನ ಗಣನೀಯವಾದುದು. ಉಳಿದವರು ಈ ದಿಶೆಯಲ್ಲಿ ಸೂಕ್ತ ಶ್ರಮ ವಹಿಸಬಹುದು.

ಉಪಚುನಾವಣೆಗಳ ಎಚ್ಚರಿಕೆ

ವೇಮಗಲ್ ಮತ್ತು ಹುನಗುಂದ ಉಪ ...ಚುನಾವಣೆಯಲ್ಲಿ ಎಬಿಜೆಡಿ ಮತ್ತು ಕಾಂಗ್ರೆಸ್ ...ತವುಗಿದ್ದ ಸ್ಥಾನ ಉಳಿಸಿಕೊಂಡಿವೆ. ...ಶಾಸಕರಾಗಿದ್ದ ಬೈರೇಗೌಡರು, ...ಕಾಶಪ್ಪನವರ್‌ರವರ ನಿಧನದಿಂದ ತೆರವಾಗಿದ್ದ ...ಸ್ಥಾನಗಳವು. ಈ ಎರಡೂ ಕ್ಷೇತ್ರಗಳಲ್ಲಿಯೂ ...ಚುನಾವಣಾ ಹೋರಾಟ ಯಾರಿಗೂ ...ರಾಯಸವಾಗಿರಲಿಲ್ಲ. ಮೃತರ ...ಕುಟುಂಬದವರನ್ನೇ ಕಣಕ್ಕಿಳಿಸಿ ಸಂತಾಪದ ...ಅಲೆಯ ಲಾಭ ಹೊಡೆಯಲು ...ಯತ್ನಿಸಿದ್ದಲ್ಲದೇ, ಅಪಾರ ಪ್ರಮಾಣದಲ್ಲಿ ಹಣ ...ಅಧಿಕಾರದ ದುರ್ಬಳಕೆ ನಡೆದಿದೆ. ...ವೇಮಗಲ್‌ನ ಕ್ಷೇತ್ರದಲ್ಲಿ ಸ್ವತಃ ಜನಾರ್ಧನ ...ಪೂಜಾರಿ ಮತ್ತಿತರೆ ಶಾಸಕ, ಸಚಿವರು ಠಿಕಾಣಿ ...ಹೂಡಿ ಚುನಾವಣಾ ಪ್ರಚಾರ ಕಾರ್ಯ...'ಜೋಡಿ' ಕೊಂಡರು.

ಇಷ್ಟಾಗಿಯೂ ವೇಮಗಲ್‌ನಲ್ಲಿ ಕಾಂಗ್ರೆಸ್ ...ಸೋತಿತು. ಇಲ್ಲಿ ದಳದ ಇತರ ಬಣಗಳು ...ಅಭ್ಯರ್ಥಿಯನ್ನು ಹಾಕಿರಲಿಲ್ಲ. ಮತಗಳ ...ಅಂತರ 13 ಸಾವಿರದಷ್ಟು. ಹಾಗೆಯೇ ...ಹುನಗುಂದದಲ್ಲಿ ಜನತಾದಳದ ಮೂರು ...ಬಣಗಳಾಗಿ ಸ್ಪರ್ಧಿಸಿದ್ದು ಕಾಂಗ್ರೆಸ್‌ಗೆ ...ವರದಾನವಾಯಿತು. ಈ ಜೆಡಿ ಪರಿವಾರದ ...ಮತಗಳು ಒಟ್ಟುಗೂಡಿದರೆ ಗೆದ್ದ ...ಅಭ್ಯರ್ಥಿಗಿಂತ ಹೆಚ್ಚಾಗುತ್ತದೆ. ...ಕಾಂಗ್ರೆಸ್-ಬಿಜೆಪಿ ವಿರೋಧಿ ಶಕ್ತಿಗಳ ಬಲ ...ಯುತಿಸಬೇಕು. ಅದೇವೇಳೆ ಹುನಗುಂದದಲ್ಲಿ ...ಬಿಜೆಪಿ ಎರಡನೇ ಸ್ಥಾನದಲ್ಲಿರುವ ...ಅಪಾಯಕಾರಿ ಬೆಳವಣಿಗೆಯೂ ಎಚ್ಚರಿಕೆಯ ...ಗಂಟೆಯಾಗಿದೆ. ಒಟ್ಟಿನಲ್ಲಿ ಕಾಂಗ್ರೆಸ್‌ಗೆ ...ಸಲ ಪ್ರತಿರೋಧವೊಡ್ಡ ಬೇಕೆಂಬುದನ್ನು ...ಗಮನಿಸಬೇಕು.

ದುಡಿವ ಜನರ ಪ್ರಾಣಮಿತ್ರನಿಗೆ ನಾಲ್ಕು ದಶಕಗಳ ಸಂಭ್ರಮವೀಗ

ದುಡಿವ ಜನರ ಪ್ರಾಣಮಿತ್ರನಿಗೀಗ 40 ವರುಷಗಳು. ಹೌದಾ! ಐಕ್ಯರಂಗಕ್ಕೆ ಮೂವತ್ತೊಂಬತ್ತು ತುಂಬಿತೆ? ಎಂದು ಕೇಳಿದರು ಹಲವು ಗೆಳೆಯರು. ಈ ಒಂದೊಂದು ವರುಷಗಳ ಹಿಂದಿಂದಕ್ಕೆ 40 ವರುಷಗಳ ಹಿಂದಕ್ಕೆ ನೆನಪುಗಳ ಮೆಲುಕು ಹಾಕಿದರು ಅನೇಕರು, ಹಿರಿಯರು. ಪತ್ರಿಕೆ ಆರಂಭಗೊಂಡು, ಸಾಗಿಬಂದ ಹಾದಿಯತ್ತ ಆ ನೋಟವೇ ನೆನಪುಗಳ ಮೆಲುಕೇ ಒಂದು ಪುಳಕ ಗೊಳಿಸುವ ಸಂಗತಿ. ಪತ್ರಿಕೆ ರೂಪು ಗೊಂಡದ್ದೇ ಒಂದು ಐತಿಹಾಸಿಕ ಜವಾಬ್ದಾರಿಯ ಗೊತ್ತುಗುರಿಗಳ ನಿರ್ವಹಣೆಗೆ. ಹಾಗಾಗಿ ಪತ್ರಿಕೆ ಪುಟಪುಟಗಳಲ್ಲಿ ಅರಳಿದ್ದು ಜನ ಚಳುವಳಿಯ, ಸಾಮೂಹಿಕ ಶ್ರಮದ ಸಾರ್ಥಕತೆಯ ಸತ್ವ. ನೀಡಿದ್ದು ಹೊಸ ಸಮಾಜದ ಸೃಷ್ಟಿಗೆ ಹೊಸ ದೃಷ್ಟಿ.



ಹಳೆಯ ಸಂಚಿಕೆಗಳ ಪುಟಗಳನ್ನು ತಿರುವಿದಾಗ ತೆರೆದುಕೊಂಡದ್ದು ಒಂದೆರೆಡು ಸಂಗತಿಗಳಲ್ಲ. ಇಡೀ ನಾಲ್ಕು ದಶಕಗಳ ರಾಜ್ಯದ, ರಾಷ್ಟ್ರದ, ಅಷ್ಟೇಕೇ ಪ್ರಪಂಚದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಂಘರ್ಷದ ಇತಿಹಾಸವೇ ತೆರೆದುಕೊಂಡಿದೆ. ಅಲ್ಲಿನ ವಸ್ತು-ವಿಚಾರ ಯಾವುದೂ ಹಳೆತೆಂಬಂತಿಲ್ಲ. ಅನುಭವದ, ಭವಿಷ್ಯದ ನಡೆಗಾರರಿಗೆ ಬುತ್ತಿಯಾಗಿದೆ. ಹೀಗಾಗಿ ಇದು ಕೇವಲ ಪತ್ರಿಕೆಯಲ್ಲ, ವರ್ಗ ಸಂಘರ್ಷದಲ್ಲಿ ಹೊಮ್ಮಿದ ಹೊಂಬೆಳಕು, ಕಂಬೆಳಕು.

ಹೀಗೆ ಈ ನಾಲ್ಕು ದಶಕಗಳಲ್ಲಿ ಪತ್ರಿಕೆ ಸಾಗಿಬಂದ ಹಾದಿ, ನೀಡಿದ ಕಾಣ್ಕೆಗಳು ಅನನ್ಯ. ಈ ಕುರಿತ ಹಲವು ವೈವಿಧ್ಯಮಯ ಬರಹಗಳನ್ನು ಮುಂದಿನ ಸಂಚಿಕೆಗಳಲ್ಲಿ ನೀಡುವ ನಿರ್ಧಾರ ನಮ್ಮದು.

ಅಕ್ಟೋಬರ್ 4, ಪತ್ರಿಕೆಯ ಹುಟ್ಟುಹಬ್ಬ. (1964 ರಲ್ಲಿ ಮೊದಲ ಸಂಚಿಕೆ ಮಂಗಳೂರಲ್ಲಿ ಹೊರಬಂತು) ಈ ಸಂಭ್ರಮದ ಸಂತೋಷ ಹಂಚಿಕೆ, ನಮ್ಮ-ನಿಮ್ಮಲ್ಲಿ ಪತ್ರಿಕೆ ಬೆಳೆಸುವ ಸಂಕಲ್ಪದೊಂದಿಗೆ.

ರೈತರಲ್ಲಿ ಆತ್ಮವಿಶ್ವಾಸ ಮೂಡಿಸುವ ಪರ್ಯಾಯ ನೀತಿಗಳಿಗಾಗಿ ಪಾದಯಾತ್ರೆ

ಕೃಷ್ಣ ಪ್ಯಾಕೇಜ್ - ಸೋನಿಯಾ ಪ್ಯಾಕೇಜ್ ಸುರಿಮಳೆ ಪತ್ರಿಕೆ-ಟಿವಿಗಳಲ್ಲಿ ಸರಿದಾಡುತ್ತಿದ್ದರೂ ಆಸ್ಥಾನದ ಬುದ್ಧಿಜೀವಿ, ಮನೋತಜ್ಞರ ಒಡ್ಡೋಲಗ ನಡೆದು, ಸಾಂತ್ವನದ ಸುರಿಮಳೆಗೈದರೂ ಕರ್ನಾಟಕದಲ್ಲಿ ರೈತರ ಆತ್ಮಹತ್ಯೆ ಸರಣಿ ಕೊನೆಗೊಂಡಿಲ್ಲ. ಬದಲಾಗಿ ಈ ದುರಂತ ಸ್ಥಿತಿಗೆ ತಳ್ಳಲು ಕಾರಣವಾದ ದಿವಾಳಿಖೋರ ನೀತಿಗಳನ್ನು ಕೈಬಿಡಲು ರಾಜ್ಯ ಹಾಗೂ ಕೇಂದ್ರ ಸರ್ಕಾರ ಸಿದ್ಧವಿಲ್ಲ. ಅದಕ್ಕೆ ಮನಸ್ಸು ಗುರಿ ಇಲ್ಲವೇ ಇಲ್ಲ.



ಇಂತಹ ಸಂದರ್ಭದಲ್ಲಿ ಆತ್ಮಹತ್ಯೆಯಲ್ಲ-ಸಂಘರ್ಷ ಎಂಬ ಆಶಯದೊಂದಿಗೆ, ಕೃಷಿಕರಲ್ಲಿ ಆತ್ಮವಿಶ್ವಾಸ ತುಂಬುವ, ಪರ್ಯಾಯ ನೀತಿಗಳಿಗೆ ಆಗ್ರಹಿಸಿ ಕೇಂದ್ರ-ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಮಹಾತ್ಮಗಾಂಧಿ ಹುಟ್ಟಿದ ದಿನವಾದ ಅಕ್ಟೋಬರ್ 2 ರಂದು ನಾಡಿನಾದ್ಯಂತ ವಿವಿಧ ವಿಭಾಗಗಳ ಪ್ರಮುಖರ, ಹೋರಾಟಗಾರರ, ಸಂಘಟನೆಗಳ ಪಾದಯಾತ್ರೆ ಯಶಸ್ವಿಯಾಗಿ ನಡೆಯಿತು.

ಬೆಂಗಳೂರಿನಲ್ಲಿ ಉರಿಬಿಸಿಲು ಲೆಕ್ಕಿಸದೇ ಮಹಾತ್ಮಗಾಂಧಿ ಪ್ರತಿಮೆ ಬಳಿ ಸೇರಿದ


ಪುಟ 11 ಕ್ಕೆ

ಸಿಐಟಿಯು ಬೆಂಗಳೂರು ಜಿಲ್ಲಾ ಸಮ್ಮೇಳನ

ದುಡಿಯುವ ವರ್ಗದ ಮೇಲಿನ ಧಾಳಿ ಎದುರಿಸಿ ಹೋರಾಡಲು ನಿರ್ಧಾರ

ಕೇಂದ್ರ ಕಾರ್ಮಿಕ ಸಂಘಟನೆಯಾದ ಸಿಐಟಿಯುವಿನ ಬೆಂಗಳೂರು 7 ನೇ ಜಿಲ್ಲಾ ಸಮ್ಮೇಳನ ಸೆಪ್ಟೆಂಬರ್ 27, 28- 2003 ರಂದು ಯಶಸ್ವಿಯಾಗಿ ನಡೆಯಿತು. 30 ಸಂಘಗಳ ಸದಸ್ಯರನ್ನು ಪ್ರತಿನಿಧಿಸಿ 200 ಪ್ರತಿನಿಧಿಗಳು






ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸೆಪ್ಟೆಂಬರ್ 27 ರಂದು ಸಿಐಟಿಯುವಿನ ಹಿರಿಯ ಮುಖಂಡರಾದ ಕಾಂ.ಪಿ.ಕೆ.ಸುಬ್ರಮಣಿ ಯವರು ಧ್ವಜಾರೋಹಣವನ್ನು ನೆರವೇರಿಸಿ ಮಾತನಾಡಿ ಕಾರ್ಮಿಕ ಸಂಘಗಳು ಇನ್ನು ಮುಂದಿನ ದಿನಗಳಲ್ಲಿ ಕೇವಲ ವೇತನ ಹೆಚ್ಚಳ ಸೌಲತ್ತುಗಳಿಗಾಗಿ ಹೋರಾಟ ನಡೆಸಿದರೆ ಸಾಲದು, ದೇಶದ ಐಕ್ಯತೆ

25 ವರ್ಷಗಳಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ಪ್ರಮುಖ ಕಾರ್ಮಿಕ ಸಂಘವಾಗಿ ತನ್ನ ತ್ಯಾಗ, ಬಲಿದಾನಗಳಿಂದ ಬೆಳೆದಿದೆ. ತನ್ನ ಸಮರಧೀರ ಹೋರಾಟಗಳನ್ನು ಮುಂದುವರೆಸಬೇಕು, ಕಾರ್ಮಿಕ ವರ್ಗದ ಐಕ್ಯತೆಯನ್ನು ಸಾಧಿಸಬೇಕೆಂದರು.

ಸಮ್ಮೇಳನದ ಉದ್ಘಾಟನೆ ಮಾಡಿದ ರಾಜ್ಯಾಧ್ಯಕ್ಷರಾದ ಬಿ.ಮಾಧವರವರು ಇವತ್ತಿನ ಕೇಂದ್ರ ಸರ್ಕಾರ ಸಾಮ್ರಾಜ್ಯಶಾಹಿಗಳ



ಮುಂದುವರೆದ ರಾಷ್ಟ್ರಗಳ ಯುದ್ಧಕೋರತನಕ್ಕೆ ಬೆಂಬಲ ನೀಡುತ್ತಿವೆ. ಡಬ್ಲ್ಯು.ಟಿ.ಓ, ಐಎಂಎಫ್ ವಿಶ್ವಬ್ಯಾಂಕ್ ಶರತ್ತುಗಳಿಗೆ ಒಪ್ಪಿ ಸಾರ್ವಜನಿಕ ಕೈಗಾರಿಕೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಹಲವಾರು ಕಾರ್ಖಾನೆಗಳನ್ನು ಮುಚ್ಚಲಾಗಿದೆ.

ಇದರಿಂದ ನಿರುದ್ಯೋಗ ಹೆಚ್ಚಾಗುತ್ತಿದೆ. ಅಲ್ಲದೆ ಪಂಚಾಯತ್‌ರಾಜ್ ಹೆಸರಿನಲ್ಲಿ ಸರ್ಕಾರ ಮಾಡಬೇಕಿದ ಹಲವಾರು ಕೆಲಸಗಳನ್ನು ಪಂಚಾಯತಿಗಳಿಗೆ ವರ್ಗಾಯಿಸಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ನೌಕರರನ್ನು ಮನೆಗೆ ಕಳುಹಿಸುವ ಪ್ರಯತ್ನ ಮಾಡಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳಾದ ಪಂಚಾಯತ್ ವ್ಯವಸ್ಥೆಯನ್ನು ಪಶ್ಚಿಮ ಬಂಗಾಳದ ಸರ್ಕಾರ ಪ್ರಗತಿಪರವಾಗಿ ಉಪಯೋಗಿಸಿಕೊಂಡು ಜನ ಸಾಮಾನ್ಯರಿಗೆ ನೆರವು ನೀಡಿದೆ. ಇಂತಹ

ನೂತನ ಪದಾಧಿಕಾರಿಗಳು

ಅಧ್ಯಕ್ಷರು	: ಆರ್.ಶ್ರೀನಿವಾಸ್
ಉಪಾಧ್ಯಕ್ಷರು	: ಕೆ.ಎಸ್.ಸುಬ್ರಮಣ್ಯ, ಹೆಚ್.ಎನ್.ಗೋಪಾಲಗೌಡ, ಇ.ಕೆ.ಎನ್.ರಾಜನ್ ಗೋಪಾಲಕೃಷ್ಣ, ಸುಕುಮಾರನ್ ಪಿಳ್ಳೆ
ಪ್ರಧಾನ ಕಾರ್ಯದರ್ಶಿ	: ಮೀನಾಕ್ಷಿ ಸುಂದರಂ
ಕಾರ್ಯದರ್ಶಿಗಳು	: ಲೀಲಾವತಿ, ರಾಮಚಂದ್ರ, ಗಂಗಣ್ಣ, ಚಂದನ್, ಶಿವಶಂಕರ್ ಹೆಚ್.ಜಿ.ಶ್ರೀನಿವಾಸ್ ಮೂರ್ತಿ,
ಖಜಾಂಚಿ	: ಆರ್.ಡಿ.ಮೆಲ್ಕಿಯೋರ್

48 ಸದಸ್ಯರಿರುವ ಜಿಲ್ಲಾ ಸಮಿತಿ ರಚಿಸಲಾಯಿತು.

ಸಂರಕ್ಷಣೆ ಹಾಗೂ ದುಡಿಯುವ ಜನರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ಮಾಡಬೇಕಾಗಿದೆ. ದೇಶದ ಜನರ ರಕ್ಷಣೆಗಾಗಿ ನಡೆಯುವ ಹೋರಾಟದಲ್ಲಿ ಕಾರ್ಮಿಕ ವರ್ಗದ ಪಾತ್ರ ಮುಖ್ಯವಾದದ್ದು, ಸಿಐಟಿಯು ಬೆಂಗಳೂರು ಜಿಲ್ಲೆಯಲ್ಲಿ 1978 ರಲ್ಲಿ ತನ್ನ ಮೊದಲನೇ ಸಮ್ಮೇಳನ ನಡೆಸಿತು. ಕಳೆದ


ಅಡಿಯಾಳಂತೆ ವರ್ತಿಸುತ್ತಿದೆ. ಅಮೇರಿಕದಂತಹ ಬೆಳೆದ ರಾಷ್ಟ್ರಗಳ ಹಿತ ಬಯಸುವ ಜಾಗತೀಕರಣದ ನೀತಿಗಳನ್ನು ವಿಶ್ವದ ದುಡಿಯುವ ವರ್ಗ ಜನಸಾಮಾನ್ಯರು ವಿರೋಧಿಸುತ್ತಿದ್ದಾರೆ. ಆದರೆ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ನೀತಿಗಳನ್ನು ಜಾರಿ ಮಾಡುತ್ತಲಿವೆ.


ಜನಪರ ಅಂಶಗಳನ್ನು ಅನುಭವಗಳನ್ನು ಗಣನೆ ತೆಗೆದುಕೊಳ್ಳದೆ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಕೇಂದ್ರ ಹಾಗೂ ಕರ್ನಾಟಕ ರಾಜ್ಯ ಸರ್ಕಾರಗಳು ಜಾರಿಗೆ ತರುತ್ತಲಿವೆ ಎಂದು ಟೀಕಿಸಿದರು.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗೆ ಒತ್ತಾಯಿಸಿ ಖಾಸಗೀಕರಣ ಹಾಗೂ ಮುಚ್ಚುವಿಕೆಯನ್ನು ಖಂಡಿ ನಿರ್ಣಯ ಅಂಗೀಕರಿಸಲಾಯಿತು. ಕಾರ್ಮಿ ಕಾನೂನುಗಳಲ್ಲಿ ಮಾಲೀಕರ ಪರ ತಿದ್ದುಪ ವಿರೋಧಿಸಿ, ಬಿ.ಪಿ.ಎಲ್ ಕಾರ್ಮಿಕ ಮೇಲಿನ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯ ಒತ್ತಾಯಿಸಿ, ವೈದ್ಯಕೀಯ ಕ್ಷೇತ್ರದ ಕಾಳಸಂತೆ ವ್ಯಾಪಾರ, ವಿಷಪೂರಿ ಔಷಧಿಗಳನ್ನು ಉತ್ಪಾದನೆ ಮಾಡು ಹಾಗೂ ಮಾರಾಟ ಮಾಡುವವ ಮೇಲೆ ಕಠಿಣ ಕ್ರಮಕ್ಕೆ ಒತ್ತಾಯಿ ಪಂಚಾಯತಿ ನೌಕರರ ನ್ಯಾಯಯು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿ ಬೀಡಿ, ಅಗರಬತ್ತಿ, ಪವರ್‌ಲೂಂ ಒಳಗೊ ಅಸಂಘಟಿತ ಕ್ಷೇತ್ರಗಳಿಗೆ ಕನಿಷ್ಠ ವೇತನ ಪುನ ವಿಮರ್ಶೆಗೆ ಒತ್ತಾಯಿಸಿ, ದುಡಿಯುವ ಮಹಿಳೆಯ ರಕ್ಷಣೆಗೆ ಒತ್ತಾಯಿಸಿ ಇನ್ನಿತರ ಹಲವಾರು ಪ್ರಮು ನಿರ್ಣಯಗಳನ್ನು ಅಂಗೀಕರಿಸ ಲಾಯಿತು.

ಸಮ್ಮೇಳನದ ಅಧ್ಯಕ್ಷತೆಯನ್ನು ಉಪಾಧ್ಯಕ್ಷರ ಕೆ.ಎಸ್.ಸುಬ್ರಮಣ್ಯ ವಹಿಸಿದ್ದರು. ಸ್ವಾಗತ ಲೀಲಾವತಿ ಮಾಡಿದರು. ವಂದನಾರ್ಪಣೆಯ ನೂತನ ಅಧ್ಯಕ್ಷರಾದ ಆರ್.ಶ್ರೀನಿವಾ ಮಾಡಿದರು.

ಶ್ರದ್ಧಾಂಜಲಿ





ಕಾಮ್ರೇಡ್ ಆರ್.ರಂಗಸ್ವಾಮಿಯವರು ಸಿಪಿಐ(ಎಂ) ಪಕ್ಷದ ಶ್ರೀರಾಮಪುರ ಶಾಖೆಯ ಸದಸ್ಯರಾಗಿದ್ದು ಮಿನರ್ವಮಿಲ್ ಕಾರ್ಮಿಕರಾಗಿ ಹಲವು ವರುಷಗಳ ಕಾಲ ಹತ್ತಿಗಿರಣಿ ಕಾರ್ಮಿಕ ಸಂಘ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದರು. ಕಾಂ. ರಂಗಸ್ವಾಮಿಯವರು ರಸ್ತೆ ಅಫಘಾತದಲ್ಲಿ ನಿಧನರಾದರು.

ಯುವಜನ ಸಂಘಟನೆ ಕಟ್ಟಿ ಹಲವು ಹೋರಾಟಗಳಿಗೆ ನೇತೃತ್ವ ನೀಡಿದ್ದ ಅವರು ಕೆಲಸದಿಂದ ನಿವೃತ್ತರಾಗಿ ಸೇಲ್ಸ್‌ಮನ್ ಆಗಿದ್ದರು. ಸೆಪ್ಟೆಂಬರ್ 18 ರಂದು ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ರಸ್ತೆ ಅಪಘಾತದಲ್ಲಿ ದುರ್ಮರಣ ಹೊಂದಿದರು.

ಕಾಮ್ರೇಡ್ ರೇವಣ್ಣನವರು ಸಿಪಿಐ(ಎಂ) ಪಕ್ಷದ ಮಿನರ್ವಮಿಲ್ ಶಾಖೆಯ ಸದಸ್ಯರಾಗಿದ್ದು, ಮೈಸೂರು ಮಿಲ್ (ರಾಜಮಿಲ್) ಮತ್ತು ಮಿನರ್ವ ಮಿಲ್ ಹತ್ತಿಗಿರಣಿ ಕಾರ್ಮಿಕ ಸಂಘದ ಮುಖಂಡರಾಗಿದ್ದರು ಹತ್ತಿಗಿರಣಿ ಕಾರ್ಮಿಕರ ಹೋರಾಟದಲ್ಲಿ ಹಲವು ದಶಕಗಳ ಕಾಲ ಮುಂಚೂಣಿಯಲ್ಲಿದ್ದು ಹೋರಾಟ ನಡೆಸಿದಂತವರು.

ಸೆಪ್ಟೆಂಬರ್ 21 ರಂದು ಅನಾರೋಗ್ಯದಿಂದ ಅವರು ನಿಧನರಾದರು.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಶ್ರೀರಾಮಪುರ ಪ್ರದೇಶಸಮಿತಿ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಶ್ರೀರಾಮಪುರ ಪ್ರದೇಶಸಮಿತಿಗಳು ಮತ್ತು 'ಐಕ್ಯರಂಗ' ಅಗಲಿದ ಸಂಗಾತಿಗಳಿಗೆ, ಅವರ ಕುಟುಂಬಕ್ಕೆ ತೀವ್ರ ಶ್ರದ್ಧಾಂಜಲಿ ಸಲ್ಲಿಸಿವೆ.

ಮೇರಿ ದೇವಾಸಿಯಾ 10 ನೇ ಸ್ಮರಣಾ ದಿನಾಚರಣೆ

ರಾಜ್ಯ ಸರ್ಕಾರಿ ನೌಕರರ ಸಂಘಟನೆಯ ನಾಯಕಿ ಕಾಂ.ಮೇರಿ ದೇವಾಸಿಯಾ ನಿಧನರಾಗಿ 10 ವರ್ಷಗಳಾದ ಸಂದರ್ಭದಲ್ಲಿ ಅವರ ಸ್ಮರಣಾ ದಿನವನ್ನು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಗುಲ್ಬರ್ಗಾ ಜಿಲ್ಲಾ ಶಾಖೆಯ ಆಶ್ರಯದಲ್ಲಿ, ಗುಲ್ಬರ್ಗಾ ನಗರದ ಜನರಲ್ ಆಸ್ಪತ್ರೆ ಸಭಾಂಗಣದಲ್ಲಿ ದಿನಾಂಕ 13.09.2003 ರಂದು ಏರ್ಪಡಿಸಲಾಗಿತ್ತು ಸಮಾರಂಭದಲ್ಲಿ ಸುಮಾರು 300 ನೌಕರರು ಭಾಗವಹಿಸಿದ್ದರು. ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಸಚ್ಚಿದಾನಂದಮೂರ್ತಿಯವರು ಮೇರಿ ದೇವಾಸಿಯಾರವರ ಹೋರಾಟದ ಬದುಕನ್ನು ಹಾಗೂ ನೌಕರರ ಹಿತಕ್ಕಾಗಿ ಅವರು ಕಟ್ಟಿದ ಸಂಘ ಶಕ್ತಿಯನ್ನು ಸ್ಮರಿಸಿದರು.

'ಒಕ್ಕೂಟ'ದ ಕಾರ್ಯದರ್ಶಿಗಳಾದ ಮಲ್ಲಯ್ಯ ಸ್ವಾಮಿಯವರು ಮಾತನಾಡುತ್ತಾ ಮೇರಿ ದೇವಾಸಿಯಾರವರ ಕಾಲದಲ್ಲಿ ನಡೆದಂತ ಹೋರಾಟಗಳು ಇಂದಿನ ದಿನಗಳಲ್ಲಿ ಅತಿ ಅವಶ್ಯಕವಾಗಿದೆ. ನೌಕರರು ಆ ಕಾಲದಲ್ಲಿ ಗಳಿಸಿದ್ದ ಸೌಲಭ್ಯಗಳನ್ನು ಇಂದು ಒಂದೊಂದಾಗಿ ಕಳೆದುಕೊಳ್ಳುತ್ತಿರುವುದರಿಂದ ಮೇರಿ ದೇವಾಸಿಯಾ ಇಂದು ಹೆಚ್ಚು ಪ್ರಸ್ತುತರಾಗುತ್ತಾರೆ ಎಂದು ತಿಳಿಸಿದರು.

ಒಕ್ಕೂಟದ ಕಾರ್ಯದರ್ಶಿಯವರಾದ ಎಸ್.ರೇಣುಕಾರಾಧ್ಯರವರು ಮೇ ದೇವಾಸಿಯಾರವರೊಂದಿಗಿನ ತಮ ಒಡನಾಟವನ್ನು ಸ್ಮರಿಸುತ್ತಾ, ರಾಜ್ಯ ಸರ್ಕಾ ನೌಕರರಿಗೆ ಮೊದಲನೇ ವೇತನ, ಕೇಂದ್ರ ಸರ್ಕಾ ನೌಕರರಿಗೆ ಸಮನಾದ ತುಟ್ಟಿಭತ್ಯೆಗಳ ಪಡೆಯಲು ಸಾಧ್ಯವಾಗಿದ್ದು ಮೇ ದೇವಾಸಿಯಾರವರ ಹೋರಾಟ ಮತ್ತು ತ್ಯಾ ಫಲವಾಗಿ ಎಂದು ತಿಳಿಸಿದರು. ಅಖಿಲ ಭಾ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಸ್ಥಾ ಉಪಾಧ್ಯಕ್ಷರಾಗಿ ರಾಜ್ಯ ಸರ್ಕಾರಿ ನೌಕ ಸಂಘಟನೆಯ ದೇಶಮಟ್ಟದಲ್ಲಿ ಅದರ ಸ್ಥಾ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದನ್ನೂ ಸ್ಮರಿಸಿದರು. ಅವರ ಜೀವನ, ಸೇ ಹೋರಾಟದ ಅನೇಕ ವಿಚಾರಗಳನ್ನು ನೌಕರ ಮನ ಮುಟ್ಟುವಂತೆ ವಿವರಿಸಿ, ರಾಜ್ಯ ಸರ್ ನೌಕರರು ಮತ್ತೊಮ್ಮೆ ಬಲಿಷ್ಠ ಸಂಘಟನೆ ಕಟ್ಟಲು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ಗುಲ್ಬರ್ಗಾ ಜಿ ಒಕ್ಕೂಟದ ಅಧ್ಯಕ್ಷರಾದ ಕೆ.ಪ್ರಕಾಶ್ ವಹಿಸಿದ ಗೌರವ ಅಧ್ಯಕ್ಷರಾದ ಅಣ್ಣಾರಾವ್ ನಂದಿಕ ಹಾಗೂ ಒಕ್ಕೂಟದ ಮುಂದಾಳುಗಳಾದ ರಾಜ್ ವೈ.ಆರ್.ಕಿರಣಗಿ, ಮಹಾ ಮುಂತಾದವರು ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಮುಷ್ಕರದ ಹಕ್ಕು ಪು ಪ್ರತಿಗಳನ್ನು ಮಾರಾಟ ಮಾಡಲಾಯಿತು.



ಸೆಪ್ಟೆಂಬರ್ 12, ರಂದು ಡಿವೈಎಫ್ ಹಾಸನ ಜಿಲ್ಲಾ ಕಾರ್ಯ ರಾಜಕುಮಾರ್ ಎಸ್‌ಎಫ್‌ಐನ ಜಿಲ್ ಜಮುನಾ ವಿವಾಹವಾ ಅಂತರಜಾತೀಯ ವಿವಾಹ ಶುಭಾಶಯ

ಇಸ್ರೇಲ್ ಮತ್ತು ಅಮೆರಿಕಾಗಳು ಪ್ಯಾಲೆಸ್ಟೇನ್ ಹಾಗೂ ಇರಾಕ್‌ನಲ್ಲಿ ನಡೆಸಿರುವ ಭಯೋತ್ಪಾದನೆಯ ವಿಷಯದಲ್ಲಿ ಇಡೀ ವಿಶ್ವಸಂಸ್ಥೆಯಲ್ಲಿ ಚರ್ಚೆ ನಡೆಸಿರುವಾಗ ಭಾರತ ತೆಗೆದುಕೊಂಡ ನಿಲುವೇನು? ಇಂದಿನ ನಿರ್ಣಾಯಕ ಘಟ್ಟದಲ್ಲಿ ವಾಜಪೇಯಿ ಸರ್ಕಾರ ಭಾರತದ ಹಿತಗಳನ್ನು ಕಾಯಬಲ್ಲದೇ?... ಅದರ ಒಂದು ಅವಲೋಕನ

ಕೋಮುವಾದಿ ಅಜೆಂಡಾ ಭಾರತದ ವಿದೇಶಾಂಗ ನೀತಿಯಾಗಿರಬೇಕೆ?



ಅಮೆರಿಕಾದ ಅಟ್ಟಹಾಸ ಮರೆಸುವ ಅರ್ಭಟ!

ಇತ್ತೀಚೆಗೆ ಮುಕ್ತಾಯಗೊಂಡ ವಿಶ್ವಸಂಸ್ಥೆಯ ವಾರ್ಷಿಕ ಸಾಮಾನ್ಯ ಸಭೆಯು ಹಲವಾರು ಪಾಠಗಳನ್ನು ಕಲಿಸಿದ ತರಗತಿಯಂತಾಗಿತ್ತು.

ಇರಾಕಿನಲ್ಲಿ ಇಕ್ಕಟ್ಟಿನ ಪರಿಸ್ಥಿತಿ ಎದುರಿಸುತ್ತಿರುವ ಅಮೇರಿಕಾದ ಪಡೆಗಳ ನೆರವಿಗೆ ದಾವಿಸಲು ಅಮೇರಿಕಾದ ಅಧ್ಯಕ್ಷರು ವಿಶ್ವಸಂಸ್ಥೆ ಮತ್ತು ಅಂತರಾಷ್ಟ್ರೀಯ ಸಮುದಾಯಕ್ಕೆ ಮಾಡಿದ ಮನವಿಗೆ ನಿರಾಶೆಯ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಇರಾಕಿನ ಆಕ್ರಮಣಕ್ಕೆ ವಿಶ್ವಸಂಸ್ಥೆಯ ಒಪ್ಪಿಗೆ ಪಡೆದುಕೊಳ್ಳಲು ಬುಷ್‌ರವರು ಇಂತಹ ಪ್ರಯತ್ನ ನಡೆಸುತ್ತಿದ್ದಾರೆ ಎಂಬುದು ಜಗಜ್ಜಾಹೀರಾಯಿತು. ಈಗ 1,29,000 ಅಮೇರಿಕಾದ ಪಡೆಗಳು ಇರಾಕಿನಲ್ಲಿವೆ. ಯುದ್ಧದ ಸಮಯಕ್ಕಿಂತ ಅಧಿಕೃತವಾಗಿ ಯುದ್ದದ ಅಂತ್ಯವನ್ನು ಘೋಷಿಸಿದ ನಂತರ ಹೆಚ್ಚಿನ ಸೈನಿಕರು ಸತ್ತಿದ್ದಾರೆ. ಬುಷ್ ಆಡಳಿತವು ವಿಶ್ವಸಂಸ್ಥೆಯಿಂದ ಮತ್ತು ಇತರೆ ಸದಸ್ಯ ರಾಷ್ಟ್ರಗಳಿಂದ ಹಣಕಾಸಿನ ನೆರವು ಮತ್ತು ಸೈನಿಕ ನೆರವನ್ನು ಯಾಚಿಸುತ್ತಿದೆ. ಅಮೇರಿಕಾದ ವಿಶ್ವಾಸನೀಯ ಗೆಳೆಯರೂ ಕೂಡ ಈ ಪಡೆಗಳಿಗೆ ನೀರಸ ಪ್ರತಿಕ್ರಿಯೆ ತೋರಿದ್ದಾರೆ. ಈ ವರ್ಷದ ಆರಂಭದಲ್ಲಿ ಅಂದರೆ ಮಾರ್ಚ್ ತಿಂಗಳಲ್ಲಿ ಬುಷ್‌ರವರು ಅತ್ಯಂತ ಅಹಂಕಾರದಿಂದ ವಿಶ್ವಸಂಸ್ಥೆ ತನ್ನ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಹೇಳಿಕೆ ನೀಡಿ ಏಕಪಕ್ಷೀಯವಾಗಿ ಇರಾಕಿನ ಮೇಲೆ ಯುದ್ಧ ಘೋಷಿಸಿತ್ತು. ಆದರೆ ಅಮೇರಿಕಾವು ಈಗ ವಿಶ್ವಸಂಸ್ಥೆಯ ರಾಜಕೀಯ ಪಾತ್ರವನ್ನು ಇರಾಕಿನಲ್ಲಿ ಸಂವಿಧಾನವನ್ನು ಅಬಿವೃದ್ಧಿಗೊಳಿಸಲು ಮತ್ತು ಸಾರ್ವಜನಿಕ ಸೇವಕರನ್ನು ತರಬೇತಿಗೊಳಿಸಲು ಮತ್ತು ಮುಕ್ತ ಹಾಗೂ ನ್ಯಾಯಸಮ್ಮತ್ರ ಚುನಾವಣೆ ನಡೆಸಲು ಬಯಸುತ್ತಿದೆ. ವಾಸ್ತವವಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾದ ಕೋಫಿ ಅನ್ನಾನ್‌ರವರೇ ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿಯನ್ನು ಕಟುವಾಗಿ ಟೀಕಿಸಿದ್ದಾರೆ. ಅನ್ನಾನ್‌ರವರ ಕೊನೆಯ ಕ್ಷಣಗಳಾಗಿರುವುದರಿಂದ ಅವರು ಈ ರೀತಿ ಟೀಕಿಸುತ್ತಿದ್ದಾರೆ ಎಂದು ಕೆಲವರು ಮೂಗು ಮುರಿಯಬಹುದು. ಯಾರನ್ನೂ ಹೆಸರಿಸದೆ ಅನ್ನಾನ್‌ರವರು ಬಲತ್ಕಾರದಿಂದ ಬಲಪ್ರಯೋಗ ನಡೆಸುವುದು ಕಳೆದ 58 ವರ್ಷಗಳಿಂದ ಕಾಪಾಡಿಕೊಂಡು ಬಂದಿರುವ ಜಾಗತೀಕ ಶಾಂತಿ ಮತ್ತು ಸ್ಥಿರತೆಯ ಮೂಲಭೂತ ತತ್ವಗಳಿಗೆ ಗಂಭೀರ ಸವಾಲೊಡ್ಡುತ್ತವೆ ಎಂದು ಹೇಳಿದ್ದಾರೆ.

ಬುಶ್ ನಾಟಕ?

ಫ್ರಾನ್ಸಿನ ಅಧ್ಯಕ್ಷರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿ ಇರಾಕಿನ ಜನತೆಗೆ ಮತ್ತು ವಿಶ್ವಸಂಸ್ಥೆಗೆ ರಾಜಕೀಯ ಪರಮಾಧಿಕಾರ ನೀಡಬೇಕು ಎಂದು ಕರೆ ನೀಡಿದಾಗ ಸ್ಫೂರ್ತಿಯುತ ಪ್ರತಿಕ್ರಿಯೆ ಕಂಡುಬಂತು. ಹಲವಾರು ಮಾಧ್ಯಮಗಳು ಸಮೀಕ್ಷೆ ನಡೆಸಿ ಬುಷ್‌ರವರ ಜನಪ್ರೀಯತೆ ಶೇ.50 ರಷ್ಟು ಕುಸಿದಿರುವುದನ್ನು ತೋರಿಸಿದ ಮೇಲೆ ಇರಾಕಿನ ಆಕ್ರಮಣಕ್ಕೆ ವಿಶ್ವಸಂಸ್ಥೆಯ ಅಂಗೀಕಾರ ಪಡೆಯಲು ಬುಷ್ ಇಂತಹ ನಾಟಕವಾಡುತ್ತಿದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಅಮೇರಿಕಾದ ಪಾತ್ರ ಕುರಿತು ಸಾಮಾನ್ಯ ಸಭೆ ನೀಡಿದ ಅಭಿಪ್ರಾಯ ಅಮೇರಿಕಾಕ್ಕಾದ ಮತ್ತೊಂದು ಹಿನ್ನಡೆ. ಯಾಸರ್ ಅರಾಫತ್ ರವರನ್ನು ಪದಚ್ಯುತಗೊಳಿಸಲು ಇಸ್ರೇಲ್‌ನ ತಂತ್ರಗಳನ್ನು ಅಮೇರಿಕಾ, ಇಸ್ರೇಲ್, ಮೈಕ್ರೋನೇಷಿಯಾ ಮತ್ತು ಮಾರ್ಷಲ್ ದ್ವೀಪಗಳನ್ನು ಹೊರತುಪಡಿಸಿ ಇಡೀ ವಿಶ್ವಸಂಸ್ಥೆ ಬಲವಾಗಿ ವಿರೋಧಿಸಿತು. ಬುಷ್‌ರವರು 'ರೋಡ್‌ಮ್ಯಾಪ್' ತಂತ್ರವು ಇಸ್ರೇಲ್‌ನ ಭಯೋತ್ಪಾದನೆ ಮತ್ತು ಬಲಪ್ರಯೋಗದಿಂದ ವ್ಯತಿರಿಕ್ತ ಪರಿಣಾಮವನ್ನು ಬೀರಿತು. ಇದಕ್ಕೂ ಮೊದಲು ಪ್ಯಾಲೇಸ್ತೇನಿಂದ ಇಸ್ರೇಲ್ ಕಾಲ್ತೆಗೆಯಬೇಕು ಎಂಬ ವಿಶ್ವಸಂಸ್ಥೆ ನಿರ್ಣಯಕ್ಕೆ ಅಮೇರಿಕಾ 'ವಿಟೋ' ನೀಡಿತ್ತು. ಇದರಿಂದ ಪ್ಯಾಲೇಸ್ತೇನಿಯರಿಗೆ ತಾಯ್ನೆಲವನ್ನು ನಿರಾಕರಿಸುತ್ತಿರುವ ಇಸ್ರೇಲಿನ ಯತ್ನಗಳಿಗೆ ಅಮೇರಿಕಾ ಕುಮ್ಮಕ್ಕೂ ನೀಡುತ್ತಿದೆ ಎಂಬುದು ಸ್ಪಷ್ಟವಾಯಿತು.

ವಿಶ್ವಸಂಸ್ಥೆಯಲ್ಲಿ ವಾಜಪೇಯಿ

ಈ ವಿಚಾರದಲ್ಲಿ **ವಾಜಪೇಯಿ ನೇತೃತ್ವದ ಸರ್ಕಾರದ ಧೋರಣೆಗಳು ವಿಶ್ವಸಂಸ್ಥೆಯ ಬಹುಸಂಖ್ಯಾತರ ಭಾವನೆಗಳಿಗೆ ವಿರುದ್ಧವಾಗಿದ್ದು, ಅಮೇರಿಕಾ ಸಾಮ್ರಾಜ್ಯಗಳಿಗೆ ಗುಲಾಮತನ ತೋರುವುದನ್ನು ಸಾಬೀತುಪಡಿಸಿದವು.**

ಈ ಸರ್ಕಾರ ಕಲಿಯಬೇಕಿರುವ ಮತ್ತೊಂದು ಪಾಠವೆಂದರೆ ಅಮೇರಿಕಾದ ನೆರವನ್ನು ಪಡೆದು ಭಾರತ- ಪಾಕಿಸ್ತಾನದ ನಡುವಿನ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು. ಪಾಕಿಸ್ತಾನ ಹಿಂದೆಯೂ ಮತ್ತು ಈಗಲೂ ಅಮೇರಿಕಾದ ನಂಬಿಗಸ್ತ ಗೆಳೆಯ. ಎಷ್ಟೇ ಭಾರಿ ಪ್ರಚಾರ ನಡೆಸಿದರೂ ಅಮೇರಿಕಾವು ತನ್ನ ಗೆಳೆಯ ಪಾಕಿಸ್ತಾನದ ಹಿತಾಸಕ್ತಿಗಳಿಗೆ ದಕ್ಕೆ ತರಲು ಸಾಧ್ಯವಿಲ್ಲ.

ಅಡ್ವಾನಿ ಮತ್ತು ಆರ್.ಎಸ್.ಎಸ್./ ಬಿಜೆಪಿಯ ಜನರು ಎಷ್ಟೇ ಕಿರುಚಿ ಪಾಕಿಸ್ತಾನ ವನ್ನು ಅಮೇರಿಕಾ ಭಯೋತ್ಪಾದಕ ದೇಶಗಳ ಪಟ್ಟಿಗೆ ಸೇರಿಸುತ್ತಿಲ್ಲವೆಂದರೂ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಅಮೇರಿಕಾಕ್ಕೆ ಈ ಪ್ರದೇಶದಲ್ಲಿ ತನ್ನ ಹುನ್ನಾರಗಳಿಗೆ ನೆರವಾಗುವವರು ಬೇಕೆ ಹೊರತು ಭಯೋತ್ಪಾದನೆಯನ್ನು ಮಟ್ಟಹಾಕುವುದು ಅವರಿಗೆ ಮುಖ್ಯ ವಿಚಾರವಲ್ಲ.

ಭಾರತದ ಹಿತಕ್ಕೆ ಮಾರಕ

ಈ ಸರ್ಕಾರದ ವಿದೇಶಾಂಗ ನೀತಿ ಯಾವ ಮಟ್ಟಕ್ಕೆ ಇಳಿದಿದೆಯೆಂದರೆ ಅದರ ಎಲ್ಲಾ ರಾಜತಾಂತ್ರಿಕ ಮತ್ತು ವಿದೇಶಾಂಗ ವಿಚಾರಗಳೆಲ್ಲವೂ ಕೇವಲ ಪಾಕಿಸ್ತಾನದ ಸುತ್ತ ಗಿರಕಿ ಹೊಡೆಯುತ್ತಿದೆ. ಅಂತರಾಷ್ಟ್ರೀಯ ಸಮುದಾಯ ದೊಂದಿಗಿನ ಭಾರತದ ಸಂಬಂಧಗಳು ಭಾರತ - ಪಾಕಿಸ್ತಾನದ ಸಂಬಂಧಗಳ ಮೇಲೆ ಆದರಿಸಿರ ಬೇಕಿಲ್ಲ. ಪಾಕಿಸ್ತಾನ ಗಡಿಯಲ್ಲಿ ಭಯೋತ್ಪಾದಕರಿಗೆ ಬೆಂಬಲ ನಿಲ್ಲಿಸುವವರೆಗೂ ಆ ದೇಶದ ಜತೆ ಮಾತುಕತೆ ಸಾಧ್ಯವಿಲ್ಲವೆಂದು ನಾವು ಹಲವಾರು ಬಾರಿ ಹೇಳಿದ್ದೇವೆ. ಪರ್ವೇಜ್ ಮುಷರಫ್‌ರವರು ವಿಶ್ವಸಂಸ್ಥೆಯನ್ನುದ್ದೇಶಿಸಿ ಮಾತನಾಡುವಾಗ ಗಡಿ ನುಸುಳುವಿಕೆಯನ್ನು ಗಮನಿಸಲು ಅಂತರಾಷ್ಟ್ರೀಯ ಸಮುದಾಯ ಗುಂಪೊಂದನ್ನು ರಚಿಸಬೇಕು ಎಂಬುದು. ಭಾರತ- ಪಾಕಿಸ್ತಾನದ ನಡುವೆ ಮೂರನೇ ದೇಶವೊಂದು ತಲೆಹಾಕಲು ಅವಕಾಶ ನೀಡುತ್ತದೆ. ಇದು ಅಪಾಯಕಾರಿ.

ಪಾಕಿಸ್ತಾನದ ವಿರುದ್ಧ ಅಮೇರಿಕಾದ ಬೆಂಬಲ ಗಳಿಸಿಕೊಳ್ಳಲು ಈ ಸರ್ಕಾರ ಮಾಡುವ ಎಲ್ಲಾ ಪ್ರಯತ್ನಗಳೂ ವ್ಯರ್ಥ. ಪಾಕಿಸ್ತಾನವನ್ನು ಕೇಂದ್ರವಾಗಿಸಿಕೊಂಡು ನಿಂದಿಸುವುದನ್ನು ಕೂಡಲೇ ನಿಲ್ಲಿಸಬೇಕು. ದುರಾದೃಷ್ಟವೆಂದರೆ ಈ ಸರ್ಕಾರದ ಸೈದ್ಧಾಂತಿಕ ಬೆಂಬಲಿಗರಿಗೆಲ್ಲ ಪಾಕಿಸ್ತಾನವನ್ನು ನಿಂದಿಸುವುದೇ ಅತ್ಯಗತ್ಯ. ಇದು ಅವರ ಕೋಮುವಾದಿ ಅಜೆಂಡಾಗೆ ಸಹಾಯ ಮಾಡುತ್ತದೆ ಅಷ್ಟೇ. ಇದು ಭಾರತದ ಹಿತಾಸಕ್ತಿಗೆ ಮಾರಕವಾದುದು.

ಮಣ್ಣುಮುಕ್ಕಿದ ಕಾಂಗ್ರೆಸ್-ತೃಣಮೂಲ ಸಿಪಿಐ(ಎಂ)ಗೆ ಗೆಲುವು

ಇತ್ತಿಚೆಗೆ ನಡೆದ ಉಪಚುನಾವಣೆಗಳಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿ ಜ್ಯೋತಿ ಕೃಷ್ಣ ಚಟ್ಟೋಪಾಧ್ಯಾಯ (ಚಟರ್ಜಿ) ಬಂಗಾಳದ ಉತ್ತರ ಪಾರ ಅಸ್ಸೆಂಬ್ಲಿ ಕ್ಷೇತ್ರದಿಂದ 16,178 ಮತಗಳಿಂದ ವಿಜಯಿಯಾಗಿದ್ದರೆ, ಎಲ್‌ಡಿಎಫ್ ಬೆಂಬಲಿತ ಅಭ್ಯರ್ಥಿ ಸೆಬಾಸಿಯನ್‌ಪಾಲ್ ಕೇರಳದ ಎರ್ನಾಕುಲಂ ಲೋಕಸಭಾ ಕ್ಷೇತ್ರದಿಂದ 22 ಸಾವಿರ ಮತಗಳ ಅಂತರದಿಂದ ಆಯ್ಕೆಯಾಗಿದ್ದಾರೆ. ಈ ಎರಡೂ ಸ್ಥಾನಗಳು ಇತರೆ ಪಕ್ಷಗಳಿಂದ ಬಂದಿದೆ.

ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ಸಿನ ಶಾಸಕ ನಿಧನರಾದುದರಿಂದ ತೆರವಾದ ಸೀಟಿನಲ್ಲಿ ಸಿಪಿಐ(ಎಂ) ಗೆದ್ದಿದ್ದರೆ, ಕೇರಳದಲ್ಲಿ ಕಾಂಗ್ರೆಸ್ಸಿನ ಸಂಸತ್ ಸದಸ್ಯ ನಿಧನರಾದುದರಿಂದ ಅಲ್ಲಿ ಚುನಾವಣೆ ನಡೆದು ಸಿಪಿಐ(ಎಂ) ಬೆಂಬಲಿತ ಅಭ್ಯರ್ಥಿ ಗೆದ್ದಿದ್ದಾರೆ.

ಉತ್ತರ ಪಾರಾ ಅಸ್ಸೆಂಬ್ಲಿ ಚುನಾವಣೆಯ ಮತಗಳ ವಿವರ ಇಂತಿದೆ.

ಜ್ಯೋತಿಕೃಷ್ಣ ಚಟ್ಟೋಪಾಧ್ಯಾಯ (ಸಿಪಿಐ(ಎಂ)	66,826 ಮತಗಳು
ಇಂದ್ರಜಿತ (ತೃಣಮೂಲ ಕಾಂಗ್ರೆಸ್)	50,648
ಅಧೀರ್ ಮುಖರ್ಜಿ (ಕಾಂಗ್ರೆಸ್)	14,703
ಜಮೀರ್- ಉಲ್-ಇಸ್ಲಾಂ (ಜನತಾದಳ-ಎಸ್)	3,313

ಎರ್ನಾಕುಲಂ ಲೋಕಸಭಾ ಚುನಾವಣೆ

ಸೆಬಾಸ್ಟಿಯನ್ ಪಾಲ್, ಸಿಪಿಐ(ಎಂ) ಎಲ್‌ಡಿಎಫ್ ಬೆಂಬಲಿತ	3,35,308
ಎಂ.ಜಾಜಾನ್, ಕಾಂಗ್ರೆಸ್	3,13,176
ವಿ.ವಿಶ್ವನಾಥ ಮೆನನ್, ಬಿಜೆಪಿ ಬೆಂಬಲಿತ ಅಭ್ಯರ್ಥಿ	51,420

ಕೇರಳದಲ್ಲಿ ಕಾಂಗ್ರೆಸ್ಸಿನ ಒಳಜಗಳದಿಂದ ಸಿಪಿಐ(ಎಂ) ಗೆ ಗೆಲುವು ಆಗಿದೆ ಎಂದು ಪತ್ರಿಕೆಗಳು ಬಿಂಬಿಸಲು ಹೊರಟಿವೆ. ಆದರೆ ವಿದ್ಯುತ್‌ದರ ಏರಿಕೆಯ ವಿರುದ್ಧ ನಡೆದ ಹೋರಾಟ, ರಾಜ್ಯ ಸರಕಾರಿ ನೌಕರರ ಹೋರಾಟ, ಕಾಂಗ್ರೆಸ್ ಮತ್ತು ಖಾಸಗೀ ಶಿಕ್ಷಣ ಸಂಸ್ಥೆಗಳು ಸೇರಿ ವೃತ್ತಿಪರ ಶಿಕ್ಷಣದ ಶುಲ್ಕ ಹೆಚ್ಚಳದ ವಿರುದ್ಧ ನಡೆದ ವಿದ್ಯಾರ್ಥಿ ಚಳುವಳಿ, ಮರಾಡ್‌ನಲ್ಲಿ ನಡೆದ ಕೋಮುಘರ್ಷಣೆಯನ್ನು ಹತ್ತಿಕ್ಕುವಲ್ಲಿ ವಿಫಲತೆ ಹಾಗೂ ಮುತಂಗಾದಲ್ಲಿ ಬುಡಕಟ್ಟು ಜನರ ಮೇಲೆ ನಡೆದ ದಬ್ಬಾಳಿಕೆ - ಇತ್ಯಾದಿ ವಿಫಲತೆಗಳಿಂದಾಗಿ ಕಾಂಗ್ರೆಸ್ ಮಣ್ಣು ಮುಕ್ಕಿದೆ ಎಂಬುದನ್ನು ಮರೆಯಲಾಗದು.



ದುಡಿಯುವ ವರ್ಗದ ವಿಮೋಚನಾಸಮರದಲ್ಲಿ ಪತ್ರಿಕೆಗೆ ಒಂದು ವಿಶಿಷ್ಟವಾದ ಸ್ಥಾನ ಮತ್ತು ಪಾತ್ರವಿದೆ. ಭಾರತದ ಕಾರ್ಮಿಕವರ್ಗದ ಚಳುವಳಿಯಲ್ಲಿ ತಲೆದೋರಿದ ವರ್ಗಸಹಕಾರದ ವಿನಾಶಕಾರಿ ಧೋರಣೆಗಳ ವಿರುದ್ಧ ಕಾರ್ಮಿಕ ವರ್ಗದ ಕ್ರಾಂತಿಕಾರಿ ಪರಂಪರೆ ಹಾಗೂ ಸತ್ವವನ್ನು ಎತ್ತಿಹಿಡಿಯದೇ ಅನ್ಯಮಾರ್ಗವೇ ಇಲ್ಲವೆಂದಾದಾಗ ಆ ಸಂಘರ್ಷದಲ್ಲಿ ಹೊಮ್ಮಿದ ಬೆಳಕನ್ನು, ಮುಂಬೆಳಕಾಗಿ ಸೂಸುತ್ತಾ ಸಾಗಿಬಂದದ್ದು ಐಕ್ಯರಂಗದ ಹಾದಿ. ಈ ಹಾದಿ ದುರ್ಗಮ. ಆದರೆ ಪತ್ರಿಕೆಯದ್ದು ಬದಲಾಗದ ಸೈದ್ಧಾಂತಿಕ ಬದ್ಧತೆ. ಐಕ್ಯರಂಗದ ಪ್ರಕಟಣೆ ಏಕೆ ಅನಿವಾರ್ಯವಾಯಿತು, ಹೇಗೆ ಆರಂಭಗೊಂಡಿತು, ಅಲ್ಲಿಯೇ ನಿಲ್ಲದೇ ಕಾಲದ ಬದಲಾವಣೆಯೊಂದಿಗೆ ಹೇಗೆಲ್ಲಾ ಹೆಜ್ಜೆ ಹಾಕಿತು ಎಂಬುದರತ್ತ ಈ ಲೇಖನ ಗಮನ ಸೆಳೆಯುತ್ತದೆ. ಅದು ಸಾಗಿದ ಹಾದಿಯನ್ನು ಇಲ್ಲಿ ತೆರೆದು ತೋರಿದ್ದಾರೆ ಪತ್ರಿಕೆಯ ಆರಂಭದ ಪ್ರಕಾಶಕರೂ, ಕಷ್ಟದಿನಗಳಲ್ಲಿ ಹೆಗಲುಕೊಟ್ಟು ಶ್ರಮಿಸಿದ ಹಿರಿಯ ಸಂಗಾತಿ ಕೆ.ಆರ್.ಶ್ರೀಯಾನ್‌ರವರು.

ದುಡಿವ ಜನರ ಪ್ರಾ

ಐಕ್ಯರಂಗ ಆರಂಭಗೊಂಡು ಇದೇ ಅಕ್ಟೋಬರ್ ೪ಕ್ಕೆ ೩೯ ವರ್ಷಗಳು ತುಂಬುತ್ತವೆ. ಈ ಪತ್ರಿಕೆಯು ಆರಂಭವಾದ ಕಾಲಘಟ್ಟದಲ್ಲಿ ಹಲವಾರು ಸಮಸ್ಯೆಗಳನ್ನು, ಕಷ್ಟ ನಷ್ಟಗಳನ್ನು ಎದುರಿಸಿ ನಡೆದು ಬಂದ ದಾರಿಯ ಕುರಿತಾಗಿ ಐಕ್ಯರಂಗದ ಓದುಗರಿಗೆ ಪರಿಚಯಿಸಿ ಕೊಡುವ ಉದ್ದೇಶ ಈ ಲೇಖನದ್ದು. ಈ ೩೯ ವರ್ಷಗಳ ಕಾಲಾವಧಿಯಲ್ಲಿ ದುಡಿಯುವ ವರ್ಗದ ಚಳುವಳಿಯತ್ತ ಆಕರ್ಷಿಸಲ್ಪಟ್ಟ ನಮ್ಮ ಅನೇಕ ಹೊಸ ಕಾರ್ಯಕರ್ತರಿಗೆ, ಹಿತೈಷಿಗಳಿಗೆ ಐಕ್ಯರಂಗದ ಬಗ್ಗೆ ತಿಳಿದುಕೊಳ್ಳಲು ಈ ಲೇಖನ ಸಹಾಯಕವಾಗಬಹುದೆಂದು ನಮ್ಮ ನಂಬಿಕೆ.

ಕಮ್ಯುನಿಸ್ಟ್ ಪಕ್ಷವನ್ನು, ದೇಶದ ಕಾರ್ಮಿಕ ವರ್ಗದ ಚಳುವಳಿಯನ್ನು ವರ್ಗ ಸಹಯೋಗದತ್ತ ಸೆಳೆಯುವ ನಿರಂತರ ಪ್ರಯತ್ನ ಬಹುಕಾಲದಿಂದ ನಡೆಯುತ್ತಿತ್ತು. ಇದರ ವಿರುದ್ಧ ಪಕ್ಷದೊಳಗೆ ಪ್ರಬಲ ಹೋರಾಟವು ನಡೆಯುತ್ತಲೇ ಬಂದಿದೆ. ಅಂತರಾಷ್ಟ್ರೀಯ ಮತ್ತು ಭಾರತದ ಪರಿಸ್ಥಿತಿಯನ್ನು ಸರಿಯಾಗಿ ವಿಶ್ಲೇಷಿಸಿ ಹಾಗೂ ಭಾರತದಲ್ಲಿ ಕ್ರಾಂತಿಕಾರಿ ಶಕ್ತಿಗಳು ನೆರವೇರಿಸಬೇಕಾದ ಕರ್ತವ್ಯಗಳನ್ನು ಕುರಿತಂತೆ ಮಾರ್ಕ್ಸ್‌ವಾದಿ, ಲೆನಿನ್‌ವಾದಿ ದೃಷ್ಟಿಕೋನದಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷದಲ್ಲಿ ನಡೆದ ದೀರ್ಘ ಸಂಘರ್ಷದ ಪರಿಣಾಮವಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸ್ಥಾಪನೆಗೊಂಡಿತು.

1964 ಡಿಸೆಂಬರ್‌ನಲ್ಲಿ ಕಲ್ಕತ್ತದಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 7ನೇ ಮಹಾಧಿವೇಶನ ಅವಿಭಜಿತ ಪಕ್ಷದಲ್ಲಿ ಒಂದು ಗುಂಪು ಪ್ರತಿಪಾದಿಸುತ್ತಿರುವ ಪರಿಷ್ಕರಣವಾದದ ವಿರುದ್ಧ ನಡೆಸಿದ ಹೋರಾಟದ ಅತ್ಯುನ್ನತ ಘಟ್ಟದ ಸಂಕೇತವಾಗಿತ್ತು. ಅದು ಪರಿಷ್ಕರಣವಾದದೊಂದಿಗೆ ಕಾರ್ಯಕ್ರಮಬದ್ಧ ಸಂಘಟನಾತ್ಮಕ ಹಾಗೂ ಸೈದ್ಧಾಂತಿಕ ಬೇರ್ಪಡೆಯಾಗಿತ್ತು. 7ನೇ ಮಹಾಧಿವೇಶನವು ಭಾರತದ ಕಮ್ಯುನಿಸ್ಟ್ ಆಂದೋಲನದಲ್ಲಿ ಒಂದು ನಿಜವಾದ ತಿರುವು ಆಗಿತ್ತು.

ಇಂತಹ ಸನ್ನಿವೇಶದಲ್ಲಿ ರಾಜ್ಯದಲ್ಲಿ ದೊಡ್ಡ ಸದಸ್ಯತ್ವವನ್ನು ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕಮ್ಯುನಿಸ್ಟ್ ಪಾರ್ಟಿಯಲ್ಲಿ ಒಡಕು ತರಲು ಪ್ರಯತ್ನಗಳನ್ನು ನಡೆಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಅಂದಿನ ಪ್ರಮುಖ ಮುಖಂಡರಲ್ಲಿ ಎಂ.ಎಚ್.ಕೃಷ್ಣಪ್ಪ, ಎ.ಕೃಷ್ಣ ಶೆಟ್ಟಿ ಮತ್ತು ಪಿ.ರಾಮಚಂದ್ರರಾವ್ ಮೊದಲಾದವರನ್ನು ಬಿಟ್ಟರೆ ಪ್ರಮುಖ ಟ್ರೇಡ್ ಯೂನಿಯನ್ ಮತ್ತು ಪಕ್ಷದ ಮುಖಂಡರು ಪರಿಷ್ಕರಣವಾದಿ ದಾರಿಯತ್ತ ಸಾಗಿದರು. ಆದರೆ ಬಹುಮತದ ಸದಸ್ಯವರ್ಗ ಹಾಗೂ ಸಮರಧೀರ ಸಂಘಟನೆಯಾದ ಹಂಚಿನ ಕಾರ್ಮಿಕರ ಸಂಘಟನೆ, ಪರಿಷ್ಕರಣವಾದಿ ಮುಖಂಡತ್ವವನ್ನು ತಿರಸ್ಕರಿಸಿತು. ಪಾರ್ಟಿಯ ಮುಖಪತ್ರಿಕೆಯಾಗಿದ್ದ 'ಅರುಣ' ವಾರಪತ್ರಿಕೆ ಪರಿಷ್ಕರಣವಾದಿಗಳ ವಶವಿತ್ತು. ಪರಿಷ್ಕರಣವಾದವನ್ನು ಒಪ್ಪದ ಸದಸ್ಯರ, ಕಾರ್ಯಕರ್ತರ ಮತ್ತು ಮುಖಂಡರ ಮೇಲೆ ಭಾರೀ ಅಪಪ್ರಚಾರ ಆ ಪತ್ರಿಕೆಯ ಮೂಲಕ ಆರಂಭಿಸಿದರು. ಜಿಲ್ಲೆಯ ಪಕ್ಷವನ್ನು ಮತ್ತು ಕಾರ್ಮಿಕ ವರ್ಗದ ಚಳುವಳಿಯನ್ನು ಪರಿಷ್ಕರಣವಾದಿಗಳಿಂದ ರಕ್ಷಿಸಿ ಕ್ರಾಂತಿಕಾರಿ ಪಥದತ್ತ ಮುನ್ನಡೆಸಲು ತಮ್ಮದೇ ಆದ ಒಂದು ಪತ್ರಿಕೆಯ ಅಗತ್ಯವಿದೆಯೆಂದು ಮನಗಂಡು ಅಂದಿನ ಪಕ್ಷದ ಜಿಲ್ಲಾ ಮಂಡಳಿ ಸಭೆಯಲ್ಲಿ ತೀರ್ಮಾನಿಸಿತು. ಪತ್ರಿಕೆ ಹೊರಡಿಸಲು ಬೇಕಾದ ಪೂರ್ವಸಿದ್ಧತೆ ಮಾಡಲು ನನಗೆ ಜವಾಬ್ದಾರಿ ನೀಡಲಾಯಿತು. ದೆಹಲಿಯಲ್ಲಿರುವ ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್‌ರವರಿಗೆ ಅರ್ಜಿ

ಅಕ್ಟೋಬರ 4
ಐಕ್ಯರಂಗ
ವಾರಪತ್ರಿಕೆ
39 ತುಂಬಿತು

ರಿಜಿಸ್ಟ್ರಾರ್‌ರವರಿಗೆ ಅರ್ಜಿ ಹಾಕಿದ 2 ವಾರದೊಳಗೆ ಪತ್ರಿಕೆ ಪ್ರಕಟಿಸಲು ಅನುಮತಿ ಸಿಕ್ಕಿತು. ಪಾರ್ಲಿಮೆಂಟ್‌ನಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಕಾಂ. ಎ.ಕೆ.ಜಿ.ಯವರು ಈ ಬಗ್ಗೆ ಪ್ರಭಾವ ಬೀರಿದ್ದರಿಂದ ತುರ್ತಾಗಿ ಪತ್ರಿಕೆ ಹೊರಡಿಸಲು ಅನುಮತಿ ಸಿಗುವಂತಾಯಿತು.

> **ಎ. ಕೆ. ಜಿ. ಸಂದೇಶ**
>
> ಮಂಗಳೂರಿನಿಂದ "ಐಕ್ಯರಂಗ" ವಾರಪತ್ರಿಕೆಯು ಪ್ರಕಟವಾಗುತ್ತಿರುವುದನ್ನುತಿಳಿದು ಸಂತೋಷವಾಯಿತು. ಈ ನೂತನ ಪತ್ರಿಕೆಗೆ ನನ್ನಹಾರ್ದಿಕ ಶುಭಾಶಯಗಳು. ನಮ್ಮ ದೇಶದಲ್ಲಿ ಸಮಾಜವಾದ ಸ್ಥಾಪನೆಯ ಗುರಿಯನ್ನು ಸಾಧಿಸಲು ಈ ಪತ್ರಿಕೆ ಸರಿಯಾದ ಮಾರ್ಗದರ್ಶನ ಗೈಯುವುದೆಂಬ ವಿಶ್ವಾಸ ನನಗಿದೆ. ನಿಮಗೆ ನನ್ನ ಸಂಪೂರ್ಣ ಬೆಂಬಲವಿದೆ.
>
> ನಿಮ್ಮವನೇ ಆದ,
> ಎ. ಕೆ. ಗೋಪಾಲನ್.
>
> ಕಣ್ಣಾನೂರು,
> 4-10-64.

ಪಕ್ಷದ ಜಿಲ್ಲಾ ಮಂಡಳಿಯಲ್ಲಿ ಈ ಬಗ್ಗೆ ಚರ್ಚಿಸಿ ಪತ್ರಿಕೆ ಹೊರಡಿಸಲು ತೀರ್ಮಾನಿಸಿದಂತೆ ಮಿತ್ರರಾದ ಎಂ.ವಸುಕುಮಾರ್‌ರವರ ರಾಜಾ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪತ್ರಿಕೆಯ ಮೊದಲ ಮುದ್ರಣವನ್ನು ಆರಂಭಿಸಲಾಯಿತು. ಕಾಂ.ಪಿ.ರಾಮಚಂದ್ರರಾವ್ ಪ್ರಕಾಶಕರಾಗಿ, ಎಂ.ವಸುಕುಮಾರ್‌ರವರು ಮುದ್ರಕರಾಗಿ, ಎಂ.ಮೋಹನ್ ಶೆಟ್ಟಿಯವರು ಸಂಪಾದಕರಾಗಿರುವ, ಕಾಂ.ಕೆ.ಆರ್ ಶ್ರೀಯಾನರು ವ್ಯವಸ್ಥಾಪಕರಾಗಿ, ಮೇನೇಜರರಾಗಿ ಮೊದಲ ಸಂಚಿಕೆಯನ್ನು 4-10-1964 ರಂದು ಹೊರತರಲಾಯಿತು. ಕಾಂ.ಎ.ಕೆ.ಜಿ.ಯವರು ಪತ್ರಿಕೆಗೆ ಈ ಕೆಳಗಿನ ಸಂದೇಶವನ್ನು ನೀಡಿದ್ದರು. "ಮಂಗಳೂರಿನ ಐಕ್ಯರಂಗ ವಾರಪತ್ರಿಕೆಯು ಪ್ರಕಟವಾಗುವುದನ್ನು ತಿಳಿದು ಸಂತೋಷವಾಯಿತು. ಈ ನೂತನ ಪತ್ರಿಕೆಗೆ ನನ್ನ ಹಾರ್ದಿಕ ಶುಭಾಶಯಗಳು. ನಮ್ಮ ದೇಶದಲ್ಲಿ ಸಮಾಜವಾದ ಸ್ಥಾಪನೆಯ ಗುರಿಯನ್ನು ಸಾಧಿಸಲು ಈ ಪತ್ರಿಕೆ ಸರಿಯಾದ ಮಾರ್ಗದರ್ಶನ ಗೈಯುವುದೆಂಬ ವಿಶ್ವಾಸ ನನಗಿದೆ. ನಿಮಗೆ ನನ್ನ ಸಂಪೂರ್ಣ ಬೆಂಬಲವಿದೆ. ನಿಮ್ಮವನೇ ಆದ ಎ.ಕೆ.ಗೋಪಾಲನ್"

ಪತ್ರಿಕೆಯ ಈ ಪ್ರಕಟಣೆ ಸುದ್ದಿ ಜಿಲ್ಲೆಯ ಕಾರ್ಮಿಕ ವರ್ಗಕ್ಕೆ, ಕಮ್ಯುನಿಸ್ಟ್ ಪಕ್ಷದ ಸದಸ್ಯರಿಗೆ ಸಂತಸ ತಂದಿತು. ಮೊದಲ ಸಂಚಿಕೆ ಹೊರಬರುವುದನ್ನು ಬಹಳ ಆತುರದಿಂದ ಕಾಯುತ್ತಿದ್ದರು.


ಪತ್ರಿಕೆಯನ್ನು ಮಂಗಳೂರು ನಗರದ ವಾರ್ಡ್‌ಗಳಲ್ಲಿ, ಗ್ರಾಮಾಂತರ ಪ್ರದೇಶದಲ್ಲಿ, ಜಿಲ್ಲೆಯ ತಾಲೂಕುಗಳಲ್ಲಿದ್ದ ಪಕ್ಷದ ಶಾಖೆಗಳು ಪ್ರತೀ ವಾರ ತರಿಸಿ ಮಾರಾಟ ಮಾಡತೊಡಗಿದರು. ತಾಲೂಕು ಕೇಂದ್ರಗಳಲ್ಲಿ ಏಜೆನ್ಸಿಗಳನ್ನು ನೀಡಲಾಯಿತು. ಮಂಗಳೂರಿನಂತೆಯೇ ಪಕ್ಷದ ಪ್ರಬಲ ಚಳುವಳಿಯಿದ್ದ ಕುಂದಾಪುರ, ಉಡುಪಿ, ಬಂಟ್ವಾಳ ತಾಲೂಕುಗಳಲ್ಲೂ ದೊಡ್ಡ ಸಂಖ್ಯೆಯಲ್ಲಿ ಪತ್ರಿಕೆ ಮಾರಾಟ ಮಾಡಲು ಪಕ್ಷದ ಶಾಖೆಗಳು ವಹಿಸಿ ಪ್ರಸಾರ ಮಾಡಿದರು.

ಮಾರಾಟಕ್ಕೆ ತಂಡಗಳು

ಮಂಗಳೂರಿನಲ್ಲಿ ಪ್ರತೀ ಶಾಖೆಗಳೂ ಪತ್ರಿಕೆ ಪ್ರಕಟವಾಗುವ ಪ್ರತಿ ಶನಿವಾರ ಐಕ್ಯರಂಗ ಕಛೇರಿಗೆ ಬಂದು ಕೊಂಡು ಹೋಗುತ್ತಿದ್ದರು. ಶನಿವಾರ ಸಂಜೆ ಮತ್ತು ರವಿವಾರ ಬೆಳಿಗ್ಗೆ ನಮ್ಮ ಶಾಖೆಗಳಿಗೆ ಪತ್ರಿಕೆ ಮಾರುವ ಕೆಲಸ ಬಹಳ ಉತ್ಸಾಹದಿಂದ ಪತ್ರಿಕೆ ಮಾರಾಟ ಮಾಡಲು ಅಂಗಡಿಗಳಿಗೆ, ಮನೆಮನೆಗಳಿಗೆ ಸ್ಕ್ವಾಡ್ ಆಗಿ ತೆರಳಿ ಮಾರಾಟ ಮಾಡುತ್ತಿದ್ದರು. ಅದು ತಮ್ಮ ರಾಜಕೀಯ ಕರ್ತವ್ಯವೆಂದು ಮಾಡುತ್ತಿದ್ದರು. ದೂರದ ಪ್ರದೇಶಗಳಿಗೂ ಸ್ಕ್ವಾಡ್ ಹೋಗಿ ಪತ್ರಿಕೆ ಮಾರುತ್ತಿದ್ದರು. ಪತ್ರಿಕೆ ಬಗ್ಗೆ ತುಂಬಾ ಶ್ರದ್ಧೆ, ಗೌರವ ನಮ್ಮ ಕಾರ್ಯಕರ್ತರಲ್ಲಿತ್ತು. ಈ ಪತ್ರಿಕೆ ಆರಂಭವಾದುದರಿಂದ ಜಿಲ್ಲೆಯ ಕಾರ್ಮಿಕ ಚಳುವಳಿಗೆ ತುಂಬಾ ಸಹಕಾರವಾಗಿದೆ. ಜಿಲ್ಲೆಯ ಕಾರ್ಮಿಕ ಚಳುವಳಿಯನ್ನು, ಜನಸಾಮಾನ್ಯರ ಸಮಸ್ಯೆಗಳನ್ನು ಈ ಪತ್ರಿಕೆಯಲ್ಲಿ ಆದ್ಯತೆ ಕೊಟ್ಟು ಪ್ರಕಟಿಸಲು ಆರಂಭವಾಯಿತು. ಕಾರ್ಮಿಕರು ತಮ್ಮ ಹೋರಾಟಗಳ ಬಗ್ಗೆ ಬಂದ ಸುದ್ದಿಗಳನ್ನು


ಐಕ್ಯರಂಗ
ಚುನಾವಣಾ ರಣಾಂಗಣ ಸಿದ್ಧ

ಅಂಗಡಿಗಳಿಗಾಗಿ ಘೋಷಣೆಗಳನ್ನು ಕೂಗಿ ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಯುತ್ತಿತ್ತು. ಕಾಳಸಂತೆಕೋರರ ವಿರುದ್ಧ ಕ್ರಮ ಕೈಗೊಳ್ಳಲು ಸರಕಾರವನ್ನು ಒತ್ತಾಯಿಸುತ್ತಿದ್ದರು. ಕಾರ್ಮಿಕರು, ಬಡವರು, ಮಧ್ಯಮ ವರ್ಗದ ಜನರು, ಗ್ರಾಮಾಂತರ ಪ್ರದೇಶಗಳಲ್ಲಿ ರೈತ ಕೃಷಿ ಕೂಲಿಕಾರರು, ಕಮ್ಯುನಿಸ್ಟ್ ಪಾರ್ಟಿ ನಡೆಸುವ ಹೋರಾಟಕ್ಕೆ ಭಾರೀ ಬೆಂಬಲ ನೀಡಲು ಮುಂದಾದರು.



1964 ಜೂನ್ ತಿಂಗಳಿನಿಂದಲೇ ಆರಂಭ ಈ **'ಅನ್ನಕ್ಕಾಗಿ ನಡೆಸುವ ಹೋರಾಟವು'** ದಿನೇ ತೀವ್ರಗೊಳ್ಳುತ್ತಾ ಬಂತು. ಅದನ್ನು ಬೆಂಬ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಿದರು. ಜನತೆಗೆ ಪರಿಹಾರ ನೀಡುವ ಬ 'ಸರಕಾರವು ಈ ಹೋರಾಟವನ್ನು ಬಡಿಯಲು ಮಂಗಳೂರು ತಾಲೂಕಿನಲ್ಲಿ ಸೆಕ್ಷನ್ ಜಾರಿ ಮಾಡಿತು. ಸಭೆ ಮೆರವ ನಿಷೇಧ ಹಾಕಲಾಗಿತ್ತು. ಆದರೆ ಮಂಗಳ ಜನತೆ ಮಾತ್ರ ತಮ್ಮ ಚಳುವಳಿಯನ್ನು ತೀವ್ರಗೊಳಿಸಿ ಸರಕಾರ ನಿರ್ಬಂಧಕಾಜ್ಞೆ ಹಿಂತೆಗೆಯಬೇಕೆಂದೂ, ಜನತೆಯ ಕೇಳಿಕೆ ಮನ್ನಿಸಬೇಕೆಂದೂ ಒತ್ತಾಯಿಸುತ್ತಿದ ಕೇಳಿಕೆಗಳನ್ನು ಮನ್ನಿಸಬೇಕೆ ಒತ್ತಾಯಿಸುತ್ತಿದ್ದರು. ಸುಮಾರು 4 ತಿಂಗಳು ಕಾಲ ನಡೆದ ಕೇಳಿಕೆಗಳನ್ನು ಮನ್ನಿಸಬೇ ಒತ್ತಾಯಿಸುತ್ತಿದ್ದರು. ಈ ಚಳುವ ಹೊಸದೊಂದು ಹಂತಕ್ಕೆ ತಲುಪಿತ್ತು. ಸರ ಆರಂಭದಲ್ಲಿ ನ್ಯಾಯ ಬೆಲೆಯ ಅಂಗಡಿ ತೆರೆಯದಿದ್ದರೂ ಕಾರ್ಮಿಕರ ಒತ್ತಡದಿಂದಾಗಿ ಸರಕಾರದ ಅಕ್ಕಿ ಕಾರ್ಖಾನೆಗಳಲ್ಲಿ ತಿಂಗಳಿಗೆ ತಲಾ 15 ಕಿ ನಂತೆ ವಿತರಣೆ ಮಾಡಲು ಆರಂಭಿಸಿದರು ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆ ಹೆಚ್ಚು ಅಕ್ಕಿ ವಿತರಣೆ ಮಾಡಲು ಸರಕಾರದ ಒತ್ತಾಯ ಹೇರಲಾಯಿತು. ಇದರ ಫ ಕೆಲವು ನ್ಯಾಯ ಬೆಲೆಯ ಅಂಗಡಿಗ ತೆರೆಯಲಾಯಿತು. ಪರ್ಮಿಟ್‌ನ ಅಕ್ಕಿ ವ ಮಾಡಲು ಆರಂಭಿಸಿದರು. ಕಾರ್ಖಾನೆಗಳಲ್ಲಿ ವಿತರಣೆ ಮಾಡುವ ಅ ನಿಲ್ಲಿಸಲು ಸರಕಾರ ಆಜ್ಞೆ ಮಾಡಿತು. ಪ್ರತಿಭಟಿಸಿ ಕಾರ್ಮಿಕರು ಹೋರಾ ಮುಂದುವರಿಸಿದರು. ಇದರ ಅನಿವಾರ್ಯವಾಗಿ ಮಾಲಿಕರು ತಾವೇ ಅ ತರಿಸಿ ಕಾರ್ಮಿಕರಿಗೆ ತಲಾ 1 ಕಿ.ಲೋ. ವಿತರಣೆ ಮಾಡತೊಡಗಿದರು.

ಹೀಗೆ ಐಕ್ಯರಂಗ ಪತ್ರಿಕೆ ಹೆ

ಲೇಖನಗಳನ್ನು ಬಹಳ ಉತ್ಸಾಹದಿಂದ ಪತ್ರಿ ಖರೀದಿಸಿ ಓದುತ್ತಿದ್ದರು.

ಜನತೆಯ ಹೋರಾಟದಲ್ಲಿ ಮೆಚ್ಚಿನ ಒಡನಾಡಿಯಾಗಿ


ಪತ್ರಿಕೆಯ ಪ್ರಥಮ ಸಂಚಿಕೆಯಲ್ಲೇ ಕಲ್ಕತ್ತಾದ ನಡೆಯಲಿರುವ ಸಿಪಿಐ(ಎಂ) 7ನೇ ಅಧಿವೇಶನದ ಬಗ್ಗೆ ಬರೆಯಲಾಯಿತು. ಅಲ್ಲದೆ ಆಗ ಮಂಗಳೂರಿನಲ್ಲಿ ಆಹಾರಕ್ಕಾಗಿ ಭಾರೀ ಹೋರಾಟ ನಡೆಯುತ್ತಿತ್ತು. ಆಹಾರದ ಅಭಾವ, ಬೆಲೆ ಏರಿ ಜನಸಾಮಾನ್ಯರನ್ನು ಅಂದು ಕಾಡುತ್ತಿದ ಪ್ರಶ್ನೆಯಾಗಿತ್ತು. ಪಕ್ಷದ ವತಿಯಿಂದ ಕಡಿಮೆ ಬೆಲೆಯ ಅಕ್ಕಿಗಾಗಿ ನ್ಯಾಯ ಬೆಲೆಯ

ನಗಳಿಂದಲೇ ಮಂಗಳೂರಿನಲ್ಲಿ ನಡೆಯುತ್ತಿರುವ ಡಿಯುವ ವರ್ಗದ ಬಡಜನರ ಹೋರಾಟಗಳ ಗ್ಗೆ ವಿಶೇಷ ಸುದ್ದಿಗಳನ್ನು ಪ್ರಕಟಿಸುತ್ತಿದ್ದರಿಂದ ಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐಕ್ಯರಂಗ ಜನತೆಯ ಾಣಿಯಾಗಿ ಪ್ರಸಾರಗೊಂಡಿತು. ಅದೇ ರೀತಿ ್ಯದಾನ ಪಿಯರ್ಸ್ ಲೆಸ್ಲಿ ಗೇರುಬೀಜ ಕಾರ್ಖಾನೆ ುಚ್ಚುವುದಕ್ಕಿದಿರಾಗಿ ಅಲ್ಲಿಯ ಮಹಿಳಾ ಾರ್ಮಿಕರು ಭಾರೀ ಹೋರಾಟ ನಡೆಸಿದರು. ಈ ಾರ್ಖಾನೆಯಲ್ಲಿ ಇದ್ದ ಸಂಘಟನೆಯ ಮುಖಂಡತ್ವ ರಿಷ್ಕರಣವಾದಿಗಳ ಕೈಯಲ್ಲಿತ್ತು. ಅವರು ಾರ್ಖಾನೆ ಮುಚ್ಚುವುದಕ್ಕೆ ಇದಿರಾಗಿ ಏನೂ ್ರತಿಭಟನೆ ನಡೆಸಲಿಲ್ಲ. ಆದರೆ ಬಹುಮತ ಲೇಖಿನ ಸುದ್ದಿಗಳು ಜಿಲ್ಲೆಯ ಜನತೆಯ ಮಧ್ಯೆ ಪಕ್ಷದ ಮೇಲೆ ಹೆಚ್ಚು ಅಭಿಮಾನ ತರುವಂತಾಯಿತು. ಪಕ್ಷದ ಬಗ್ಗೆ ಜನ ಹೆಚ್ಚೆಚ್ಚು ಆಕರ್ಷಿತರಾಗತೊಡಗಿದರು. ದುಡಿಯುವ ಜನರ ವಾಣಿಯಾಗಿ ಐಕ್ಯರಂಗ ಪ್ರಸಾರವಾಗತೊಡಗಿತು. ಕಾರ್ಮಿಕ ವರ್ಗದ ವಿರೋಧಿಗಳೂ ಇದನ್ನು ಖರೀದಿಸಿ ಓದುತ್ತಿದ್ದರು. ಜಿಲ್ಲೆಯ ಪತ್ರಿಕಾರಂಗದಲ್ಲಿ ಐಕ್ಯರಂಗಕ್ಕೂ ಒಂದು ಸ್ಥಾನ ದೊರಕಿತು.


ಜಿಲ್ಲಾ ಸಮ್ಮೇಳನ ಮುಗಿಯುತ್ತಿದ್ದಂತೆ ಕರ್ನಾಟಕ ಪ್ರಾಂತ ಸಮ್ಮೇಳನ ತಯಾರಿಯು ಮಂಗಳೂರಿನಲ್ಲಿ ಆರಂಭವಾಯಿತು. 1964 ಅಕ್ಟೋಬರ್ ತಾ.18,19,20 - ಈ ಮೂರು

ಪರಿಹರಿಸಲಾಗುತ್ತಿತ್ತು. ಬರೇ 200 ರೂಪಾಯಿ ಮೂಲಧನವಾಗಿ ಹಾಕಿ ಬಾಡಿಗೆ ಪ್ರೆಸ್ಸಿನಲ್ಲಿ ಪತ್ರಿಕೆ ಪ್ರಕಟಿಸಲು ಆರಂಭಿಸಲಾಗಿತ್ತು.

ಹೀಗೆ 14 ವರುಷಗಳ ಕಾಲ ಅನೇಕ ಏರುತಗ್ಗುಗಳನ್ನು ದಾಟಿಯೂ ಅದು ಮುಂದುವರಿದಿದೆ. ಆರಂಭದಲ್ಲಿ ಅದರ ಸಂಪಾದಕರಾಗಿ ಎಂ.ಮೋಹನ್ ಶೆಟ್ಟಿ, ಬಳಿಕ ಎಂ.ಎಚ್.ಕೃಷ್ಣಪ್ಪ ಅದರ ಸಂಪಾದಕರಾಗಿದ್ದರು. ಎಂ.ಕೆ.ಭಟ್ ಒಂದೆರಡು ವರ್ಷ ಅವರು ಪತ್ರಿಕೆಯ ಸಂಪಾದಕರಾಗಿದ್ದರು. ಈ


ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ
ಕಡ್ಡಾಯ ರೇಶನ್ ಜ್ಯಾರಿಯಾಗಲಿ
ಐಕ್ಯರಂಗ
ದಿನಕ್ಕೆ ತಲಾ ಅರ್ಧ ಕಿಲೋ ಅಕ್ಕಿ ಸಿಗಲಿ

ನೀಗ 40 ವರುಷಗಳತ್ತ



ಮಜೂರರು ಅದಕ್ಕೆ ವಿರುದ್ಧವಾಗಿ ನಡೆಸಿದ ಹೋರಾಟದಲ್ಲಿ ನಮ್ಮ ಮುಖಂಡರು ಕಾರ್ಯಕರ್ತರು ಮುತುವರ್ಜಿ ವಹಿಸಿ ಚಳುವಳಿಗೆ ಸಹಕರಿಸಿದ್ದಾರೆ. ನೇತೃತ್ವ ನೀಡಿದ್ದಾರೆ. ಪತ್ರಿಕೆಯ 2 ನೇಯ ಸಂಚಿಕೆಯಲ್ಲಿ ಈ ಹೋರಾಟದ ಬಗ್ಗೆ ವಿಶೇಷ ಸುದ್ದಿಯನ್ನು ಪ್ರಕಟಿಸಿದ್ದು ಗೇರುಬೀಜ ಕಾರ್ಮಿಕರ ಮಧ್ಯೆ ಅದು ಭಾರೀ ಪರಿಣಾಮ ಬೀರಿತು.

ವಿವಿಧ ವರ್ಗಗಳ ನಡುವೆ

2ನೇಯ ಸಂಚಿಕೆಯಲ್ಲಿ ಇನ್ನೊಂದು ಸುದ್ದಿ ಪ್ರಕಟವಾಯಿತು **"ಅನ್ನ ಕೇಳಿದ್ದಕ್ಕೆ ದೊಣ್ಣೆ ಎತ್ತುವ ನೀತಿ"**. ಮೇಲೆ ವಿವರಿಸಿದಂತೆ ಆಹಾರ ಸಮಸ್ಯೆಗಾಗಿ ನಡೆದ ೋರಾಟಗಳ ತೀವ್ರತೆಯ ಬಗೆ ವಿವರಿಸಿದೆ. ಆ ಹೋರಾಟ ಮತ್ತೂ ಮುಂದುವರಿಸಲು ಅಂದಿನ ಆರೋಗ್ಯ ಮಂತ್ರಿಯಾಗಿದ್ದ ನಾಗಪ್ಪ ಆಳ್ವರು ಮಂಗಳೂರಿಗೆ ಆಗಮಿಸಿದಾಗ ಅವರನ್ನು ಹಸಿದ ಜನರು ಎದುರುಗೊಂಡು "ಅನ್ನಕೊಡಿ ಇಲ್ಲವೇ ಹೊರಟು ಹೋಗಿ" ಎಂದು ಘೋಷಣೆಗಳನ್ನು ಕೂಗುತಿತಾ ಕರಿ ಬಾವುಟ ಪ್ರದರ್ಶಿಸಿದರು. ಆದರೆ ಮಂತ್ರಿಯವರು ಆ ಜನರ ಕೂಗನ್ನು ಕೇಳುವ ಬದಲು ನೇರವಾಗಿ ಬಂಗಲೆಗೆ ತೆರಳಿದರು. ಮರುದಿನ ಜನರಿಗೆ ಆಹಾರ ಕೊಡುವ ಬದಲು ಮಂಗಳೂರಿನಲ್ಲಿ 144 ಸೆಕ್ಷನ್ ಜಾರಿ ಮಾಡಿ ಮೆರವಣಿಗೆ ಪ್ರದರ್ಶನಗಳ ಮೇಲೆ ನಿರ್ಬಂಧ ಹೇರಲಾಯಿತು. ಇದು ಐಕ್ಯರಂಗದಲ್ಲಿ ದೊಡ್ಡ ಸುದ್ದಿಯಾಗಿ ಪ್ರಕಟವಾಯಿತು. **ಮಂಗಳೂರು ನಗರದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಧ್ಯಮ ವರ್ಗದ ಜನರೂ ಪತ್ರಿಕೆ ಖರೀದಿಸಿ ಓದುತ್ತಿದ್ದರು.**

ಪತ್ರಿಕೆಯ 2ನೇಯ ಸಂಚಿಕೆಯು 11-10-1964 ರಲ್ಲಿ ಪ್ರಕಟವಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಕ್ಷದ ಜಿಲ್ಲಾ ಸಮ್ಮೇಳನ ತಯಾರಿ ನಡೆಯುತ್ತಿತ್ತು. ಉಡುಪಿಯಲ್ಲಿ ಈ ಸಮ್ಮೇಳನವು ಜರುಗಿತು. ಈ ಸಮ್ಮೇಳನದಲ್ಲಿ ಯೋಗ್ಯ ಭೂಸುಧಾರಣೆಗಾಗಿ, ತೀವ್ರ ಬೆಲೆ ಹೆಚ್ಚಳಕ್ಕಿದಿರಾಗಿ, ದರ್ಖಾಸ್ತು ವಿತರಣೆಗಾಗಿ, ಯೋಜನೆಗಳಿಂದಾಗಿ ಭೂಮಿ ಳಕೊಳ್ಳುವವರಿಗಾಗಿ ಯೋಗ್ಯ ಪರಿಹಾರ ಹಾಗೂ ಬದಲೀ ಭೂಮಿಗಾಗಿ, ಕೃಷಿ ಕೂಲಿಕಾರರಿಗೆ ನ್ಯಾಯವಾದ ವೇತನ ಮತ್ತು ಜೀವನ ಸೌಕರ್ಯಗಳಿಗಾಗಿ - "ನಿರ್ಣಯಗಳನ್ನು ಕೈಗೊಂಡು ವಿಶಾಲ ರೈತ ಸಂಘಟನೆ ಕಟ್ಟಿ ಬೆಳೆಸಲು ತೀರ್ಮಾನಿಸಲಾಯಿತು. ಬೆಲೆ ಏರಿಕೆ, ಅಕ್ಕಿಯ ಅಭಾವಗಳಿಂದಾಗಿ ಜೀವನವೇ ದುಸ್ತರವಾಗಿ ಬಂದಿರುವ ಕಾರ್ಮಿಕ ವರ್ಗದ ಸಮಸ್ಯೆಯು ರೈತ ಸಮಸ್ಯೆಯಷ್ಟೇ ಗಂಭೀರವಾಗಿದ್ದು ಕಾರ್ಮಿಕ ಸಂಘಟನೆಗಳನ್ನು ವಿಶಾಲವಾಗಿ ಕಟ್ಟಲು ಹಾಗೂ ಮಧ್ಯಮ ವರ್ಗದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಈ ಸಮ್ಮೇಳನದಲ್ಲಿ ನಿರ್ಣಯಗಳನ್ನು ಕೈಗೊಳ್ಳಲಾಗಿತ್ತು.

ಹೆಚ್ಚಿದ ಅಭಿಮಾನ

ಜಿಲ್ಲಾ ಸಮ್ಮೇಳನದ ಬಗ್ಗೆ ಐಕ್ಯರಂಗದಲ್ಲಿ ಬರೆದ

ದಿನಗಳಲ್ಲಿ ಮಂಗಳೂರಿನಲ್ಲಿ ನಡೆಯಿತು. ಸಮ್ಮೇಳನದ ಕೊನೆಯ ಕಾರ್ಯಕ್ರಮವಾಗಿ ಮಂಗಳೂರಿನಲ್ಲಿ ಸಭಾ ಮುಂಚಿತವಾಗಿ ಭಾರೀ ಮೆರವಣಿಗೆಗಳು ನಡೆದವು. ಮೊದಲೇ ಪ್ರಚಾರವಾಗಿದ್ದಂತೆ ಕಾಂ.ಇ.ಎಂ.ಎಸ್ .ನಂಬೂದಿರಿಪಾದರು ಈ ಸಮ್ಮೇಳನದ ಮುಖ್ಯ ಭಾಷಣಕಾರರಾಗಿದ್ದರು. ಕಮ್ಯುನಿಸ್ಟ್ ಪಾರ್ಟಿಯ ಒಡಕಿನ ಸಂದರ್ಭದಲ್ಲಿ ಪರಿಷ್ಕರಣವಾದಿಗಳಿಗೆ ವಿರುದ್ಧವಾಗಿ ನಡೆದಂತಹ ಈ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಸಾರ್ವಜನಿಕರು ಬಹಳ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕೇರಳದಲ್ಲಿ

ಕೆ.ಆರ್.ಶ್ರೀಯಾನ್

ಒಂದು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಂಗಳೂರಿನ ಸಭೆಗೆ ಕಾ.ಇ.ಎಂ.ಎಸ್ ತಲುಪುವಾಗ ತುಂಬಾ ತಡವಾಗಿತ್ತು. ಅದರೂ ನೆರೆದ ಜನಸ್ತೋಮ ಇಎಂ.ಎಸ್‌ರವರ ಆಗಮನವನ್ನೇ ನಿರೀಕ್ಷಿಸುತ್ತಾ ಸಭೆಯಲ್ಲಿ ಚದುರದೆ ನಿಂತಿದ್ದರು. ಈ ಮಧ್ಯೆ ಸಭಾಧ್ಯಕ್ಷತೆಯನ್ನು ವಹಿಸಿದ್ದ ಕಾ.ಎನ್.ಎಲ್ ಉಪಾಧ್ಯಾಯರು ಸಭೆಯಲ್ಲಿ ಪ್ರಕಟಿಸಿದಂತೆ ಕಾಂ.ಸೂರ್ಯನಾರಾಯಣ ರಾವ್‌ರವರು ಆ ಬೃಹತ್ ಸಭೆಯನ್ನುದ್ದೇಶಿಸಿ ತಮ್ಮ ಗಂಭೀರ ಸ್ವರದಲ್ಲಿ ಸುಮಾರು 25 ನಿಮಿಷಗಳ ಕಾಲ ಸ್ಫೂರ್ತಿಯುತ ಭಾಷಣ ಮಾಡಿದರು. ಅವರ ಭಾಷಣದಿಂದ ಸ್ಫೂರ್ತಿಗೊಂಡ ಜನತೆ ಭಾರೀ ಕರತಾಡನದಿಂದ ಅವರನ್ನು ಸ್ವಾಗತಿಸಿದರು. ಕಾಂ.ಇ.ಎಂಎಸ್ ನಂಬೂದಿರಿಪಾದರು ತಡವಾಗಿ ಬಂದರೂ ಅವರ ಭಾಷಣವನ್ನು ಸಭೆ ನಿಶ್ಯಬ್ಧವಾಗಿ ಕೊನೆವರೆಗೂ ನಿಂತು ಆಲಿಸಿದರು. ಮಂಗಳೂರಿನಲ್ಲಿ ನಡೆದ ಈ ಸಭೆಯು ಒಂದು ಚಾರಿತ್ರಿಕ ಮಹತ್ವದ್ದಾಗಿತ್ತು. ಕಮ್ಯುನಿಸ್ಟ್ ಪಾರ್ಟಿಯಲ್ಲಿ ಪರಿಷ್ಕರಣವಾದವನ್ನು ಬಹಿರಂಗವಾಗಿ ತಿರಸ್ಕರಿಸಿದ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯಲ್ಲಿ ಪ್ರಮುಖ ಘಟನೆಯಾಗಿತ್ತು. ಈ ಸಮ್ಮೇಳನದ ಬಗ್ಗೆ ವಿಶೇಷ ಸುದ್ದಿ ಪ್ರಕಟವಾದ ಐಕ್ಯರಂಗದ ಪ್ರತಿಗಳನ್ನು ಬಹಿರಂಗ ಸಭೆಯಲ್ಲಿ ಮಾರಾಟ ಮಾಡಲಾಯಿತು. ಸಾರ್ವಜನಿಕರು ಹೆಚ್ಚು ಪ್ರತಿಗಳನ್ನು ಖರೀದಿಸಿ ಓದಿದರು.

ಹೀಗೆ 1964 ರಲ್ಲಿ ಮಂಗಳೂರಿನಲ್ಲಿ ಪ್ರಕಟವಾದ ಐಕ್ಯರಂಗವು ಮುಂದೆ ರಾಜ್ಯದಾದ್ಯಂತ ಪ್ರಸಾರವಾಯಿತು. ರಾಜ್ಯದ ಎಲ್ಲಾ ಜಿಲ್ಲೆಗಳ ಕಾರ್ಮಿಕ, ರೈತ ಚಳುವಳಿಗಳ ಬಗ್ಗೆ, ದೀನ ದಲಿತರ ಸಮಸ್ಯೆಗಳ ಬಗ್ಗೆ ಲೇಖನಗಳು, ಸುದ್ದಿಗಳು, ನಿರಂತರವಾಗಿ ಪ್ರಕಟವಾಗುತಿತ ಆಳುವ ವರ್ಗದ ಜನವಿರೋಧಿ ನೀತಿಯನ್ನು ಬಹಳ ಗಂಭೀರವಾಗಿ ಜನರ ಮಧ್ಯೆ ಪ್ರಚಾರ ಮಾಡುವ ಕೆಲಸವನ್ನು ಐಕ್ಯರಂಗವು ಮಾಡುತ್ತಾ ಬಂದಿದೆ.

ಸುಮಾರು 14 ವರುಷಗಳ ಕಾಲ ಮಂಗಳೂರಿನಲ್ಲಿ ಯಶಸ್ವಿಯಾಗಿ ಪ್ರಕಟವಾಗುತ್ತಾ ಬಂದಿದೆ. ಆರ್ಥಿಕ ಮುಗ್ಗಟ್ಟು ಪದೇ ಪದೇ ಎದುರಾಗುತ್ತಿದ್ದರೂ ವರ್ಷಕ್ಕೊಮ್ಮೆ ಹೊರತರುವ ವಿಶೇಷ ಸಂಚಿಕೆಗೆ ಜಾಹಿರಾತುಗಳನ್ನು ಸಂಗ್ರಹಿಸಿ ಆರ್ಥಿಕ ಬಿಕ್ಕಟ್ಟನ್ನು ಸ್ವಲ್ಪಮಟ್ಟಿಗೆ

ಕಾಲಾವಧಿಯಲ್ಲಿ ಐಕ್ಯರಂಗ ಬೆಂಗಳೂರಿಗೆ ರಾಜ್ಯ ಕೇಂದ್ರಕ್ಕೆ ತರುವ ಬಗ್ಗೆ ರಾಜ್ಯಸಮಿತಿ ತೀರ್ಮಾನಿಸಿದಂತೆ 1978 ರಿಂದ ಬೆಂಗಳೂರಿನಿಂದ ಪ್ರಕಟವಾಗುತ್ತಿದೆ. ಸಂಪಾದಕರಾಗಿ ದಿ. ಕಾ.ಪಿ.ರಾಮಚಂದ್ರರಾವ್, ಕಾ.ಜಿ.ಎನ್.ನಾಗರಾಜ್ ಕೆಲಸ ಮಾಡಿದ್ದಾರೆ. ಈಗ ಕಾ.ಎಸ್.ವೈ.ಗುರುಶಾಂತ್‌ರವರು ಸಂಪಾದಕರಾಗಿದ್ದಾರೆ. ರಾಜ್ಯ ಕೇಂದ್ರದಿಂದ ಪ್ರಕಟಿಸಿದರೆ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಅದನ್ನು ಪ್ರಸಾರ ಮಾಡಲು ಹಾಗೂ ಎಲ್ಲಾ ಜಿಲ್ಲೆಗಳಿಂದಲೂ ಸುದ್ದಿ, ಲೇಖಗಳನ್ನು ತರಿಸಿ ಇಡೀ ರಾಜ್ಯದ ಚಳುವಳಿಗೆ ಅನುಕೂಲವಾಗುವಂತೆ ಮಾಡಲು ಪತ್ರಿಕೆಯನ್ನು ಬೆಂಗಳೂರಿಗೆ ಸ್ಥಳಾಂತರಿಸುವ ನಿರ್ಣಯ ಸರಿಯಾದುದೇ ಆಗಿದೆ. ಇದೀಗ ಬೆಂಗಳೂರಿನಿಂದ ಸುಮಾರು 25 ವರ್ಷಗಳಿಂದ ಈ ಪತ್ರಿಕೆ ಪ್ರಕಟವಾಗುತ್ತಿದೆ.

ಕರ್ನಾಟಕ ಕಮ್ಯುನಿಸ್ಟ್ ಚಳುವಳಿಗೆ, ದುಡಿಯುವ ಜನತೆಗೆ ಮಂಗಳೂರಿನಿಂದ ಆರಂಭವಾದ 'ಐಕ್ಯರಂಗ' ವು ದೊಡ್ಡದೊಂದು ಕೊಡುಗೆ ಕೊಟ್ಟಿದೆ. ಸಂದಿಗ್ದ ಪರಿಸ್ಥಿತಿಯಲ್ಲಿ ಪಕ್ಷದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ತನ್ನದೇ ಜವಾಬ್ದಾರಿಯಲ್ಲಿ ಈ ಪತ್ರಿಕೆಯನ್ನು 1964 ರಲ್ಲಿ ಆರಂಭಿಸಿದುದರಿಂದ ಪರಿಷ್ಕರಣವಾದಿಗಳ ಹಾಗೂ ಪ್ರತಿಗಾಮಿಗಳ ಪ್ರಚಾರಕ್ಕಿದಿರಾಗಿ ಸರಿಯಾಗಿ ಪ್ರತಿಕ್ರಿಯಿಸುತ್ತಾ ಕರ್ನಾಟಕದ ಕ್ರಾಂತಿಕಾರಿ ಚಳುವಳಿಗೆ ತುಂಬಾ ಸಹಾಯಕವಾಗಿದೆ.

ಕಳೆದ 25 ವರುಷಗಳಿಂದ ಬೆಂಗಳೂರು ಕೇಂದ್ರದಿಂದ ಯಶಸ್ವಿಯಾಗಿ ಬಹಳ ಪರಿಣಾಮಕಾರಿಯಾಗಿ ಮುನ್ನಡೆಯುತ್ತಿದೆ. ಆರ್ಥಿಕ ತೊಂದರೆಗಳಿದ್ದರೂ ಅದನ್ನು ನಿಭಾಯಿಸಿಕೊಂಡು ಈ ಪತ್ರಿಕೆಯು ಮುಂದುವರಿಯುತ್ತಿರುವುದು ತುಂಬಾ ಸಂತೋಷಕರ. ನಾಡಿನ ಜನತೆ, ದುಡಿಯುವ ವರ್ಗ ಈ ಪತ್ರಿಕೆಯನ್ನು ಆಧರಿಸಿ ಪ್ರೋತ್ಸಾಹಿಸಿ ಬೆಳೆಸಬೇಕೆಂದೂ, ಎಲ್ಲಾ ರಂಗಗಳಲ್ಲೂ ನಡೆಯುತ್ತಿರುವ ಹೋರಾಟಗಳಿಗೆ ಸ್ಫೂರ್ತಿಯನ್ನು ನೀಡುವ, ಸರಿಯಾದ ದಿಕ್ಸೂಚಿಸುವ ಜನತೆಯ ವಾಣಿಯಾಗಿ ಬೆಳೆದು ಬರಲೆಂದೂ, ದೊಡ್ಡ ಓದುಗರ ಸಮುದಾಯವನ್ನು ಹೊಂದಲೆಂದೂ ಹಾರೈಸುವೆ.

ದಮನಗಳ ನಡುವೆಯೂ ಗುಡುಗಿದ ದನಿ


ಐಕ್ಯರಂಗ
ಶ್ರೀ ಎ. ಕೃಷ್ಣ ಶೆಟ್ಟರ ಬಿಡುಗಡೆ
'ಐಕ್ಯರಂಗ' ಮುದ್ರಕ
ಶ್ರೀ ವಸುಕುಮಾರರ ಬಿಡುಗಡೆ

1964 ರಲ್ಲಿ ಆರಂಭವಾದ ಪತ್ರಿಕೆಯ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರನ್ನು ಭಾರತ ಚೀನಾ ಗಡಿ ಘರ್ಷಣೆಯ ಹಿನ್ನೆಲೆಯಲ್ಲಿ ಸರಕಾರವು ಬಂಧಿಸಿ ಮೈಸೂರು ಜೈಲಿಗಟ್ಟಿತು. ದೇಶಾದ್ಯಂತ ಕಮ್ಯುನಿಸ್ಟ್ ಮುಖಂಡರನ್ನು ಭೇಟೆಯಾಡಿ ಡಿ.ಐಆರ್ ಪ್ರಕಾರ ವಿಚಾರಣೆಯಿಲ್ಲದೆ ಸ್ಥಾನಬದ್ಧತೆಯಲ್ಲಿ ಇಡಲಾಯಿತು. ಆಗ ನಂದಾರವರು ಕೇಂದ್ರದ ಮಂತ್ರಿಯಾಗಿದ್ದರು. ತಾ.12-1-1965 ರಂದು ಕಲ್ಕತ್ತಾದಲ್ಲಿ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಕಾಂ.ಜ್ಯೋತಿಬಸುರವರು (ಅವರನ್ನು ಮತ್ತು ಕಾಂ.ಇ.ಎಂ.ಎಸ್‌ರವರು ಆಗ ಬಂಧಿಸಿರಲಿಲ್ಲ) ಈ ರೀತಿ ಹೇಳಿಕೆ ಕೊಟ್ಟರು "ನಾವು ಡಾಂಗೆ ಮತ್ತು ಅವರ ಗುಂಪಿನಿಂದ ಬೇರೆಯಾಗಿದ್ದೇವೆಂದು ಗೃಹಮಂತ್ರಿಯವರು ಆಪಾದಿಸಿದ್ದು. ನಾನು ಈ ಆಪಾದನೆಗಳನ್ನು ತಿರಸ್ಕರಿಸುತ್ತೇನೆ" ಎಂದು ಹೇಳಿದ್ದಾರೆ. ಮತ್ತೂ ಮುಂದುವರಿದು ನಮ್ಮ ದಾಖಲೆಗಳು ಮತ್ತು ಧೋರಣೆಗಳು ಸ್ವತಂತ್ರವಾದವುಗಳೆಂದೂ, ಸೈದ್ಧಾಂತಿಕವಾಗಿಯಾಗಲೀ ನಮ್ಮ ದೇಶದ ವಿಚಾರದಲ್ಲಾಗಲಿ, ಪ್ರಪಂಚದ ಇತರ ಕಮ್ಯುನಿಸ್ಟ್ ಹೋರಾಟದ ವಿಚಾರದಲ್ಲಾಗಲೀ ನಾವು ಎಲ್ಲಾ ಅಂಶಗಳಲ್ಲೂ ಚೀನಾ ಅಥವಾ ರಶ್ಯಾವಾದಗಳನ್ನು ಪೂರ್ತಿ ಒಪ್ಪಿಕೊಳ್ಳುವುದಿಲ್ಲ. 'ಏನೇ ಆದರೂ ಡಾಂಗೆಯವರ ಜೊತೆಯಲ್ಲಿರಬೇಕೆ ಬೇಡವೇ ಎನ್ನುವ ಬಗ್ಗೆ ನಮಗೆ ಆದೇಶ ಕೊಡಲು ಸರಕಾರಕ್ಕೆ ಅರ್ಹತೆಯಿಲ್ಲ' ಎಂದಿದ್ದಾರೆ. ಹೀಗೆ ಐಕ್ಯರಂಗದ ಸಂಪಾದಕ, ಪ್ರಕಾಶಕ, ಮುದ್ರಕರನ್ನೂ ಬಂಧಿಸಿ ಮೈಸೂರು ಜೈಲಿಗೆ ಕಳುಹಿಸಲಾಯಿತು. ಮುದ್ರಕರಾದ ಶ್ರೀ ವಸುಕುಮಾರರು ಕಮ್ಯುನಿಸ್ಟ್‌ರಾಗಿರಲಿಲ್ಲ. ಅವರು ನಮ್ಮ ಮಿತ್ರರಾಗಿದ್ದರು. ಪತ್ರಿಕೆ ಮುದ್ರಿಸಲು ಒಪ್ಪಿಕೊಂಡಿದ್ದರು. ಆದರೆ ಸರಕಾರದ ಕಣ್ಣಿನಲ್ಲಿ ಅವರೂ ಒಬ್ಬರು ದೇಶದ್ರೋಹಿ.

ಐಕ್ಯರಂಗದ ಪ್ರಮುಖರು ಜೈಲಿನಲ್ಲಿದ್ದರೂ ಪತ್ರಿಕೆ ನಿಲ್ಲಲಿಲ್ಲ. ಎಲ್ಲಾ ಜವಾಬ್ದಾರಿಗಳನ್ನು ಹೊತ್ತುಕೊಂಡು ಕಾ.ಕೆ.ಆರ್.ಶ್ರೀಯಾನರು ಪತ್ರಿಕೆ ಪ್ರಕಟಿಸಲು ಶ್ರಮಿಸಬೇಕಾಯಿತು. ಈ ಸಂದರ್ಭದಲ್ಲಿ ಪಕ್ಷದ ಸದಸ್ಯರೂ, ನಮ್ಮ ಇತರ ಕಾರ್ಯಕರ್ತರೂ ಪತ್ರಿಕೆ ಮಾರಾಟದ ಬಗ್ಗೆ ಸ್ಫೂರ್ತಿ ಇನ್ನಷ್ಟು ಹೆಚ್ಚಿಸಿ ಪತ್ರಿಕೆಗೆ ಆಧಾರವಾಗಿ ನಿಂತರು. ಹೀಗೆ ಮಂಗಳೂರಿನಲ್ಲಿ ಸುಮಾರು 14 ವರ್ಷಗಳ ಕಾಲ ನಿರಂತರವಾಗಿ ಐಕ್ಯರಂಗ ಪ್ರಕಟವಾಗುತ್ತಾ ಬಂದಿದೆ. ಸಣ್ಣ ಪತ್ರಿಕೆಗಳಿಗೆ ಆರ್ಥಿಕ ತೊಂದರೆ ಸದಾ ಇರುತ್ತದೆ. ದೊಡ್ಡ ಪತ್ರಿಕೆಗಳಿಗೆ ಸಾಕಷ್ಟು ಜಾಹಿರಾತುಗಳು ಸಿಕ್ಕುತ್ತಿದ್ದು ಬಂಡವಾಳಶಾಹಿ ಪರ ಪತ್ರಿಕೆಯಾಗಿ ಅವು ನಡೆಯುತ್ತಿದೆ.. ಆದರೆ ಕಾರ್ಮಿಕ ವರ್ಗದ ಪರವಹಿಸುವ ಪತ್ರಿಕೆಗಳಿಗೆ ಜಾಹಿರಾತುಗಳು ಸಿಗುವುದಿಲ್ಲ. ಓದುಗರ ಹಾಗೂ ಹಿತೈಷಿಗಳ ಪ್ರೋತ್ಸಾಹವೇ ಈ ಪತ್ರಿಕೆಗೆ ಆಧಾರ.


ರಾಜೀವಗಾಂಧಿ ಯುವಶಕ್ತಿ ಸಂಘ

ಯುವಜನರನ್ನು ದಿಕ್ಕು ತಪ್ಪಿಸುವ ತಂತ್ರ

ಯುವಜನರನ್ನು ಹಾದಿ ತಪ್ಪಿಸಲು ಆಳುವವರಲ್ಲಿ ಎಷ್ಟೊಂದು ತಂತ್ರಗಳು ? ಬತ್ತಳಿಕೆಯಲ್ಲಿ ಎಷ್ಟೊಂದು ಬಾಣಗಳು ?

ವಿಠ್ಠಲ ಭಂಡಾರಿ

ಈ ವರ್ಷದ ಬಜೆಟ್ಟಿನಲ್ಲಿಯಾದರೂ ಉದ್ಯೋಗ ಸೃಷ್ಟಿಸುವ ಪರಿಣಾಮಕಾರಿ ಯೋಜನೆ ಬರಬಹುದೆ? ಯಾವ ಯೋಜನೆ ಬರಬಹುದು? ಎಷ್ಟು ಉದ್ಯೋಗ ಸೃಷ್ಟಿಯಾಗಬಹುದು? ಉದ್ಯೋಗ ಸೃಷ್ಟಿಸಲು ಎಷ್ಟು ಹಣವನ್ನು ಈ ಬಜೆಟ್ಟಿನಲ್ಲಿ ಮೀಸಲಿಡಬಹುದು? ಎಂದು ಕರ್ನಾಟಕದ ಲಕ್ಷಾಂತರ ಯುವಜನ ಕಾಯುತ್ತಿರುವಾಗ 2003-2004ರ ಬಜೆಟ್ಟಿನಲ್ಲಿ ಮುಖ್ಯಮಂತ್ರಿ ಕೃಷ್ಣ ಅವರು ಕೊಟ್ಟ ಯೋಜನೆಯೇ



ಈ 'ರಾಜೀವಗಾಂಧಿ ಯುವ ಶಕ್ತಿ ಸಂಘ'. ಈ ಕಾರ್ಯಕ್ರಮದನ್ವಯ ರಾಜ್ಯದಲ್ಲಿ ಎಲ್ಲಾ 5659 ಗ್ರಾಮ ಪಂಚಾಯತ್‌ಗಳಲ್ಲಿ ಮತ್ತು 2753 ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ ಯುವಶಕ್ತಿ ಸಂಘವನ್ನು ರಚಿಸಲಾಗವುದು. ಪ್ರತಿ ಸಂಘಕ್ಕೆ 10 ಸಾವಿರ ರೂಪಾಯಿ ಕೊಡುವುದಾಗಿ ಘೋಷಿಸಿದೆ.

ಯುವಜನರ ಅಭಿವೃದ್ಧಿಯ ಮಾರ್ಗದಲ್ಲಿ ಇದೊಂದು ಮೈಲಿಗಲ್ಲು ಎಂದು ವರ್ಣಿಸುವ ಈ ಯೋಜನೆ ನಿಜವಾದ ಅರ್ಥದಲ್ಲಿ ನಿರ್ದಿಷ್ಟ ಉದ್ದೇಶಕ್ಕಾಗಿ ಸಂಘಟಿತ ಹೋರಾಟ ನಡೆಸುತ್ತಿರುವ ಯುವಜನರನ್ನು ದಿಕ್ಕು ತಪ್ಪಿಸುವ ತಂತ್ರವಲ್ಲದೆ ಇನ್ನೇನೂ ಅಲ್ಲ. ಯುವಜನರ ಅಭಿವೃದ್ಧಿಯ ಹೆಸರಿನಲ್ಲಿ ಅವರನ್ನು ಮೋಸಗೊಳಿಸಲು, ಮೂರ್ಖರನ್ನಾಗಿಸಲು ಸರ್ಕಾರ ಮುಂದಾಗಿದೆ. ಈವರೆಗೂ ರಾಜ್ಯ ಪರಿಣಾಮಕಾರಿಯಾದ ಯುವಜನ ನೀತಿ (ಕ್ರೀಡಾ ನೀತಿಯೂ ಸೇರಿ) ಹೊಂದಿಲ್ಲ. ಯುವಜನ ಸಚಿವರು, ಅವರ ಪಿ.ಎ. ಅವರ ಕಛೇರಿ, ಅಧಿಕಾರಿಗಳು... ಹೀಗೆ ಹಣ ಲೂಟಿ ಹೊಡೆಯುವ ದಂಡೇ ಇವೆ. ಆದರೆ ಬಿಡುಗಡೆಗೊಂಡ ಬಹುತೇಕ ಹಣ ಗುಡಾಣದಂತಹ ಇವರ ಹೊಟ್ಟೆತುಂಬಲು ಬೇಕು. ಸಮಗ್ರ ಕ್ರೀಡಾ ನೀತಿ ಇಲ್ಲದೆ ಬಹುತೇಕ ಗ್ರಾಮೀಣ ಭಾಗದ ಪ್ರತಿಭೆಗಳು ಕರಕಲಾಗುತ್ತಿವೆ.

ಕನಸುಗಳನ್ನು ಗಲ್ಲಿಗೇರಿಸುವ ಸರ್ಕಾರ

"ಸುಸಂಘಟಿತ ಯುವಶಕ್ತಿಯನ್ನು ಬಲಗೊಳಿಸಿ ವ್ಯವಸ್ಥಿತ ಮಾರ್ಗದರ್ಶನ ನೀಡುವತ್ತ ದೃಷ್ಟಿ ನಮ್ಮದು ಈ ದಿಶೆಯಲ್ಲಿ ಯುವಕರಲ್ಲಿ ಅಡಗಿರುವ ಅಧಮ್ಯ ಚೇತನವನ್ನು ಒಗ್ಗೂಡಿಸಿ ಕ್ರೀಡೆ, ಸಂಸ್ಕೃತಿ ಮತ್ತು ಸಮುದಾಯ ಅಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿಸುವುದೇ ಈ ಸಂಘಗಳ ಮುಖ್ಯ ಉದ್ದೇಶ" ಎಂದು ತನ್ನ ಪರಿಚಯ ಪತ್ರದಲ್ಲಿ ಸರ್ಕಾರ ಹೇಳಿಕೊಂಡಿದೆ. ದಿನನಿತ್ಯ ಯುವಜನರ ಕನಸುಗಳನ್ನು ಗಲ್ಲಿಗೇರಿಸುತ್ತಿರುವ ಸರ್ಕಾರದ ಈ ಮಾತು ಹಾಸ್ಯಾಸ್ಪದದ್ದಾಗಿವೆ, ಇಷ್ಟೇ ಅಲ್ಲ ದುರುದ್ದೇಶ ಪೂರಿತವಾಗಿ ದ್ದಾಗಿದೆ. ಕನಿಷ್ಠ 30 **ಜನರ ಒಂದು ಗುಂಪಿಗೆ 10 ಸಾವಿರ ರೂಪಾಯಿಗಳನ್ನು ಕೊಡುವ ಆಮಿಷ ಒಡ್ಡುವ ಮೂಲಕ ಯುವಶಕ್ತಿಯನ್ನು ಬಲಗೊಳಿಸಲು ಮತ್ತು ಆ ಗುಂಪನ್ನು ಸರ್ಕಾರೀಕರಣ ಮಾಡುವ (ಈಗ ಕಾಂಗ್ರೆಸ್ಸೀಕರಣ) ಮೂಲಕ ವ್ಯವಸ್ಥಿತ ಮಾರ್ಗದರ್ಶನ ಮಾಡಲು ಹೊರಟಿರುವ ಕ್ರಮವೇ ಯುವಶಕ್ತಿಯನ್ನು ಅವರ ಬೇಡಿಕೆಯನ್ನು ಕೀಳು ಅಂದಾಜಿಸುವ ಕ್ರಮವಾಗಿವೆ.**

ಎಲ್ಲಿ ಆ ಅಭಿವೃದ್ಧಿ?

ರಾಜ್ಯದಾದ್ಯಂತ ಯುವಜನ ಇಂದು ನಿರುದ್ಯೋಗದ ಕೊಪ್ಪರಿಗೆಯಲ್ಲಿ ಬೇಯುತ್ತಿದ್ದಾರೆ. ಉದಾರೀಕರಣ, ಮುಕ್ತ ಆರ್ಥಿಕ ನೀತಿಯಿಂದಾಗಿ ಇತ್ತಿಚಿಗೆ ತಲೆದೋರಿರುವ ಕೃಷಿಕ್ಷೇತ್ರದ ಬಿಕ್ಕಟ್ಟಿನಿಂದ ಗ್ರಾಮೀಣ ನಿರುದ್ಯೋಗ, ಪರಿಣಾಮವಾಗಿ ನಗರ ಪ್ರದೇಶಗಳಿಗೆ ವಲಸೆ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿವೆ. ಕೈಗಾರಿಕಾ ಬಿಕ್ಕಟ್ಟು ಮತ್ತು ವಿದ್ಯುತ್ ರಂಗದ ವೈಫಲ್ಯದಿಂದಾಗಿ ಸಾವಿರಾರು ಗುಡಿ ಕೈಗಾರಿಕೆಗಳು, ಸಣ್ಣ ಕೈಗಾರಿಕೆಗಳು ನಾಶಗೊಂಡಿವೆ. ಕೆಲಸ ಕಳೆದುಕೊಳ್ಳುವವರ ಸಂಖ್ಯೆ ದಿನನಿತ್ಯ ಬೆಳೆಯುತ್ತಿವೆ. ಕರ್ನಾಟಕ ಸರ್ಕಾರ ವಿವಿಧ ಇಲಾಖೆಯಲ್ಲಿ ಖಾಲಿ ಇರುವ 80 ಸಾವಿರದಷ್ಟು ಹುದ್ದೆಗಳನ್ನು ಆಡಳಿತ ಸುಧಾರಣೆಯ ನೆವದಲ್ಲಿ ರದ್ದುಗೊಳಿಸಲು ಮುಂದಾಗಿವೆ. ಕೇಂದ್ರ ಸರ್ಕಾರದ ಖಾಲಿ ಇರುವ ಹುದ್ದೆಯನ್ನು ರದ್ದುಗೊಳಿಸುವುದೇ ಒಂದು ಪ್ರಮುಖ ಕಾರ್ಯಕ್ರಮವನ್ನಾಗಿ ಎತ್ತಿಕೊಂಡಿದೆ. ಯುವಜನ ವಿರೋಧಿ ನೀತಿ ಜಾರಿಗೊಳಿಸುತ್ತಿರುವ ಸರ್ಕಾರ ಯುವಜನರು ನಿರುದ್ಯೋಗದಿಂದ ತತ್ತರಿಸುವಂತೆ ಮಾಡಿದೆ. ಇದರಿಂದ ಅಭಿವೃದ್ಧಿಯೇ ಕುಂಠಿತ ಆಗಿರುವಾಗ ರಾಜೀವ ಗಾಂಧಿ ಯುವಶಕ್ತಿ ಸಂಘವನ್ನು ರಚಿಸುವ ಮೂಲಕ ಅಭಿವೃದ್ಧಿ ಸಾಧ್ಯವೆ? ಅಥವಾ ಮೂಲ ಸಮಸ್ಯೆಯಾದ ನಿರುದ್ಯೋಗದ ಪರಿಣಾಮಕಾರಿ ತಡೆಯಿಂದಾಗಿ ಅಭಿವೃದ್ಧಿ ಸಾಧ್ಯವೆ ಎಂದು ಸರ್ಕಾರ ಯೋಚಿಸಬೇಕಾಗಿದೆ.

ಆಳುವರ ಬಾಲಂಗೋಚಿ

ರಾಜ್ಯದಲ್ಲಿ ಈಗಾಗಲೇ ಇರುವ ಯುವಕ/ತಿ ಸಂಘಗಳಿಗೆ ಇನ್ನೊಂದು ಪರ್ಯಾಯ ಸಂಘವನ್ನು ಸೃಷ್ಟಿಸಲು ಸರ್ಕಾರ ಮುಂದಾಗಿದೆ. ಸುಮಾರು 25-30 ವರ್ಷಗಳಿಂದ ಕ್ರಿಯಾಶೀಲವಾಗಿ ರುವ ಯುವಕ/ತಿ ಸಂಘಗಳು ಪ್ರತಿ ಜಿಲ್ಲೆಯಲ್ಲಿ ನೂರಾರಿವೆ. ಯುವಜನರ ಪ್ರತಿಭೆ ಪ್ರಕಟಿಸಲು ಇದೊಂದೆ ಅವರಿಗೆ ವೇದಿಕೆ. ಹಿಂದೆ ಸರ್ಕಾರದ ಸುತ್ತೋಲೆಯ ಪ್ರಕಾರವೇ ರಚನೆಗೊಂಡ ಯವಜನ ಮಹಾಮಂಡಲಗಳು ಇದ್ದವು. ಈಗ ಯುವಜನ ಒಕ್ಕೂಟಗಳು ಕೆಲಸ ನಿರ್ವಹಿಸುತ್ತಿವೆ. ಆದರೆ ಬಹುತೇಕ ತಾಲ್ಲೂಕು / ಜಿಲ್ಲಾ ಯುವಜನ ಒಕ್ಕೂಟಗಳು, ಪ್ರಜಾಸತ್ತಾತ್ಮಕ ಸಂಘಗಳು ಸರ್ಕಾರದ ಯುವಜನ ವಿರೋಧಿ ನೀತಿಯಿಂದ ಬೇಸತ್ತು ಹಲವು ಜನ ಪ್ರತಿನಿಧಿಗಳ ಸ್ವಜನ ಪಕ್ಷಪಾತಗಳಿಗೆ ಹೇಸಿ ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಿವೆ. ಪರ್ಯಾಯ ನೀತಿಗಾಗಿ ಸಂಘಟಿತ ಹೋರಾಟ ನಡೆಸುತ್ತಿದ್ದಾರೆ. ಹೀಗೆ ತಮ್ಮ **ಸರ್ಕಾರದ ವಿರುದ್ಧ ತಿರುಗಿ ಬಿದ್ದಿರುವ, ಪ್ರಶ್ನಿಸುವ ಯುವಜನ ಹೋರಾಟವನ್ನು ನಿಷ್ಕ್ರಿಯಗೊಳಿಸಲು ತಮ್ಮ ಬಾಲಂಗೋಚಿಗಳನ್ನಾಗಿಸಲು ಆಳುವ ಪಕ್ಷ ಹಾಗೂ ಸರ್ಕಾರ ಕಂಡುಕೊಂಡ ಮಾರ್ಗವೇ ರಾಜೀವ ಗಾಂಧಿ ಯುವ ಶಕ್ತಿ ಸಂಘ.**

ಸ್ತ್ರೀ ಶಕ್ತಿ ಸಂಘಗಳ ರಚನೆಯ ಮೂಲಕ ಸಿದ್ಧ (ರೆಡಿಮೆಡ್) ಸಭಿಕರನ್ನು ರೂಪಿಸಿರುವ ಸರ್ಕಾರ ಇಂದು ಮಂತ್ರಿ ಮಹೋದಯರ ಭಾಷಣಗಳಿಗೆ ಇನ್ನಷ್ಟು ಪ್ರೇಕ್ಷಕರನ್ನು ಸೇರಿಸಲು ಈ ರಾಜೀವ ಗಾಂಧಿ ಯುವಶಕ್ತಿ ಸಂಘ ಪ್ರಯೋಜನಕ್ಕೆ ಬರಬಹುದು.

ಮುಂದಿನ ದಿನಗಳಲ್ಲಿ ಯುವಜನ ಮೇಳ, ಕ್ರಿಡಾಕೂಟ ಇತ್ಯಾದಿಗಳನ್ನು ರಾಜೀವಗಾ[...] ಯುವಶಕ್ತಿ ಸಂಘಗಳಿಗೆ ವಹಿಸಿಕೊಡುವ ಮೂ[...] ಯುವಕ/ತಿ ಸಂಘಗಳನ್ನು ಯುವ ಒಕ್ಕೂಟಗ[...] ಸಂಪೂರ್ಣ ನಾಶ ಮಾಡುವ ಮತ್ತು ಯುವಜ[...] ಎರಡು ಪ್ರತ್ಯೇಕ ಗುಂಪುಗಳ ಸ[...] ಅನಾರೋಗ್ಯಕರ ಪೈಪೋಟಿ, ದ್ವೇಷ, ವೈಷಮ್ಯ[...] ಹುಟ್ಟುಹಾಕುವ, ಯುವಜನರನ್ನು ಒಡೆದಾ[...] ಹುನ್ನಾರ ಇಲ್ಲಿದೆ. ಈಗಿರುವ ಕ್ರಿಯಾಶೀಲ ಯು[...] ತಿ ಸಂಘಗಳಿಗೆ ಆರ್ಥಿಕ ನೆರವನ್ನು ಕೊ[...] ಸಬಲಗೊಳಿಸಬಹುದಾಗಿತ್ತು. ಇವರಿಗೂ[...] ತರಬೇತಿಯನ್ನು ಇಲಾಖೆಯ ಮೂಲಕ ಕೊ[...] ಪುನಶ್ಚೇತನಗೊಳಿಸಬಹುದಾಗಿತ್ತು. ಅ[...] ಅದರಿಂದ ಆಳುವ ಜನರ ಬಾಲಂಗೋಚಿಗಳ[...] ಆಗಲಾರದು. ಚುನಾವಣೆಗಾಗಿ ಪಕ್ಷದ ಕಾರ್ಯ[...] ರನ್ನು ಹುಟ್ಟು ಹಾಕಲು ಸಾಧ್ಯ ಆಗಲಾರದು ಎ[...] ಕಾರಣಕ್ಕಾಗಿ ಸರ್ಕಾರಿ ಕೃಪಾಪೋಷಿತ ಯುವ[...] ಸಂಘ ರಚನೆ ಆಗುತ್ತಿವೆ. ಕೆಲವು ಕಡೆ ಬಿಜೆಪಿ[...] ಕಾಂಗ್ರೆಸ್ ಕಾರ್ಯಕರ್ತರ ನಡುವೆ ಜಗಳವೇ ಪ್ರಾ[...] ಆಗಿದೆ. ಕೆಲವು ರಾಜಕೀಯ ಪಕ್ಷಗಳು ಬೆಂಬಲಿಗರನ್ನು ಸೇರಿಸಲು ಪ್ರಯತ್ನ ನಡೆಸುತ್ತಿ[...]

ಒಂದು ಕಡೆ ಧರ್ಮದ ಆಧಾರ[...] ಯುವಜನರನ್ನು ಸಂಘಟಿಸಿ ಅನ್ಯ ಕೋಮಿನ[...] ದ್ವೇಷ ತುಂಬಿ ತ್ರಿಶೂಲ, ಚಾಕು ಇತ್ಯಾದಿ[...] ಹಂಚುವ ಮೂಲಕ ದೇಶವನ್ನು ಅಭದ್ರತೆಯ[...] ಒಯ್ಯುವ ಕ್ರಿಯೆ ನಡೆಯುತ್ತಿದ್ದರೆ, ಇನ್ನೊ[...] ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರಿ ಪ್ರಾಯೋ[...] ಬಾಲಂಗೋಚಿಗಳ ಸೃಷ್ಟಿಗಾಗಿ, ಕೀಳು ಪ್ರ[...] ಯುವಜನರನ್ನು ಸಂಘ ಬಳಸಿಕೊಳ್ಳುತ್ತಿದೆ. ಇವೆರಡು ಯುವಜನರ ಎದುರಿಗಿರುವ [...] ಪ್ರಶ್ನೆಯಿಂದ ಅವರನ್ನು ದೂರ ಎಳೆದೊಯ್ಯು[...] ನಿಜವಾಗಿ ಅವರು ನಡೆಸಬೇಕಾದ ಹೋರಾಟ[...] ಅವರನ್ನು ವಿಮುಖರನ್ನಾಗಿಸುತ್ತದೆ. ಆದ[...] ರಾಜ್ಯದ ಯುವಜನ ಈ ಸತ್ಯವನ್ನರಿತು, ಮುಂದಾಲೋಚನೆಯನ್ನು ತಲೆಕೆಳಗು[...] ಒಂದು ಪ್ರಜಾಸತ್ತಾತ್ಮಕ, ಹೋರಾಟ[...] ಆಂದೋಲನವನ್ನು ಕಟ್ಟಿ ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಳ್ಳಲು ಮುಂದಾಗಬೇಕಾಗಿದೆ.

ರಕ್ತಕಣ್ಣೀರು...

ಪುಟ 12 ರಿಂದ

ನಾಗಿ, ಮೋಜಿನ ಜೀವನದ ದಾಸನಾಗಿ ಕುಷ್ಟರೋಗಕ್ಕೆ ಬಲಿಯಾಗಿ, ಸಾಯುವ ಕಾಲಕ್ಕೆ ಸಮಾಜದೊಳಿತಿಗೆ ಅದರಲ್ಲೂ ಮಹಿಳಾ ಕುಲದ ಏಳಿಗೆಗೆ ಭಾಷಣ ಹೊಡೆಯುವುದು ಎಷ್ಟರ ಮಟ್ಟಿಗೆ ಸ್ವೀಕೃತವಾಗಬಲ್ಲುದು ಎನ್ನುವ ಸಂಶಯ ಕಾಡದೇ ಇರದು.

ಹೀರೋನ ವೈಯಕ್ತಿಕ ಬದುಕಿನ ದೌರ್ಬಲ್ಯಗಳನ್ನು ಹೊರೆತುಪಡಿಸಿ ಅವನ ತರ್ಕ- ಪ್ರವಚನ, ವಿಡಂಬನೆ, ಸಂದೇಶಗಳನ್ನು ಮಾತ್ರ ಸ್ವೀಕರಿಸಿದರೆ, ಅದರಲ್ಲೂ ಉಪೇಂದ್ರಾ ಪ್ರೇಕ್ಷಕವೃಂದ ಅನುಕರಿಸಿದರೆ ಆ ಮಟ್ಟಿಗೆ ಇದೊಂದು ಯಶಸ್ವಿ ಚಿತ್ರ. ಅಷ್ಟೇ ಅಲ್ಲ ಉಪೇಂದ್ರ ಸಿನಿಮಾವನ್ನು ಎಲ್ಲಾ ವರ್ಗದ ಪ್ರೇಕ್ಷಕರು ನೋಡುವಂತೆ ಮಾಡಿರುವ ನಿರ್ಮಾಪಕ ಮುನಿರತ್ನಂ ಹಾಗೂ ನಿರ್ದೇಶಕ ಸಾಧು ಕೋಕಿಲಾರನ್ನು ಪ್ರಶಂಸಿಸಲೇಬೇಕು.

ಚುರುಕಿನ ಸಂಭಾಷಣೆ, ಕಿರಿಕಿರಿಯೆನಿಸದ ಹಾಡುಗಳು ಅಬ್ಬರವಿಲ್ಲದ ಸಂಗೀತ ಈ ಸಿನಿಮಾದ ಪ್ಲಸ್ ಪಾಯಿಂಟ್ಸ್.

ಬಹುಶಃ ನಟನೆ ಮತ್ತು ಸಂಭಾಷಣೆ ಯನ್ನಷ್ಟೇ, ಸ್ವಲ್ಪ ಕಡಿವಾಣದೊಂದಿಗೆ ತನ್ನ ಪಾಲಿಗುಳಿಸಿಕೊಂಡು ಸೃಜನಶೀಲ ನಿರ್ದೇಶಕರ ಜೋಡಿ ಕೆಲಸ ಮಾಡಿದಲ್ಲಿ ಉಪೇಂದ್ರರಿಗೆ ಕನ್ನಡ ಚಿತ್ರರಂಗದಲ್ಲಿ ವಿಶೇಷ ಸ್ಥಾನ ಲಭಿಸುತ್ತದೆ.

'ಹಾಂ' ನೆನಪಿರಲಿ ಇದು ಐವತ್ತರ ದಶಕದ ತಮಿಳಿನ ರಕ್ತಕಣ್ಣೀರ್ ಚಿತ್ರದ ಕನ್ನಡ ಮೇಕು.

ವೃದ್ಧರ ಸಮಸ್ಯೆಗಳೇನು?

(ಅಕ್ಟೋಬರ್ 1 ವಯೋವೃದ್ಧರ ದಿನಾಚರಣೆ. ಇದನ್ನು ಗಮನದಲ್ಲಿಟ್ಟು ವಯೋವೃದ್ಧರ ಸಮ[...] ಮಿಥ್ಯ-ತಥ್ಯಗಳನ್ನು ಚರ್ಚಿಸಲಾಗಿದೆ. ಈ ಚರ್ಚೆ ಹಿಂದಿನ ಸಂಚಿಕೆಯಿಂದ ಮುಂದುವರ[...] ಹಾಗೂ ಈ ಸಂಚಿಕೆಯಲ್ಲಿ ಮುಕ್ತಾಯಗೊಳ್ಳುತ್ತಿದೆ)

ಮಿಥ್ಯ: ವೃದ್ಧರು ವೃದ್ಧಾಶ್ರಮಲ್ಲಿಯೇ ಇರುವುದು ಒಳ್ಳೆಯದು.


ತಥ್ಯ: ವೃದ್ಧಾಶ್ರಮಗಳು ಈಗಿನ ದಿನಗಳಲ್ಲಿ ಪ್ರಾರಂಭವಾಗಿವೆ. ಇವುಗಳು ಕೇ[...] ವಿಶ್ರಾಂತಿಗೃಹಗಳಾಗಿವೆ. ಇವುಗಳಲ್ಲಿ ವಿಶೇಷ ಕಾಳಜಿ ತೆಗೆದುಕೊಳ್ಳಲಾಗುವುದಿಲ್ಲ. ಅದಲ್ಲದೆ ವಿಶ್ರಾಂತಿಗೃಹಗಳು ದುಬಾರಿಯಾಗಿವೆ. ಈ ವಿಶ್ರಾಂತಿಗೃಹಗಳಲ್ಲಿ ಸಾಕಷ್ಟು ನೂಕುನುಗ್ಗಲು ಕೂಡ ಇದೆ. ಇಂತಹ ಪರಿಸ್ಥಿತಿಯಲ್ಲಿ ವೃದ್ಧರನ್ನು ನೋಡಿಕೊಳ್ಳಲು ಯಾರೂ ಇಲ್ಲದಿದ್ದಲ್ಲಿ, ಅವರನ್ನು ವೃದ್ಧಾಶ್ರಮಕ್ಕೆ ಸೇರಿಸಬಹುದಾಗಿದೆ. ಭಾರತದಲ್ಲಿ ಕುಟುಂಬ ವ್ಯವಸ್ಥೆ ಈಗಲೂ ಸದೃಢವಾಗಿದೆ. ವೃದ್ಧರು ವೃದ್ಧಾಶ್ರಮಕ್ಕೆ ಹೋಗುವ ಅವಶ್ಯಕತೆ ಇಲ್ಲ.



ಮಿಥ್ಯ : ಕೆಲಸದ ಅಗತ್ಯಗಳನ್ನು ಪೂರೈಸಲಾಗದೆ ಇರುವುದರಿಂದ ವೃದ್ಧರು ಕೆಲಸದಿಂದ ನಿವೃತ್ತಿಹೊಂದಬೇಕು.


ತಥ್ಯ: ದೈಹಿಕ ಶ್ರಮ ಅಗತ್ಯವಿರುವ ಕೆಲಸಗಳಲ್ಲಿ ವೃದ್ಧರು ಕೆಲಸ ಮಾಡದೇ ಇರಬಹುದು. ಅವರಿಗೆ ನಿವೃತ್ತಿ ಅತ್ಯಗತ್ಯ. ಸ್ವಲ್ಪ ಶ್ರಮ ಹಾಗೂ ಮಾನಸಿಕ ನೆಮ್ಮದಿ ಇರುವ ಕೆಲಸಗಳಲ್ಲಿ ಅವರು ಕೆಲಸ ಮಾಡಬಹುದಾಗಿದೆ. ಅವರು ಕೆಲಸದಲ್ಲಿ ತೊಡಗುವುದರಿಂದ ಅವರ ಆರೋಗ್ಯವೂ ಸುಧಾರಿಸಬಹುದಾಗಿದೆ. ವೃದ್ಧರಲ್ಲಿ ಗೈರುಹಾಜರಿ, ಅಪಘಾತಗಳ ಸಂಖ್ಯೆ ವಯಸ್ಕರಿಗಿಂತ ಕಡಿಮೆ ಇರುವುದರಿಂದ ವೃದ್ಧರಿಗೆ ಮಾಡಬಹು[...] ಕೆಲಸಗಳನ್ನು ಗುರುತಿಸಿ ಅವರಿಗೆ ಕೆಲಸ ಮಾಡಲು ಪ್ರೋತ್ಸಾಹಿಸಬಹುದಾಗಿದೆ. ಇಂದು ದುಡಿ[...] ಸಮಸ್ಯೆ ಬಂದಾಗ, ನಿರುದ್ಯೋಗ ಎಲ್ಲೆಲ್ಲೂ ತಾಂಡವವಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಜೀವನವಿಡೀ ಕೆಲಸದಲ್ಲಿದ್ದು ವ್ಯಕ್ತಿ ನಿವೃತ್ತಿಹೊಂದಬೇಕೆಂಬುದು ಸಹಜ. ಆದರೆ ನಿವೃತ್ತಿ ಹೊ[...] ವ್ಯಕ್ತಿ ಪರಾವಲಂಬಿಗಳಾಗದಂತೆ ಸಮಾಜ ಗಮನಿಸಬೇಕಾಗಿದೆ. ವೃದ್ಧರು ಕೆಲಸದಿಂದ ಹೊಂದಿದರೂ, ಅವರ ಮಾರ್ಗದರ್ಶನ ಸಮಾಜಕ್ಕೆ ಅತ್ಯಗತ್ಯ ಎಂಬುದನ್ನು ಮರೆಯುವ[...]

ನಿರ್ಬಂಧದ ಆದೇಶ ಧಿಕ್ಕರಿಸಿ ಹೊರಟೇಬಿಟ್ಟಿತು ಮೆರವಣಿಗೆ...




1948 ರ ಮಾರ್ಚ್ ತಿಂಗಳಲ್ಲಿ (ತಿಂಗಳು ತಾರೀಖು ನೆನಪಿಲ್ಲ ಹೆಚ್ಚುಮಟ್ಟಿಗೆ ಏಪ್ರಿಲ್ ತಿಂಗಳಲ್ಲಿ ಎಂದು ನೆನಪಿದೆ. ನಮ್ಮ ಪಕ್ಷದ 2ನೇ ಅಧಿವೇಶನ ಕಲ್ಕತ್ತದಲ್ಲಿ ಸೇರಿತು. ಇದರಲ್ಲಿ ಪ್ರತಿನಿಧಿಗಳಾಗಿ ನಮ್ಮ ಜಿಲ್ಲೆಯ ಸಂಗಾತಿಗಳಾದ ಎಸ್.ಎನ್.ಹೊಳ್ಳ ಮತ್ತು ಎಂ.ಎಚ್.ಕೃಷ್ಣಪ್ಪ ಭಾಗವಹಿಸಬೇಕೆಂದು ನಿರ್ಧರಿಸಲಾದಂತೆ ಅವರಿಬ್ಬರೂ ಭಾಗವಹಿಸಿ ಮರಳುವಾಗ ಪರಿಸ್ಥಿತಿ ಬದಲಾಯಿತು. ಸರಕಾರದ ದಮನಚಕ್ರ ಕಾರ್ಯಾರಂಭ ಮಾಡಿತು. ಕಲ್ಕತ್ತಕ್ಕೆ ಹೋದ ಪ್ರತಿನಿಧಿಗಳಿಬ್ಬರನ್ನು ಬಂಧಿಸಲು ಆಜ್ಞೆ ಹೊರಟಿತು. ಇದ್ನು ಮುಖಂಡರು ಮೊದಲೇ ಅರಿತುಕೊಂಡಿದ್ದರು ಎಂದು ಕಾಣುತ್ತದೆ. ನಮ್ಮ ಉಡುಪಿಯಲ್ಲಿ ತಾಲೂಕು ರೈತರ ಸಮ್ಮೇಳನದ ಎಲ್ಲಾ ತಯಾರಿಗಳು ನಡೆದಿತ್ತು. ಕಾಂ.ಎಸ್.ಎನ್.ಹೊಳ್ಳರು ಈ ಸಮ್ಮೇಳನಕ್ಕೆ ಆಗಮಿಸಬೇಕಾಗಿತ್ತು. ನಾವು ಸ್ವಯಂ ಸೇವಕರಾಗಿ ಹಳ್ಳಿಹಳ್ಳಿಗಳಲ್ಲಿ ತೆರಳಿ ಪ್ರಚಾರ ಮಾಡಿದೆವು. ಆಗ ಪ್ರಚಾರ ಮಾಡಲು ಬರೇ ಮೆಘ ಫೋನುಗಳನ್ನು ಬಳಸುತ್ತಿದ್ದೆವು. ನಾವು ಹೇಳುವುದು ಸ್ವಲ್ಪ ಮಾತ್ರ ಗಟ್ಟಿಯಾಗಿ ಜನರಿಗೆ ಕೇಳುತ್ತಿದ್ದು ಅಷ್ಟೆ. ದೂರದ ಗ್ರಾಮಾಂತರ ಭಾಗಗಳಿಂದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರಲು ಪ್ರಾರಂಭಿಸಿದರು. ನಮಗ್ಯಾರಿಗೂ ಭಾಷಣ ಮಾಡಲು ಬರುತ್ತಿರಲಿಲ್ಲ. ಕಾಂ. ದಾಸ ಸೇರಿಗಾರಿ, ಕಾಂ.ಕೆ.ರಾಘವನ್, ಕಾಂ.ಶೀನ ನಾಯಕ್, ಕಾಂ.ಅನಂತಕೃಷ್ಣ ಐತಾಳರು ಭಾಷಣ ಮಾಡುತ್ತಲಿದ್ದರು. ಆದರೆ ಬಂದು ಸೇರಿದ ಜನರು ಕಾಂ.ಎಸ್.ಎನ್.ಹೊಳ್ಳರ ಭಾಷಣ ಕೇಳಲು ಬಂದು ಸೇರುತ್ತಲೇ ಇದ್ದ (ಉಡುಪಿಗೆ ಸಮೀಪದಲ್ಲೆ ಇದ್ದ ಆದಿ ಉಡುಪಿ ಮೈದಾನದಲ್ಲಿ ತಳಿರು ತೋರಣಗಳಿಂದ ಶೃಂಗರಿಸಲಾಗಿದ್ದ) ಮೈದಾನದಲ್ಲಿ ಕಾಂ. ಹೊಳ್ಳರು ಬರುವುದಿಲ್ಲವೆಂದು ಫೋನ್ ಸಹ ಇಲ್ಲದ ಆ ದಿನಗಳಲ್ಲಿಯೂ ವಾಹಕರೊಬ್ಬರು ಬಂದು ಕಾಂ.ಹೊಳ್ಳರ ಬಂಧನಕ್ಕಾಗಿ ಪೊಲೀಸರು ಸಿದ್ಧರಾಗಿ ನಿಂತಿದ್ದಾರೆ. ಅವರ ಮೇಲೆ ವಾರಂಟು ಹೊರಟಿದೆ ಎಂದು ತಿಳಿಸಿದರು. ಬಂದವರು ಸಾಮಾನ್ಯ ಕಾರ್ಮಿಕರ ಮಧ್ಯ ಬೆಳೆದು ಬಂದಿದ್ದ ನಾಯಕರಾಗಿದ್ದರು. ಬಂದರು ಕಾರ್ಮಿಕರ ಸಂಘಟನೆಯ ಮುಂದಾಳಾಗಿ ಕೆಲಸ ಮಾಡುತ್ತಿದ್ದು ಮಾತನಾಡುವ ಕಲೆಯನ್ನು ಅಭ್ಯಾಸ ಮಾಡಿ ಉತ್ತಮವಾಗಿ ಭಾಷಣ ಮಾಡುತ್ತಿದ್ದರು. (ಇಂತಹ ಹಲವಾರು ಸಂಗಾತಿಗಳು ಕಾರ್ಮಿಕರ ಮಧ್ಯದಿಂದ ಆಗಲೇ ಬೆಳೆದು ಬಂದಿದ್ದರು) ನಾವೆಲ್ಲ ಸೇರಿ ಸಮ್ಮೇಳನ ಪ್ರಾರಂಭಿಸಿದೆವು. ನಮ್ಮ ಮೇಲೆ ಕಾಣಿಸಿದ ಉಡುಪಿಯ ಮುಖಂಡರು ಭಾಷಣ ಮಾಡಿದ ನಂತರ ಮಂಗಳೂರಿನಿಂದ ಬಂದಿದ್ದ ಕಾಂ.ಸಂಕಪ್ಪ ಎಂಬ ಸಂಗಾತಿ ಉತ್ತಮವಾಗಿಯೇ ಮಾತನಾಡಿದರು. ಜನರು ನಿಂತು ಭಾಷಣ ಕೇಳಿದರು. ಕತ್ತಲಾಗುತ್ತಿದ್ದಂತೆ ಸಭೆ ಚದರಿತು. ಪೊಲೀಸರು ಮೈದಾನವನ್ನು ಸುತ್ತುವರಿದಿದ್ದರು. ಕಾಂ.ಹೊಳ್ಳರನ್ನು ಬಂದಿಸಲೆಂದು ಅವರೆಲ್ಲರೂ ನಿರಾಶರಾಗಿ ಹಿಂದೆ ಹೋಗಬೇಕಾಯಿತು.

ಕಾಂ.ಸಂಕಪ್ಪರವರ ಸೂಚನೆಯಂತೆ ತಡವಾಗಿ ಉಡುಪಿಯ ಎಲ್ಲಾ ಮುಖಂಡರು ಸೇರಿದಂತೆ ನಾವು ಕೆಲವು ಪ್ರಮುಖ ಸಂಗಾತಿಗಳಾಗಿದ್ದವರು ಸೇರಬೇಕಾದ ಸಭೆಯ ಸ್ಥಳವನ್ನು ನಮಗೆ ತಿಳಿಸಲಾಯಿತು. ನಾವು ಒಬ್ಬರು ಹೊರಟೆವು ಇಬ್ಬರಂತೆ ಮಫ್ತಿಯಲ್ಲಿದ್ದ ಪೊಲೀಸರು ನಾವು ಮನೆಗೆ ಹೋಗುವುದೆಂದು ತಿಳಿದು ಸ್ವಲ್ಪ ನಮ್ಮನ್ನು ಬೆನ್ನಟ್ಟಿದರೂ ನಂತರ ನಿರ್ಗಮಿಸಿದರು. ನಾವು ಸುತ್ತು ಬಳಸಿ ಬೇರೆ ದಾರಿಗಳಿಂದ ಬಂದು ಗೊತ್ತುಪಡಿಸಿದ ಸ್ಥಳದಲ್ಲಿ ಸೇರಿದೆವು. ಕಾಂ.ಸಂಕಪ್ಪನವರು ಪರಿಸ್ಥಿತಿಯ ಗಂಭೀರತೆಯನ್ನು ವಿವರವಾಗಿ ತಿಳಿಸುತ್ತಾ ಮುಂದಿನ ದಿನಗಳಲ್ಲಿ ಪಕ್ಷದ ಮೇಲೆ ಧಾಳಿ, ದಬ್ಬಾಳಿಕೆ ನಡೆಯುವ ಸೂಚನೆಯನ್ನು ಜಿಲ್ಲಾ ಕೇಂದ್ರದಿಂದ ನೀಡಲಾಗಿದೆ. ಮುಖಂಡರು ಕಟ್ಟೆಚ್ಚರದಲ್ಲಿರುವಂತೆ ತಿಳಿಸಲಾಗಿದೆ. ಪರಿಸ್ಥಿತಿ ತೀರಾ ಬದಲಾಗಿದೆ ಎಂದು ನಾವೆಲ್ಲರೂ ತಿಳಿದುಕೊಳ್ಳುವಂತಾಯಿತು. ಮುಂದಾಳುಗಳು ಭೂಗತರಾದರು. ನಾವು ಸ್ವಯಂ ಸೇವಕರ ಹಂತದವರು ಭೂಗತರಾದವರಿಗೆ ಸಂಪರ್ಕ ಕೊಂಡಿಯಾದೆವು. ಜಾಗ್ರತೆಯಿಂದ ನಮ್ಮ ದುಡಿಮೆಯನ್ನು ಮಾಡುತ್ತಲೇ ಇದ್ದು 8-10 ಮಂದಿ ಮುಖಂಡರ ನಿಕಟ ಸಂಪರ್ಕವಿಟ್ಟುಕೊಂಡು ಪೋಲಿಸರ ಕಣ್ತಪ್ಪಿಸಿ ಏನೂ ಗೊತ್ತಿಲ್ಲದವರಂತೆ ನಟಿಸುತ್ತಲೇ ಅವರವರಿಗೆ ನೀಡಲಾದ ಜವಾಬ್ದಾರಿಯ ಕೆಲಸಗಳನ್ನು ಮಾಡುತ್ತಲೇ ಬಂದೆವು.



ಡೇವಿಡ್ ಕರ್ಕಡ, ಉಡುಪಿ

ಮೇ ದಿನಾಚರಣೆ: 1948 ರ ಮೇ ದಿನಾಚರಣೆಗೆ ಸಿದ್ಧತೆ ನಡೆಸಿದೆವು. ನೇಕಾರರು ಮತ್ತು ಬೀಡಿ ಕಾರ್ಮಿಕರು ಸುಮಾರು ಒಂದುನೂರು ಮಂದಿಯಷ್ಟು ಸೇರಿ ಎಲ್ಲರ ಕೈಯಲ್ಲಿ ಕೆಂಬಾವುಟ ನೀಡಲಾಯಿತು (100 ಮಂದಿಯ ಕೈಯಲ್ಲಿ ಬಾವುಟವಿತ್ತು) ಉಡುಪಿಯ ಮುಖಂಡರೆಲ್ಲರೂ ನಾಯಕತ್ವ ನೀಡಿದ ಮೆರವಣಿಗೆ ಹೊರಟಿತು. ನಿರ್ಬಂಧವಿದ್ದರೂ ಪೊಲೀಸರು ಮೆರವಣಿಗೆ ತಡೆಯಲಿಲ್ಲ. 144 ಸೆಕ್ಷನ್ ಇರಲಿಲ್ಲವಾದರೂ ಮೆರವಣಿಗೆ ನಡೆಸಿದಂತೆ ಕಮ್ಯುನಿಸ್ಟರಾದ ನಮ್ಮ ಮೇಲೆ ನಿರ್ಭಂಧವಿತ್ತು ಅಂದಿನ ದಿನಗಳಲ್ಲಿ ಉಡುಪಿಯಲ್ಲಿ ಹೆಚ್ಚು ಪೋಲೀಸರಿರಲಿಲ್ಲ. ಕೆಲವೇ ಮಂದಿ ಮಾತ್ರವಿದ್ದರು. ಅನುಮತಿ ಇಲ್ಲದೆಯೇ ನಾವು ನಗರದಲ್ಲಿ ಸುತ್ತಾಡಿ ಮೆರವಣಿಗೆಯಲ್ಲಿ ರಥಬೀದಿಗೆ ತೆರಳಿ ಅಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಉಡುಪಿಯ ಮುಖಂಡರು ಮಾತನಾಡುತ್ತಾ ಅಧ್ಯಕ್ಷತೆ ವಹಿಸಿದ್ದ ಕಾಂ.ಕೆ.ರಾಘವನ್‌ರು. ಈಗ ಕಾಂ.ಎಂ.ಎಚ್.ಕೃಷ್ಣಪ್ಪ ಮಾತಾಡುತ್ತಾರೆಂದು ತಿಳಿಸಿದರು. ಅದೆಲ್ಲಿಂದಲೋ ಪೊಲೀಸರ ಸರ್ಪಗಾವಲನ್ನು ಬೇಧಿಸಿ ಕಾಂ.ಕೃಷ್ಣಪ್ಪನವರು ವೇದಿಕೆಗೆ ಬಂದು ಮಾತನಾಡಿ ಎಲ್ಲಾ ವಿವರಗಳನ್ನು, ಕಲ್ಕತ್ತ ಅಧಿವೇಶನದ ಮಹತ್ವವನ್ನು ವಿವರಿಸಿದರು ಪೊಲೀಸರು ಅವರನ್ನು ಬಂದಿಸಲು ಸಿದ್ಧರಾಗಿ ನಿಂತರು. ಅವರು ಮಾತು ನಿಲ್ಲಿಸಿದಾಗ ನಾವೆಲ್ಲರೂ ವೇದಿಕೆಯಿಂದ ಕಾಂ.ಕೃಷ್ಣಪ್ಪ ಕೆಳಗಿಳಿಯುತ್ತಿದ್ದಂತೆ ಗುಂಪಾಗಿ ಸೇರಿಬಂದೆವು. ಕಾಂ.ಕೃಷ್ಣಪ್ಪ ಅಲ್ಲಿಂದಲೂ ಪೊಲೀಸರಿಗೆ (ಚಳ್ಳೆಹಣ್ಣು ತಿನ್ನಿಸಿ) ಕಣ್ತಪ್ಪಿಸಿ ಮಠದ ಸಂದಿನ ಅಡ್ಡದಾರಿಯಲ್ಲಿ ಅವರನ್ನು ಕರೆದೊಯ್ಯಲಾಯಿತು. ವೇದಿಕೆಯಿಂದ, ಕೆಳಗಿಳಿದ ನಂತರ ಪೊಲೀಸರಿಗೆ ಬಿಡಿ ನಮಗೂ ಕೃಷ್ಣಪ್ಪ ಯಾರೆಂದು ತಿಳಿಯಲೇ ಇಲ್ಲ ಅವರು ವೇಷ ಬದಲಿಸಿ ತಲೆಗೆ ಟೋಪಿ ಇಟ್ಟೊಡನೆ ಅವರನ್ನು ಗುರ್ತಿಸುವುದು ಯಾರಿಗೂ ಸಾಧ್ಯವಾಗಲಾರದಾಗಿತ್ತು. ಹೀಗೆ ಆ ರಾತ್ರಿ 7 ಗಂಟೆಗೆ ಸಭೆ ಮುಗಿಸಿ 8 ಗಂಟೆಗೆ ಮೊದಲೇ ನಮಗೆ ಎಲ್ಲಾ ವಿಷಯಗಳನ್ನು ತಿಳಿಸಲಾಗಿತ್ತು. ಗೊತ್ತುಪಡಿಸಿದ ಸ್ಥಳದಲ್ಲಿ ನಾವು 10-12 ಮಂದಿ ಮಾತ್ರ ಸೇರಿದಾಗ ಕಾಂ.ಎಂ.ಎಚ್.ಕೃಷ್ಣಪ್ಪನವರು ನಮಗೆ ಸುಮಾರು ಒಂದು ಗಂಟೆಗಳ ಕಾಲ ನಮ್ಮ ಮುಂದಿನ ಜವಾಬ್ದಾರಿಗಳೇನು ಎಂಬುದನ್ನು ತಿಳಿಸಿ ಹೇಳಿದರು. ಅದರಂತೆ ನಾವು ಜಾಗೃತರಾಗಿ ಬೇರೆ ದಾರಿಗಳಿಂದ ಅಗಲಿದೆವು.



ವೈ.ವಿ.ರೆಡ್ಡಿಗೆ ಅಧಿಕಾರ ಯಾರಿಗೆ ಸಹಕಾರ?

ಅಂತರಾಷ್ಟ್ರೀಯ ಹಣಕಾಸು ನಿಧಿ ಐಎಂಎಫ್‌ನಿಂದ ಬಂದವರಿಗೆ ಅಧಿಕಾರ ದೊರೆತರೆ ಯಾರಿಗೆ ಅನುಕೂಲ? ಖಂಡಿತವಾಗಿಯೂ ಐಎಂಎಫ್‌ಗೆ ತಾನೆ? ಐಎಂಎಫ್ ಗೆ ಅಂತಹ ಮಾನ್ಯತೆ ನೀಡುವ, ಸಹಕಾರ ತೋರುವ ಉತ್ಸುಕತೆ ಕೇಂದ್ರದ ಎನ್.ಡಿ.ಎ ಸರ್ಕಾರದ್ದು ಎಂದರೆ ಅತಿಶಯೋಕ್ತಿಯೇನಲ್ಲ. ಯಾಕೆಂದರೆ ಸಾಮಾನ್ಯವಾಗಿ ಭಾರತೀಯ ರಿಝರ್ವ್ ಬ್ಯಾಂಕಿನ ಗವರ್ನರ್‌ಗಿರಿ ಮೂರು ವರ್ಷದ ಅವಧಿಗೆ ನೀಡುವಂತಹದ್ದು. ಆದರೆ ವೈ.ವಿ.ರೆಡ್ಡಿಯವರಿಗೆ ಐದು ವರ್ಷಗಳ ಅವಧಿಗೆ ಅಧಿಕಾರ ನೀಡಲಾಗಿದೆ. ಅಂದರೆ ಅವರಿಗೆ ವಿಶೇಷ ಸವಲತ್ತು.

ಈ ಹಿಂದೆ ಭಾರತೀಯ ರಿಸರ್ವ್‌ಬ್ಯಾಂಕಿನ ಉಪಗವರ್ನರ್ ಆಗಿ ಕೆಲಸ ಮಾಡಿದವರೂ ಹೌದು. ಈ ನೇಮಕವಾಗುವುದರ ಜೊತೆಗೆ ಐಎಂಎಫ್‌ಗೆ ಬೇಕಾದವರೊಬ್ಬರು ಭಾರತೀಯ ರಿಝರ್ವ್ ಬ್ಯಾಂಕಿನ ಗದ್ದುಗೆ ಏರಿದಂತಾಗಿದೆ.

ಐಎಂಎಫ್ ಹಿಂದಿನಿಂದಲೂ ಇಂತಹ ಪ್ರಯತ್ನವನ್ನು ಮಾಡಿಕೊಂಡು ಬಂದಿತ್ತು. ಈಗ ಅದರ ಉದ್ದೇಶ ನೆರವೇರಿದೆ. ಆರ್ಥಿಕ ಉದಾರೀಕರಣದ ಲಗಾಮುಗಳನ್ನು ಕೈಯಲ್ಲಿ ಹಿಡಿದಿರುವ ಡಾ.ರೆಡ್ಡಿ ಐಎಂಎಫ್ ಹೇಳುವ ರೀತಿಯಲ್ಲಿ ಈ ಲಗಾಮನ್ನು ಉಪಯೋಗಿಸುವ ವಿಚಾರದಲ್ಲಿರಬಹುದು ಅಲ್ಲವೆ?

ಊರು ಕೊಳ್ಳೆ ಹೋದ ಮೇಲೆ ದಿಡ್ಡಿ ಬಾಗಿಲು ಹಾಕಿದರು! ಆದರೆ ಕಳ್ಳ ಗಿಂಡಿಗಳನ್ನು ಹಾಗೇ ಬಿಟ್ಟರು

ಇದು ಕರ್ನಾಟಕ ರಾಜ್ಯ ಸರ್ಕಾರದ ಕಾರ್ಯ ವೈಖರಿಯ ಕತೆ. ಕರ್ನಾಟಕ ಪ್ರಾಂತ ರೈತರು ಬೆಂಕಿಗೆ ಬೀಳುವ ಹುಳುಗಳಂತೆ ಸಾಯುತ್ತಿದ್ದಾರೆ. ಸಾಲದ ಶೂಲ ಅವರನ್ನು ಬಲಿ ತೆಗೆದುಕೊಳ್ಳುತ್ತಿದೆ. ನೀರಾವರಿಯ ಸೌಲಭ್ಯವಿರುವ ಮಂಡ್ಯದಂತಹ ಜಿಲ್ಲೆಯಲ್ಲೂ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೊದ ಮೊದಲು ಇದು ಆತ್ಮಹತ್ಯೆಯೇ ಅಲ್ಲ ಎಂದು ವರದಿಗಳನ್ನು ತಳ್ಳಿಹಾಕಿದ ಕರ್ನಾಟಕ ರಾಜ್ಯ ಸರ್ಕಾರ ಈಗ ಎಚ್ಚೆತ್ತುಕೊಂಡು ರೈತರಿಗೆ ಪರಿಹಾರ ನೀಡುವ ದೊಡ್ಡ ಯೋಜನೆಯೊಂದನ್ನು ಪ್ರಕಟಿಸಿ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ನೋಡಿತು. ಈ ಯೋಜನೆಯಲ್ಲೂ ಶ್ರೀಮಂತ ರೈತರಿಗೆ ಅನುಕೂಲ ಮಾಡಿಕೊಡುವ ಕೆಲಸವನ್ನೇ ಅದು ಮಾಡಿತು.

ಈಗ ಇನ್ನೊಂದು ಕಣ್ಣೊರೆಸುವ ತಂತ್ರ. ಸ್ಥಳೀಯ ಲೇವಾದೇವಿಗಾರರು ಮಿತಿಮೀರಿದ ಬಡ್ಡಿಯನ್ನು ಹೇರದಂತೆ ಸುಗ್ರೀವಾಜ್ಞೆಯೊಂದನ್ನು ಅದು ಜಾರಿಗೆ ತಂದಿದೆ. ಹೀಗೆ ಸುಗ್ರೀವಾಜ್ಞೆ ತಂದರೆ ಮಿತಿಮೀರಿದ ಬಡ್ಡಿ ಹೇರುವವರು ಅದನ್ನು ಬಿಟ್ಟುಬಿಡುತ್ತಾರೆಂದುಕೊಂಡಿದೆಯೇ ಈ ಸರ್ಕಾರ! ಈ ಸರ್ಕಾರಕ್ಕೂ ಗೊತ್ತಿದೆ ಇದು. ಖಂಡಿತವಾಗಿಯೂ ಅಂತಹದ್ದೇನೂ ಆಗುವುದಿಲ್ಲ. ಅದು ಆಗುವುದೂ ಬಹುಶಃ ಸರ್ಕಾರಕ್ಕೆ ಬೇಕಾಗಿಲ್ಲ. ಯಾಕೆಂದರೆ ಈ ಸರ್ಕಾರಕ್ಕೆ ಬೆನ್ನೆಲುಬಾಗಿರುವ ಜಮೀನ್ದಾರಿ ವರ್ಗಕ್ಕೆ ಇಂತಹ ಆಜ್ಞೆ ಕಟ್ಟುನಿಟ್ಟಾಗಿ ಜಾರಿಗೆ ಬಂದರೆ ತೊಂದರೆಯಾಗಬಹುದು. ಆದ್ದರಿಂದಲೇ ಇಂತಹ ಸುಗ್ರೀವಾಜ್ಞೆ.

ಇಲ್ಲಿ ಬಹಳ ಮುಖ್ಯವಾಗಿ ಎದ್ದು ಕಾಣುವುದು ಇದು. ಸ್ವಾತಂತ್ರ್ಯ ಬಂದು ಐವತ್ತೈದು ದಶಕಗಳು ಕಳೆದುಹೋಗಿದ್ದರೂ ಇಂದಿಗೂ ರೈತರಿಗೆ ಸಾಂಸ್ಥಿಕ ಹಣಕಾಸು ನೀಡುವ ಪರಿಣಾಮಕಾರಿ ವ್ಯವಸ್ಥೆ ಮಾಡಿಲ್ಲ. ವಾಣಿಜ್ಯ ಬ್ಯಾಂಕುಗಳು ಸಹಕಾರಿ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಸಂಘಗಳು ಇದ್ದರೂ ಗ್ರಾಮೀಣ ಜನರ ಹಣಕಾಸಿನ ಅವಶ್ಯಕತೆಯನ್ನು ಪೂರೈಸುವುದು ಸಾಧ್ಯವಾಗಿಲ್ಲ. ಆದ್ದರಿಂದಲೇ ರೈತರು ಖಾಸಗಿ ಲೇವಾದೇವಿಗಾರರ ಹತ್ತಿರ ಸಾಲ ಮಾಡುವುದು. ಅದೂ ಬಡ್ಡಿದರ ಶೇ.30 ರಿಂದ ಶೇ.120ರವರೆಗೂ ತೆರುವುದು. ಈ ಪ್ರಮಾಣದ ಬಡ್ಡಿ ತೆರುವ ರೈತ ಖಂಡಿತವಾಗಿಯೂ ಬದುಕಲಾರ. ಆದ್ದರಿಂದಲೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು.

ಹಿಂದೆ ಬರ ಬಂದಾಗ ಕೂಡಲೇ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಈಗ ಉದಾರೀಕರಣದ ಅಮಲು ಸರ್ಕಾರಗಳಿಗೆ ಏರಿರುವುದರಿಂದ ಬರ ಪರಿಹಾರ ಕಾರ್ಯಗಳು ಜನ ಸತ್ತ ಮೇಲೆಯೇ ಪ್ರಾರಂಭವಾಗುತ್ತದೆ. ಕನಿಷ್ಟ ಸತತವಾಗಿ ಎರಡು/ ಮೂರು ಬರವನ್ನು ಎದುರಿಸುತ್ತಿರುವ ರೈತರಿಗೆ ಸಾಲದ ಬಡ್ಡಿ ಮನ್ನಾ ಮಾಡಿದ್ದರೆ (ಇದು ಸಾಂಸ್ಥಿಕ ಸಾಲಗಳಿಗೆ ಮಾತ್ರ ಸಾಧ್ಯ) ಬೆಳೆ ಸಾಲಗಳನ್ನು ಅವಧಿ ಸಾಲವಾಗಿ ಪರಿವರ್ತಿಸಿದ್ದರೆ ಬಡರೈತರ ಪರಿಸ್ಥಿತಿ ಇಷ್ಟು ಹೀನಾಯವಾಗುತ್ತಿರಲಿಲ್ಲ. ಲೇವಾದೇವಿಗಾರರು ಇರುವವರೆಗೆ ಅವರು ಇಂತಹ ಬರದ ಅವಕಾಶಗಳಿಗಾಗಿಯೇ ಕಾಯುತ್ತಾರೆ. ಸಾಲ ನೀಡಿ ಜಮೀನನ್ನೇ ನುಂಗಿ ಹಾಕುತ್ತಾರೆ. ರೈತನಿಗೆ ಬದುಕಲು ಅವಕಾಶವಲ್ಲಿ ಉಳಿಯುತ್ತದೆ.

ಪಿಪಿಎಫ್ ಸ್ವರ್ಗದ ದಾರಿ

ಕೇಂದ್ರ ಸರ್ಕಾರ ಪಿಪಿಎಫ್ ಎಂಬ ಸಣ್ಣ ಉಳಿತಾಯ ಯೋಜನೆಗೆ ಮುಕ್ತಾಯ ಹಾಡುವ ವಿಚಾರದಲ್ಲಿದೆಯಂತೆ. ಮಧ್ಯಮ ವರ್ಗದವರಿಗೆ ಉಳಿತಾಯ ಮಾಡಿ ತಮ್ಮ ಭವಿಷ್ಯದ ದಿನಗಳಿಗೆ ಆದಾಯದ ದಾರಿ ಮಾಡಿಕೊಳ್ಳುವ ಒಂದು ತರಹದ ಯೋಜನೆ ಪಿಪಿಎಫ್ ಅಥವಾ ಪಬ್ಲಿಕ್ ಪ್ರಾವಿಡೆಂಟ್ ಫಂಡ್.

ಎಲ್ಲ ತರಹದ ಸಣ್ಣ ಉಳಿತಾಯ ಯೋಜನೆಗಳಿಗೆ ಕೇಂದ್ರ ಸರ್ಕಾರ ಇಂತಹ ದಾರಿಯನ್ನೇ ತೋರಿಸುತ್ತಿದೆ. ಒಟ್ಟಾರೆಯಾಗಿ ಬಂಡವಾಳಿಗರಿಗೆ ಅನುಕೂಲ ಮಾಡಿಕೊಡುವುದು ಅದರ ಉದ್ದೇಶ.

ಈಗಾಗಲೇ ಕೇಂದ್ರ ಸರ್ಕಾರ ಪಿಂಚಣಿ ಯೋಜನೆಯೊಂದನ್ನು ಜಾರಿಗೆ ತಂದಿದೆ. ಅದು ಲಾಭದಾಯಕವಲ್ಲವಾದ್ದರಿಂದ ಜನ ಈ ಯೋಜನೆಗೆ ಸೇರುತ್ತಿಲ್ಲ. ಪಶ್ಚಿಮ ಬಂಗಾಳ ಸರ್ಕಾರವಂತೂ ಈ ಯೋಜನೆ ತನ್ನ ನೌಕರರಿಗೆ ಲಾಭದಾಯಕವಲ್ಲದಿರು ವುದರಿಂದ ತಾನು ಅದನ್ನು ಜಾರಿ ಮಾಡುವುದಿಲ್ಲ ಎಂದು ಆಗಲೇ ಹೇಳಿಬಿಟ್ಟಿದೆ.

ಕೇಂದ್ರ ಸರ್ಕಾರಕ್ಕೆ ಈಗ ಮಾನ ಉಳಿಸಿಕೊಳ್ಳುವ ಸಮಸ್ಯೆ ಬಂದಿದೆ. ಆದ್ದರಿಂದಲೇ ಅದು ಪಿಪಿಎಫ್‌ಗೆ ದಾರಿ ತೋರಿಸ ಹೊರಟಿರುವುದು. ಅದರ ತರ್ಕವೇನೆಂದರೆ ಪಿಪಿಎಫ್‌ನಂತಹ ಯೋಜನೆ ಇಲ್ಲದಿದ್ದರೆ ಜನ ಸಹಜವಾಗಿಯೇ ಈ ಹೊಸ ಪಿಂಚಣಿ ಯೋಜನೆಗೆ ಸದಸ್ಯರಾಗುತ್ತಾರೆ. ಆಗ ಮಾಡಿದರೆ ಈ ಯೋಜನೆ ತನ್ನ ಕಾಲಮೇಲೆ ನಿಲ್ಲಬಲ್ಲುದಂತೆ.

ಹೇಗಿದೆ ಈ ಕೇಂದ್ರ ಸರ್ಕಾರದ ಆಟ?

'ಎಲ್ಲಾ ನಮ್ಮ ಹಣೆ ಬರಹ' ಎಂದು ತಮ್ಮನ್ನು ತಾವೇ ಶಪಿಸಿಕೊಳ್ಳುವ ಜನ ಒಂದು ಕಡೆಯಾದರೆ, ತಮ್ಮ ಹಕ್ಕುಗಳಿಗಾಗಿ ಹೋರಾಡಿ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಂಡ ಜನಗಳೂ ಇದ್ದಾರೆ. ಒಂದು ನಿರ್ಜನ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಿ ಅನೇಕ ಬಗೆಯ ಕಷ್ಟನಷ್ಟಗಳನ್ನು ಎದುರಿಸಿ ನಿರಂತರ ಹೋರಾಟದ ಮೂಲಕ ತಮ್ಮ ನಾಗರಿಕ ಹಾಗೂ ರಾಜಕೀಯ ಹಕ್ಕುಗಳನ್ನು ಗಳಿಸಿಕೊಂಡ ರಾಮದುರ್ಗದ ಭಾಗ್ಯನಗರ ಜನರ ಸಾಧನೆಯ ವೃತ್ತಾಂತ ಇಲ್ಲಿದೆ.

ಹೋರಾಟದಿಂದ ಅರಳಿದ ಬದುಕು

ಗೈಬು ಜೈನೆಖಾನ

ಇವತ್ತು ಲಂಚವಿಲ್ಲದೇ ಯಾವುದೇ ಕೆಲಸ ಆಗುತ್ತಿಲ್ಲ, ಸಣ್ಣ ಸರಕಾರಿ ಅಧಿಕಾರಿಯಿಂದ ಹಿಡಿದು ಪ್ರಧಾನ ಮಂತ್ರಿಯವರೆಗೂ ಭ್ರಷ್ಟಾಚಾರದ ಹೆಮ್ಮರ ಬೆಳೆದು ನಿಂತಿದೆ. ಭ್ರಷ್ಟಾಚಾರದ ಪಿಡುಗು ಜನಸಾಮಾನ್ಯರ ಜೀವ ಹಿಂಡುತ್ತಿದೆ. ಆದರೆ ಭ್ರಷ್ಟಾಚಾರವನ್ನು ತಡೆಯಲು ಮತ್ತು ನಮ್ಮ ಹಕ್ಕುಗಳನ್ನು ಪಡೆಯಲು ನಾವೆಲ್ಲ ಹೋರಾಟ ಮಾಡಿದರೆ ನಮಗೆ ಜಯ ಸಿಗುವುದು ಖಂಡಿತವೆಂದು ಬೆಳಗಾವಿಯ ರಾಮದುರ್ಗ ತಾಲೂಕಿನ ತುರನೂರು ಗ್ರಾಮಪಂಚಾಯತಿ ವ್ಯಾಪ್ತಿಯ ಭಾಗ್ಯನಗರದ ಜನರಂತೂ ಮನಗಂಡಿದ್ದಾರೆ.

ವಸತಿಗಾಗಿ ಹೋರಾಟ: ರಾಮದುರ್ಗ ಪುರಸಭೆಯ 8 ಎಕರೆ 23 ಗುಂಟೆ ಜಾಗದಲ್ಲಿ ಪುರಸಭೆಯವರು ಕಸ ಚೆಲ್ಲುತ್ತಿದ್ದರು. ನಗರದ ಹಿಂದುಳಿದ ವರ್ಗದ ವಸತಿಹೀನ ಬಡಜನರು, ಕೂಲಿಕಾರರು ಇಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ತಮಗೊಂದು ನೆಲೆ ಸಿಕ್ಕಿತು, ಎಂದು ನಿಟ್ಟುಸಿರು ಬಿಡುವ ಹೊತ್ತಿಗೆ ಪುರಸಭೆಯ ಸದಸ್ಯರು ಮತ್ತು ಅಧಿಕಾರಿಗಳು ಕೂಡಲೇ ನಿಮ್ಮ ಗುಡಿಸಲುಗಳ ಕಿತ್ತುಕೊಂಡು ಹೋಗಿ, ಇಲ್ಲದಿದ್ದರೆ ನೋಡಿ, ಎಂದು ಅವರನ್ನು ಬೆದರಿಸಿದರು.


ಹಾಗೆ ಹೀಗೆ ಅಂತ ಎರಡು ವರುಷಗಳು ದಾಟಿದ ಮೇಲೆ ಪುರಸಭೆ ಚುನಾವಣೆ ಬಂತು. ಆಗ ಪುರಸಭೆಯವರು ಯಾವುದೇ ತೊಂದರೆ ಕೊಡಲಿಲ್ಲ.

ಚುನಾವಣೆ ನಂತರ ಕೆಲವು ತಿಂಗಳ ಬಳಿಕ ಪುರಸಭೆಯವರು ಈ ಗುಡಿಸಲುಗಳ ಮುಂದೆ ಮತ್ತೆ ಊರಿನ ಕಸವನ್ನು ತಂದು ಹಾಕಲು ಶುರು ಮಾಡಿದರು. ಪುರಸಭೆಯ ನೌಕರರೊಂದಿಗೆ ದಿನಾಲೂ ತಕರಾರು, ಜಗಳ. ಇಷ್ಟರಲ್ಲಿ ನಗರದಲ್ಲಿ ಕೆಂಬಾವುಟದ ಪ್ರಭಾವ ಬೆಳೆಯತೊಡಗಿತ್ತು. ಬೆವಕನಮಡ್ಡಿಯ ಜನರು ಸಿ.ಪಿ.ಐ(ಎಂ) ಮುಖಂಡರಾದ ವ್ಹಿ.ಪಿ. ಕುಲಕರ್ಣಿಯವರನ್ನು ಭೇಟಿಯಾಗಿ ತಮ್ಮ ಸಮಸ್ಯೆಯ ಕುರಿತು ಅವರೊಂದಿಗೆ ಚರ್ಚಿಸಿದರು. 'ವಸತಿ-ರಹಿತರ ಸಂಘ ಕಟ್ಟಿದರು. ಭೀಮಸಿ ಬಂಡಿವಡ್ಡರ, ನಾಗಪ್ಪ ಸಂಗೊಳ್ಳಿ ಫಕ್ರು ನದಾಫ್, ಪಡಿಯಪ್ಪ ಶಾನವಾಡ, ಹಣಮಂತ ಹೊಸಕೋಟೆ, ಅಲ್ಲಾಸಾಬ ಭಾಗವಾನ, ಓಣಿಯ ಹಿರಿಯರಾದ ಕುತುಬುಸಾಬ ಖಲೀಫ್ ಮೊದಲಾದವರ ಮುಖಂಡತ್ವದಲ್ಲಿ ಹೋರಾಟ ಪ್ರಾರಂಭವಾಯಿತು.

1989 ರಲ್ಲಿ ಬೆನಕನಮಡ್ಡಿಯ ಹೆಸರನ್ನು ಬದಲಾಯಿಸಿ ಭಾಗ್ಯನಗರ ಎಂದು ನಾಮಕರಣ ಮಾಡಲಾಯಿತು. ಇದರಿಂದ ಕುಪಿತರಾದ ಊರ ಶ್ರೀಮಂತರು ಹೇಗಾದರೂ ಮಾಡಿ ಸಂಘಟನೆಯನ್ನು ಒಡೆದು ಗುಡಿಸಲುಗಳನ್ನು ಕಿತ್ತೊಗೆಯಬೇಕೆಂಬ ಹಟದಿಂದ ಪುಡಾರಿಗಳನ್ನು ಮತ್ತು ಪುರಸಭೆ ಸಿಬ್ಬಂದಿಗಳನ್ನು ಕಳಿಸಿ 'ಪುರಸಭೆ ಜಾಗ' ಎಂದು ಬೋರ್ಡ್ ಹಚ್ಚಿ ಜಗಳ ಪ್ರಾರಂಭ ಮಾಡಿದರು. ಆಗ ವಾಹನ ಚಾಲಕ ಸಂಘದ ದಾದಾಖಲಂದರ ಬೆಣ್ಣಿ, ಹುಸೇನ ಪಡೇಕನೂರ, ಮೂಸಾ ಅಲಿ, ಹೊನವಾಡ, ಅಬ್ಬಾಸ ಜಮಾದಾರ, ಪ್ರಕಾಶ ಮುನವಳ್ಳಿ ಇವರೆಲ್ಲರೂ ಗುಡಿಸಲುವಾಸಿಗಳ ಬೆಂಬಲಕ್ಕೆ ನಿಂತರು.

ಬಡವರು ಕಟ್ಟಿಕೊಂಡ ಗುಡಿಸಲುಗಳಿಗೆ ಹಕ್ಕುಪತ್ರ ಕೊಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿತು. ತಹಶೀಲ್ದಾರ ಕಚೇರಿ ಎದುರು ವಿ.ಪಿ.ಕುಲಕರ್ಣಿಯವರು ಅಮರಣ ಉಪವಾಸ ಸತ್ಯಾಗ್ರಹ ಕೈಗೊಂಡರು. ಆಗಿನ ಜಿಲ್ಲಾಧಿಕಾರಿಗಳಾದ ಗುರುಚರಣ ಮತ್ತು ಉಪವಿಭಾಗಾಧಿಕಾರಿಗಳಾದ ಅಜೀಜ ಸೇಠರವರು ಹಕ್ಕುಪತ್ರ ವಿತರಿಸುವ ಆಶ್ವಾಸನೆ ಕೊಟ್ಟಾಗ ಸತ್ಯಾಗ್ರಹ ಹಿಂತೆಗೆದುಕೊಳ್ಳಲಾಯಿತು.

ಅಂದಿನಿಂದ ಯಾವುದೇ ತೊಂದರೆ ಎದುರಾಗಲಿಲ್ಲ. ಮತ್ತೆ ಬಹಳಷ್ಟು ಜನರು ಭಾಗ್ಯನಗರದಲ್ಲಿ ಅರಣ್ಯ ಇಲಾಖೆ ಜಾಗೆಯಲ್ಲಿ ಮನೆಗಳನ್ನು ಕಟ್ಟಿಕೊಂಡರು. ಅರಣ್ಯ ಇಲಾಖೆಯವರು ಮನೆಗಳನ್ನು ಒಡೆಯಲಿಕ್ಕೆ ಬುಲ್ಡೋಜರ ತಂದರೂ ಸಹ ಜನ ಹೆದರದೆ ಕೆಂಬಾವುಟದಡಿಯಲ್ಲಿ ಪ್ರತಿಭಟಿಸಿ ತಮ್ಮ ನಿವೇಶನಗಳನ್ನು ಉಳಿಸಿಕೊಂಡರು.



ಹಕ್ಕಿಗಾಗಿ ಹೋರಾಟ' - ಜನರನ್ನು ಹುರಿದುಂಬಿಸಿ ಮಾತನಾಡುತ್ತಿರುವ ಸಂಗಾತಿ ವಿ.ಪಿ.ಕುಲಕರ್ಣಿ, ಪಕ್ಕದಲ್ಲಿ ಪೈಬು


ಪಡಿತರ ಚೀಟಿಗಾಗಿ ಹೋರಾಟ

ರಲ್ಲಿ ಇಲ್ಲಿಯ ನಿವಾಸಿಗಳಿಗೆ ಪಡಿತರ ಚೀಟಿ ಕೊಡಬೇಕೆಂದು ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು. ಕೆಲಸ ಆಗಲಿಲ್ಲ, ತಹಶೀಲ್ದಾರ ಆಫೀಸ್ ಎದುರು ಪಡಿತರ ಚೀಟಿಗೆ ಒತ್ತಾಯಿಸಿ ಮತ ಪ್ರದರ್ಶನ ನಡೆಸಿದಾಗ ತಹಶೀಲ್ದಾರರು 200 ಫೋಟೊ ಕಾರ್ಡ್ ಕೊಟ್ಟರು, ಇದು ಹೋರಾಟಕ್ಕೆ ದೊರೆತ ಎರಡನೇಯ ಜಯ.

ಇತ್ತೀಚಿಗೆ ಬಿ.ಪಿ.ಎಲ್. ಕಾರ್ಡಿನ ಸರ್ವೆ ನಡೆಸಿ ಭಾಗ್ಯನಗರ ಮತ್ತು ಶ್ರೀಪತಿನಗರಕ್ಕೆ 360 ಕ್ಕಿಂತಲೂ ಮೇಲ್ಪಟ್ಟು ಹಳದಿ ಕಾರ್ಡುಗಳನ್ನು ಕೊಡಿಸಲಿಕ್ಕೆ ಸಾಧ್ಯವಾಯಿತು. ರಾಜ್ಯದಲ್ಲೇ ಪ್ರಥಮವಾಗಿ ಹಳದಿ ಕಾರ್ಡು ಹಂಚಿದ್ದು ರಾಮದುರ್ಗದ ಭಾಗ್ಯನಗರದಲ್ಲಿ ಮಾತ್ರ.

ಕುಡಿಯುವ ನೀರು ಮತ್ತು ವಿದ್ಯುತ್ ಪೂರೈಕೆಗಾಗಿ ಸತ್ಯಾಗ್ರಹ

ಭಾಗ್ಯನಗರದಲ್ಲಿ ಸಂಜೆ 7-30 ಘಂಟೆಯಾದರೆ. ಅಲ್ಲಿಯ ಜನರು ಅಡ್ಡಾಡುವ ಪರಿಸ್ಥಿತಿ ಇರಲಿಲ್ಲ. ಕಾರಣ ಅಲ್ಲಿ ವಿದ್ಯುತ್ ದೀಪ ಇರಲಿಲ್ಲ. ಕುಡಿಯಲಿಕ್ಕೆ ನೀರು ತರಬೇಕಾದರೆ ಒಂದುವರೆ ಕಿ.ಮಿ ದೂರದಿಂದ ತರುವಂತ ಪರಿಸ್ಥಿತಿ ಇತ್ತು. ಭಾಗ್ಯನಗರದಲ್ಲಿ ನೀರಿನ ವ್ಯವಸ್ಥೆ ಆಗಬೇಕೆಂದು 1991 ರಲ್ಲಿ 500 ಜನರ ಪಂಜಿನ ಮೆರವಣಿಗೆ ಮಾಡಲಾಯಿತು, ಅಲ್ಲಿಂದ ಸತತವಾಗಿ ಹೋರಾಟ ನಡೆಸಿ ಕೊನೆಗೆ 1992 ರಲ್ಲಿ ವಿ.ಪಿ.ಕುಲಕರ್ಣಿಯವರು ನೀರಿಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡರು. ಸತತ 9 ದಿನ ಸತ್ಯಾಗ್ರಹ ನಡೆಸಿದಾಗ, ಅವರ ಸ್ಥಿತಿ ಚಿಂತಾಜನಕವಾಗಿತ್ತು. ಆಗ ಬೈಲಹೊಂಗಲದಿಂದ ಅಸಿಸ್ಟೆಂಟ್ ಕಮೀಷನರರು ಬಂದು ಮಿನಿವಾಟರ್ ಟ್ಯಾಂಕ್ ಮೂಲಕ ನೀರಿನ ವ್ಯವಸ್ಥೆ ಮಾಡಿದರು. ಅದೇ ವೇಳೆಯಲ್ಲಿ ಭಾಗ್ಯನಗರಕ್ಕೆ ವಿದ್ಯುತ್ ದೀಪ ಮಂಜೂರು ಮಾಡಲಾಯಿತು. ಪುರಸಭೆಯವರು ಸುಮಾರು 18 ಸಾವಿರ ರೂ. ತುಂಬಿ ವಿದ್ಯುತ್ ಒದಗಿಸಿದರು.



ಹೋರಾಟದಿಂದ ಅಧಿಕಾರಕ್ಕೆ ಅಧ್ಯಕ್ಷ ನಾಗಪ್ಪ ಸಂಗೊಳ್ಳಿ

ಚುನಾವಣೆ

ಭಾಗ್ಯನಗರದ ಜನಗಳಿಗೆ 1983 ರಿಂದ 1990 ರವರೆಗೆ ಪುರಸಭೆಗೆ ಮತದಾನ ಮಾಡುವ ಹಕ್ಕು ಇತ್ತು. ಇಲ್ಲಿ ಸಿಪಿಐ(ಎಂ) ನ ಪ್ರತಿನಿಧಿಯಾಗಿ ಕುಲಕರ್ಣಿಯವರು ಆರಿಸಿ ಬರಬಾರದೆಂಬ ದುರುದ್ದೇಶದಿಂದ 1990ರಲ್ಲಿ ಭಾಗ್ಯನಗರವು ಪುರಸಭೆ ವ್ಯಾಪ್ತಿಯೊಳಗೆ ಇಲ್ಲ ಎಂದು ಠರಾವು ಮಾಡಿ ಅಲ್ಲಿಯ 600 ಜನರ ಮತ ಚಲಾಯಿಸುವ ಹಕ್ಕನ್ನು ಕಸಿದುಕೊಂಡರು. ಆದರೂ ಇಲ್ಲಿಯ ಜನ ಹೆದರದೆ ತಮ್ಮ ಹಕ್ಕುಗಳಿಗೆ ಹೋರಾಟ ಮುಂದುವರೆಸಿದರು.

ಮುಂದೆ ಭಾಗ್ಯನಗರವನ್ನು ತುರನೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿಸಿಕೊಳ್ಳಲಾಯಿತು. 1993 ರಲ್ಲಿ ಪಂಚಾಯತಿ ಚುನಾವಣೆ ಬಂದವು. ತುರನೂರು ಗ್ರಾಮದ ಕೆಲವು ಕುತಂತ್ರಿಗಳು ಸೇರಿಕೊಂಡು ತುರನೂರು ಮತ್ತು ಭಾಗ್ಯನಗರದ ಒಂದು ಭಾಗ ಒಡೆದು 1 ನೇ ವಾರ್ಡ್ ಎಂದು ವಿಂಗಡಿಸಿ ತುರನೂರಕ್ಕೆ 800 ಮತದಾರರು ಮತ್ತು ಭಾಗ್ಯನಗರಕ್ಕೆ 600 ಮತದಾರರಂತೆ ವಿಂಗಡಿಸಿದರು. 2 ನೇಯ ವಾರ್ಡಿಗೆ ತುರನೂರು ಒಂದು ಭಾಗ ಹಾಗೂ ಭಾಗ್ಯನಗರ ಮತ್ತು ಶ್ರೀಪತಿನಗರ ಸೇರಿಸಿ ತುರನೂರಕ್ಕೆ 680 ಹಾಗೂ ಈ ಕಡೆ 480 ಮತದಾರರು ಇರುವಂತೆ ವಿಂಗಡಿಸಲಾಯಿತು. ಸಿಪಿಐ(ಎಂ) ಅಭ್ಯರ್ಥಿಗಳು ಆಯ್ಕೆಯಾಗದಂತೆ ಮಾಡುವುದೇ ಅವರ ಉದ್ದೇಶವಾಗಿತ್ತು. ಸಿಪಿಐ(ಎಂ) ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಯಿತು. ಚುನಾವಣೆ ಮುಗಿಯಿತು. ಭಾಗ್ಯನಗರದ ಜನ ಪೂರ್ತಿಯಾಗಿ ಸಿಪಿಐ(ಎಂ) ಅಭ್ಯರ್ಥಿಗಳಿಗೆ ಮತಕೊಟ್ಟರೂ ಅವರು ಗೆಲ್ಲಲಿಲ್ಲ. ಮತದಾರರ ವಿಂಗಡನೆಯ ಮೋಸ ಬಯಲಾಯಿತು.

ತುರನೂರ ಪಂಚಾಯತಿಯ ಅಧಿಕಾರಸ್ತರಿಂದ ಭಾಗ್ಯನಗರಕ್ಕೆ ಏನೂ ಅಭಿವೃದ್ಧಿ ಕೆಲಸವಾಗಲಿಲ್ಲ. ಮುಂದೆ 1999 ರ ಪಂಚಾಯತ ಚುನಾವಣೆ ಸಮೀಪಿಸುತ್ತಿದ್ದಂತೆ ಜನಗಣತಿ ಅಧಿಕಾರಿಗಳ ಮೇಲೆ ಒತ್ತಡ ಹಾಕಿದ್ದರಿಂದ ತುರನೂರ ಪಂಚಾಯತ ವ್ಯಾಪ್ತಿಯ ವಾರ್ಡುಗಳು ಸರಿಯಾಗಿ ಮರು ವಿಂಗಡನೆಯಾಗುವಂತೆ ಆಯಿತು. ಇದೇ ವೇಳೆಯಲ್ಲಿ ಶ್ರೀಪತಿ ನಗರದ ಜನರಿಗೂ ಮತದಾನ ಮಾಡುವ ಹಕ್ಕು ಕೊಡಿಸಲಾಯಿತು. ಅಲ್ಲಿಯ ಜನರೂ ಸಹ ಸಂಘಟನೆ ಜೊತೆಗೆ ನಿಂತರು. 2000 ಫೆಬ್ರವರಿಯಲ್ಲಿ ಚುನಾವಣೆ ನಡೆದವು, ಸಿಪಿಐ(ಎಂ) ಪಕ್ಷದ 6 ಅಭ್ಯರ್ಥಿಗಳು ಆಯ್ಕೆಯಾದರು.

ತುರನೂರು ಗ್ರಾಮ ಪಂಚಾಯತಕ್ಕೆ ಸಿಪಿಐ(ಎಂ) ಪಕ್ಷ ಬಹುಮತ ಪಡೆಯುವುದರೊಂದಿಗೆ ಅಲ್ಲಿ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ದೊರೆಯಿತು. ಆಶ್ರಯ, ಅಂಬೇಡ್ಕರ, ಇಂದಿರಾ ಆವಾಸ ಯೋಜನೆಯಡಿಯಲ್ಲಿ ಹಿಂದಿನ ಕಮಿಟಿಯವರು ಶ್ರೀಪತಿನಗರ ಮತ್ತು ಭಾಗ್ಯನಗರವನ್ನು ಕಡೆಗಣಿಸಿದ್ದರು. ಸಿಪಿಐ(ಎಂ) ಕಮಿಟಿ ಬಂದ ನಂತರ ಯಾವುದೇ ತಾರತಮ್ಯವಿಲ್ಲದೆ ಕೆಲಸಗಳು ಆಗಲಾರಂಭಿಸಿದವು. ಎಸ್.ಸಿ/ ಎಸ್.ಟಿ ಜನಗಳಿಗೆ ಮನೆಗಳಾದವು. 1993 ರಿಂದ 2000 ವರೆಗೆ ಆದ ಅವ್ಯವಹಾರಗಳನ್ನು ವಿಚಾರಣೆಗೆ ಒಳಪಡಿಸಲಾಯಿತು. ವಿದ್ಯುತ್ ದೀಪಕ್ಕೆ ಈಗಾಗಲೇ 1.94 ಲಕ್ಷ ರೂ.ಗಳನ್ನು ತುಂಬಿ ಭಾಗ್ಯನಗರಕ್ಕೆ 61 ಶ್ರೀಪತಿನಗರಕ್ಕೆ 4 ರಂಕಲಕೊಪ್ಪಕ್ಕೆ 8 ಬೀದಿ ದೀಪಗಳನ್ನು ಮಂಜೂರು ಮಾಡಿಸಿ ಜನ ಮೆಚ್ಚುಗೆ ಪಡೆಯುವಂತಾಯಿತು.

ಕೋಮು ದ್ವೇಷ ಹುಟ್ಟಿ ಗಲಭೆ ಎಬ್ಬಿಸಲು ಅನೇಕ ಕು ಪ್ರಯತ್ನ ನಡೆಯಿತಾದರೂ ಅಲ್ಲಿಯ ಜನ ಚದುರದ ಒಂದಾಗಿ ಬಾಳುತ್ತಿದ್ದಾರೆ. 'ಮಿ ಭಾರತ' ಎಂದು ಭಾಗ್ಯನಗರ ಹೆಸರು ಬಂದಿದೆ. ಕಾರಣ ಇ ಎಲ್ಲಾ ಜಾತಿಯ ದುಡಿಯುವ ಜನರು ವಾ ಇದ್ದಾರೆ. ಭಾಗ್ಯನಗರ ಶ್ರೀಪತಿನಗರದ ದುಡಿಯು ವರ್ಗದ ಜನಗಳೇ ಸಿಪಿಐ(ಎಂ) ಪಕ್ಷದ ಬೆನ್ನೆಲುಬಾ ಆಗಿದ್ದಾರೆ.

ಮರು ಚುನಾವಣೆ:- ತುರನೂರು ಗ್ರಾಮ ಪಂಚಾಯತಕ್ಕೆ ಆಯ್ಕೆಯಾದ ಸಿಪಿಐ(ಎಂ) ಸದಸ್ಯ ಖುತುಬುಸಾಬ ಖಲೀಫ್ ತೀರಿಕೊಂಡಿದ್ದರಿಂದ ಆ ಸ್ಥಾನವು ಖಾಲಿಯಾಯಿತು. ತುರನೂರು ಪಂಚಾಯತಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸವನ್ನೂ ಕಾಂ. ನಾಗಪ್ಪ ಸಂಗೊಳ್ಳಿ ನಿರ್ವಹಿಸುತ್ತಿದ್ದರು.

ಇದೇ ಸಮಯದಲ್ಲಿ ತೆರವು ಆದ ಜಾಗಕ್ಕೆ ಚುನಾವಣೆ ದಿನಾಂಕ ನಿಗದಿಯಾಯಿತು. ಕೆಲವು ಮೂಲಭೂತವಾದಿಗಳು ತೀರಿಕೊಂಡ ಸದಸ್ಯ ಮುಸ್ಲಿಂ ಇರುವುದರಿಂದ ಮುಸ್ಲಿಮರೇ ಚುನಾವಣೆಗೆ ನಿಲ್ಲಬೇಕೆಂದು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುವುದು ತಿಳಿದುಬಂತು. ಮರುದಿನವೇ ಎಲ್ಲಾ ಸಮಾಜದವರನ್ನೂ ಕೂಡಿಸಿ ಸಮಾಲೋಚನೆ ಮಾಡಿ ನಾಗಪ್ಪನವರನ್ನು ಆರಿಸಿತರಲು ನಿರ್ಧರಿಸಲಾಯಿತು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ನಾಗಪ್ಪ ಸಂಗೊಳ್ಳಿರವರು ಅವಿರೋಧವಾಗಿ ಆಯ್ಕೆಯಾದರು.

ಎರಡುವರೆ ವರ್ಷದ ನಂತರ ಅಧ್ಯಕ್ಷ ಸ್ಥಾನ ಚುನಾವಣೆ ಬಂದಾಗ ತುರನೂರು ಪಂಚಾಯತ ಅಧ್ಯಕ್ಷ ಸ್ಥಾನ ಎಸ್.ಟಿ.-ಗಂಡು ಎಂದು ನಿಗದಿಯಾಯಿತು. ಆಯ್ಕೆಯಾದ ಚುನಾಯಿತ ಪ್ರತಿನಿಧಿಗಳಲ್ಲಿ ನಾಗಪ್ಪ ಸಂಗೊಳ್ಳಿ ಎಸ್.ಟಿ. ಇರುವುದರಿಂದ ಅಧ್ಯಕ್ಷ ಸ್ಥಾನಕ್ಕೆ ಅವರ ಅವಿರೋಧ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷ ಸ್ಥಾನವನ್ನು ಮಾತ್ರ ತುರನೂರು ಗ್ರಾಮದವರಿಗೆ ಬಿಟ್ಟುಕೊಡಲಾಯಿತು.

ನಾಗಪ್ಪ ಸಂಗೊಳ್ಳಿರವರು ಅಧ್ಯಕ್ಷ ಸ್ಥಾನ ವಹಿಸಿಕೊಂಡ ಮೇಲೆ ತುರನೂರು, ರಂಕಲಕೊಪ್ಪ, ಶ್ರೀಪತಿನಗರ ಮತ್ತು ಭಾಗ್ಯನಗರದಲ್ಲಿ ಸಮರ್ಪಕ ಕೆಲಸ ಮಾಡುತ್ತಾ ಜನ ಮೆಚ್ಚು

ಪುಟ 1

..ಪರ್ಯಾಯ ನೀತಿಗಳಿಗಾಗಿ ಪಾದಯಾತ್ರೆ

ಟ 3 ರಿಂದ

ಾನವೀಯತೆ ಮತ್ತು ಬದಲಾವಣೆಗಾಗಿ
ೕರಾಡುವ ಛಲವುಳ್ಳವರುಸೇರಿ ರಾಜಭವನದತ್ತ
ದಯಾತ್ರೆ ನಡೆಸಿ, ಪೋಲೀಸರು ತಡೆದಲ್ಲೇ
ತಿಭಟನೆಯ ಹಾಗೂ ಆಗ್ರಹದ ಸಭೆ ನಡೆಸಿದರು.
ರೈತರ ಆತ್ಮಹತ್ಯೆಗಳಿಗೆ ಕಾರಣವಾಗಿರುವ



ಗತೀಕರಣ ನೀತಿ ವಾಪಸ್ಸಾತಿ, ಮುಕ್ತ ಆಮದು
ತಿ ರದ್ದು, ಬಡ ಮಧ್ಯಮ ರೈತರ ಸಾಲಮನ್ನಾ,
ಸಬ್ಸಿಡಿ ಕಡಿತ ನೀತಿಗೆ ತಡೆ, ಮೃತ ರೈತರ
ಟುಂಬಗಳಿಗೆ ಸೂಕ್ತ ಪರಿಹಾರ, ಬರಪರಿಹಾರ
ಮಗಾರಿಗಾಗಿ ಒತ್ತಾಯಿಸಿ ಇಂದು ಹಿರಿಯ
ತಂತ್ರ್ಯ ಹೋರಾಟಗಾರರು, ಪ್ರಗತಿಪರ
ಮೀಜಿಗಳು ಸಾಮಾಜಿಕ ಕಾರ್ಯಕರ್ತರು,
ಹಿತಿಗಳು, ದಲಿತ - ರೈತ - ಕಾರ್ಮಿಕ -
ಲಿಕಾರ - ವಿದ್ಯಾರ್ಥಿ-ಯುವಜನ-ಮಹಿಳಾ
ಕೂಡ ಜನಪರ ಸಂಘಟನೆಗಳ ನೇತೃತ್ವದಲ್ಲಿ
ದು ಮಹಾತ್ಮಗಾಂಧಿ ಪ್ರತಿಮೆಯ ಬಳಿಯಿಂದ
ಜಭವನದ ಕಡೆಗೆ ಪಾದಯಾತ್ರೆ
ತಿಸಲಾಯಿತು.

ಮಾನವ ಧರ್ಮಪೀಠದ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿ ನೇತೃತ್ವವಹಿಸಿದ್ದ ಪಾದಯಾತ್ರೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಲ್.ಸಿ.ಜೈನ್, ಸುಮಂಗಲಿ ಸೇವಾಶ್ರಮದ ಸುಶೀಲಮ್ಮ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಲಕ್ಷ್ಮೀ ನಾರಾಯಣ ನಾಗವಾರ, ಡಿಎಸ್‌ಎಸ್(ಅಂಬೇಡ್ಕರ್ ವಾದ)ನ ಮಾವಳ್ಳಿ ಶಂಕರ್, ಸಮತಾ ಸೈನಿಕ ದಳದ ರಾಜ್ಯಾಧ್ಯಕ್ಷ ವೆಕಟಸ್ವಾಮಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್, ಸಾಹಿತಿಗಳಾದ ಶೂದ್ರ ಶ್ರೀನಿವಾಸ್, ಸಮುದಾಯ ಸಂಘಟನೆಯ ರವೀಂದ್ರನಾಥ, ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತ ಸಂಘದ ರಾಜ್ಯಾಧ್ಯಕ್ಷ ಗುಡಿಹಳ್ಳಿ ನಾಗರಾಜ್, ಐಕ್ಯರಂಗ ಸಂಪಾದಕರಾದ ಎಸ್.ವೈ. ಗುರುಶಾಂತ್, ಪತ್ರಕರ್ತೆ ಡಾ। ವಿಜಯ, ಟಿಪ್ಪು ಪ್ರಚಾರ ಸಮಿತಿಯ ತಲಕಾಡು ಚಿಕ್ಕರಂಗೇಗೌಡ, ಶಫೀವುಲ್ಲಾ, ಜನವಾದಿ ಮಹಿಳಾ ಸಂಘಟನೆಯ ಎನ್. ಪ್ರಭಾ, ಹಿರಿಯ ನ್ಯಾಯವಾದಿ ನಾಗಮೋಹನ್‌ದಾಸ್, ರೈತ ಕೂಲಿಕಾರರ ಸಂಘದ ಶಿವಶಂಕರ್, ಎಸ್.ಎಫ್.ಐ. ರಾಜ್ಯ ಅಧ್ಯಕ್ಷೆ ಕೆ.ಎಸ್. ಲಕ್ಷ್ಮಿ, ಡಿ.ವೈ.ಎಫ್.ಐ. ನ ರಾಜ್ಯ ಉಪಾಧ್ಯಕ್ಷ ಲಕ್ಷ್ಮಣ್ ಕುಮಾರ್, ವಿಮಾ ನೌಕರರ ಸಂಘಟನೆಯ ಚಂದನ್, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ, ಕರ್ನಾಟಕ ಪ್ರಾಂತ ರೈತ ಸಂಘದ ಜಿ.ಸಿ. ಬಯ್ಯಾರೆಡ್ಡಿ, ಸಿಐಟಿಯುನ ಜಿಲ್ಲಾಧ್ಯಕ್ಷ ಆರ್. ಶ್ರೀನಿವಾಸ್ ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯಪಾಲರಿಗೆ ಮನವಿ ಸಲ್ಲಿಸದೇ ಪ್ರತಿಭಟನೆ

ರೈತರ ಗಂಭೀರ ಸಮಸ್ಯೆಗಳ ಬಗೆಗೆ ರಾಜ್ಯಪಾಲರ ಕಛೇರಿಯ ನಿರ್ಲಕ್ಷ ಧೋರಣೆ ಖಂಡಿಸಿ ರಾಷ್ಟ್ರಪತಿಗಳಿಗೆ ಮತ್ತು ರಾಜ್ಯ ಪಾಲರಿಗೆ ಚಳುವಳಿಕಾರರು ಸಲ್ಲಿಸಲು ಬಯಸಿದ ಮನವಿ ಪತ್ರವನ್ನು ಸಲ್ಲಿಸದಿರಲು ನಿರ್ಧರಿಸಲಾಯಿತು. ರಾಜ್ಯಪಾಲರು ಅಥವಾ ರಾಜ್ಯಪಾಲರ ಪ್ರತಿನಿಧಿಗಳು ಚಳುವಳಿಕಾರರ ಬಳಿಗೆ ಬಂದು ಮನವಿ ಸ್ವೀಕರಿಸಬೇಕೆಂಬುದನ್ನು ರಾಜ್ಯಪಾಲರ ಕಚೇರಿ ತಿರಸ್ಕರಿಸಿತು. ಮಾತ್ರವಲ್ಲ ಚಳುವಳಿಕಾರರನ್ನು ರಾಜಭವನದವರೆಗೆ ಬಿಡದೇ ಮಿನ್ಸ್ ಸ್ಕೇರ್‌ಗೂ ಮುಂಚೆಯೇ ತಡೆಗಟ್ಟಿದ ಕ್ರಮವನ್ನು ಸಹ ಚಳುವಳಿಕಾರರು ಖಂಡಿಸಿದರು. ಪೊಲೀಸರು ತಡೆ ಒಡ್ಡಿದ ಕಡೆಯೇ ಪ್ರತಿಭಟನಾ ಸಭೆ ನಡೆಸಲಾಯಿತು. ನಿಯೋಗ ಕಛೇರಿಗೆ ತೆರಳಿ ಮನವಿ ಕೊಡುವ ಪ್ರಸ್ತಾಪವನ್ನು ತಿರಸ್ಕರಿಸಿ ಪ್ರತಿಭಟನಾರ್ತವಾಗಿ ಅಂಚೆ ಮೂಲಕ ಮನವಿ ಕಳಿಸಲು ತೀರ್ಮಾನಿಸಲಾಯಿತು.

ಗುಲ್ಬರ್ಗಾ, ಬೀದರ್ ಮುಂತಾದೆಡೆಗಳಲ್ಲಿ [redacted] ಪಾದಯಾತ್ರೆ ನಡೆದ ವರದಿಗಳಿವೆ.

ಈ ಸರ್ಕಾರ ಜನರಿಂದ ಎಷ್ಟು ದೂರ?

ರೈತರು ತೊಂದರೆಗೀಡಾಗಿ ಜೀವತ್ಯಾಗಕ್ಕೆ ಮೊರೆ ಹೋಗುತ್ತಿದ್ದಾರೆ. ಪರಿಹಾರದ ಹಲವು ಪ್ರಕಟಣೆಗಳಿವೆ. ಆತ್ಮಹತ್ಯೆಗೆ ಮೂಲಕಾರಣ ಹುಡಕಬೇಕು. ರಾಜ್ಯಪಾಲರೇ ಜನರತ್ತ ಬಂದು ಮನವಿ ಸ್ವೀಕರಿಸಿದ್ದರೆ ಅವರ ಸ್ಥಾನದ ಬೆಲೆ ಹೆಚ್ಚುತ್ತಿತ್ತು. ಇಲ್ಲವಾದರೆ ಬೃಹದ್ದಾದ ಹೋರಾಟ ಮಾಡಬೇಕಾಗುತ್ತದೆ. ಇಲ್ಲವಾದರೆ ಅವ್ಯವಸ್ಥೆ ಆಗುತ್ತದೆ.

- ಸುಶೀಲಮ್ಮ, ಸುಮಂಗಲಿ ಸೇವಾಶ್ರಮ

ಜನರನ್ನು ನಾಶಗೊಳಿಸಲು ಸರ್ಕಾರ ಮುಂದಾಗಿದೆ. ಅದರ ವಿರುದ್ಧ ಹೋರಾಡುವುದು ಅನಿವಾರ್ಯ.

- ಲಕ್ಷ್ಮೀನಾರಾಯಣ ನಾಗವಾರ (ಕರಾದಸಂಸ)

ಇಂದು 'ಮಹತ್ವದ ದಿನ'. ಮಹಾತ್ಮಗಾಂಧೀಜಿ 'ಸುಡಿ ಸುಡಿ ಪರದೇಶಿ ವಸ್ತ್ರವ' ಎಂದು ಹತ್ತಾರು ಚಳುವಳಿ ನಡೆದ ಕಾಲ. ಪಿಕೆಟಿಂಗ್, ಹೋರಾಟಗಳು ನಡೆದವು. ಅದರಿಂದ ಜೈಲುವಾಸ ಅನುಭವಿಸಬೇಕಾಯ್ತು. ಅದರೀಗ ಸ್ವಾತಂತ್ರ್ಯದ ಹೋರಾಟದ ಮೂಲಧ್ಯೇಯ ಬಿಟ್ಟುಕೊಡಲಾಗಿದೆ. ಭಾರತದ ಜನರ ಆಶಯಗಳಿಗೆ ದ್ರೋಹ ಬಗೆಯಲಾಗಿದೆ. 1947 ರಿಂದ 97 ರವರೆಗೆ 10 ಸಾವಿರ ವಸ್ತುಗಳ ಆಮದನ್ನು ನಿಷೇಧಿಸಲಾಗಿತ್ತು. ಆದರೆ ಅದನ್ನು ಎನ್‌ಡಿಎ ಸರ್ಕಾರ ತೆಗೆಯಿತು. ಆ ಸುಂಕವನ್ನು ಕಡಿಮೆಗೊಳಿಸುತ್ತಾ ಬರಲಾಗುತ್ತಿದೆ. ಅಮೆರಿಕಾದ ಅಣತಿಗೆ ತಲೆ ಬಾಗುವುದೇ ಪರಮಕರ್ತವ್ಯ ಎಂದು ಪ್ರಧಾನಿ ವಾಜಪೇಯಿ, ಮುಖ್ಯಮಂತ್ರಿ ಕೃಷ್ಣ ಜಾರಿ ಮಾಡುತ್ತಿದ್ದಾರೆ. ಡಬ್ಲ್ಯುಟಿಓ ಒಪ್ಪಂದಗಳ ಅನಾಹುತ ಈಗ ರೈತರ ಸಾಮೂಹಿಕ ಆತ್ಮಹತ್ಯೆಗಳಲ್ಲಿ ಪರ್ಯಾವಸಾನವಾಗುತ್ತಿದೆ.

- ಜಿ.ಎನ್.ನಾಗರಾಜ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಧರಣಿ ಸತ್ಯಾಗ್ರಹದ ಮೂಲಕ ಗಾಂಧೀಜಿಯವರಿಗೆ ಗೌರವ ಅರ್ಪಿಸುತ್ತಿದ್ದೇವೆ. ಅದಕ್ಕಾಗಿ ರೈತರ ಸಾವಿಗೆ ಸರ್ಕಾರಗಳ ನಿಷ್ಕ್ರಿಯತೆಗೆ ಪ್ರತಿಭಟಿಸುತ್ತಿದ್ದೇವೆ. ಭೀಕರ ಸಮಸ್ಯೆ ಪತ್ರಿಕೆಯನ್ನು ಅಣಿಗೊಳಿಸುವಾಗ ಕೊನೆಯ ಹಂತದವರೆಗೂ ರೈತರ ಆತ್ಮಹತ್ಯೆ ವರದಿಗಳು ಬರುತ್ತಲೇ ಇರುತ್ತವೆ. ಜವಾಬ್ದಾರಿ ಇದ್ದರೆ ಸರ್ಕಾರ ರಾಜೀನಾಮೆ ಕೊಟ್ಟು ಹೋಗಬೇಕು. ರೈತ ಸಂಘಟನೆಗಳು ನೀಡಿದ ಸಲಹೆಗಳನ್ನು ತಿರಸ್ಕರಿಸಿರುವುದು ಈ ದುರಂತಕ್ಕೆ ಕಾರಣ. ಪ್ರಶ್ನೆಗಳಿಗೆ ಉತ್ತರಿಸಲು ತತ್ತರಿಸುವ ಸರ್ಕಾರವಾಗಿದೆ. ಮನವಿ ಸ್ವೀಕರಿಸದೇ ಹೋಗುವುದು ಅಧಿಕಾರದಿಂದ ತೊಲಗಲು, ಗೋರಿ ತೋಡಿ ಕೊಳ್ಳುವುದರ ಸೂಚನೆ. ಜನರನ್ನು ಎದುರಿಸಲು ಆಗದ ಕೃತ್ಯ. ತನ್ನ ನಾಶಕ್ಕೆ ಹೊಡೆದುಕೊಳ್ಳುವ ಮೊಳೆಯಿದು. ಆದರೆ ಹೋರಾಟ ನಿಲ್ಲದೇ ನಡೆಯಬೇಕು.

- ಗುಡಿಹಳ್ಳಿ ನಾಗರಾಜ್
ಅಧ್ಯಕ್ಷರು, ಪತ್ರಕರ್ತರ ಸಂಘ

ಸಾಯುತ್ತಿರುವವರನ್ನು ಉಳಿಸಿಕೊಳ್ಳಲು ಸರ್ಕಾರ ಮುಂದಾಗಬೇಕು. ಐಶಾರಾಮಿತನ ಬಿಡಲಿ, ಜನರ ಉಳಿವಿಗೆ ಧಾವಿಸಲಿ. ಇವರ ಆಧುನಿಕ ತಂತ್ರಜ್ಞಾನ ಜನರನ್ನು ಉಳಿಸುವುದರತ್ತ ಇರಲಿ.

- ತಲಕಾಡು ಚಿಕ್ಕರಂಗೇಗೌಡ,
ಕನ್ನಡ ಪರ ಸಂಘಟನೆಗಳು

ರೈತಾಪಿ ಜನ ಬಹಳ ಬಾಧಿತ ಸಮೂಹ. ಸರ್ಕಾರದ ಕಣಜಗಳಲ್ಲಿ ಜೀವ ಹತ್ಯೆಗೈಯುವ ದೆತ್ತೂರಿ ಬೀಜಗಳಿವೆ. ರೈತರ ಪರವೆಂಬ ಸೋಗುಗಳನ್ನು ಬಯಲಿಗೆಳೆಯಬೇಕು. ಸಂಘರ್ಷದ ಸಂಸ್ಕೃತಿ ಮೈಗೂಡಿಸಿಕೊಳ್ಳಬೇಕು. ಮುಂದಿನದ್ದು ಅದೇ ಹಾದಿ.

ಎನ್.ಪ್ರಭಾ ಜ.ಮಹಿಳಾ ಸಂಘಟನೆ

ಡಬ್ಲ್ಯುಟಿಓ ವಿರುದ್ಧದ ಹೋರಾಟ ಜಾಗತೀಕವಾಗಿದೆ. ವಿಶ್ವದಾದ್ಯಂತ ರೈತರ ಸಮಸ್ಯೆ ಹೆಚ್ಚುತ್ತಿದೆ. ಅದಕ್ಕಾಗಿ ಈ ಆತ್ಮಹತ್ಯೆಗಳ ವಿರುದ್ಧ ಹೋರಾಡಲು ಒಗ್ಗಟ್ಟಿನ ಹೋರಾಟ ಬೆಳೆಸಬೇಕು.

ಹೆಚ್.ಪಿ.ಶಿವಪ್ರಕಾಶ್ ರೈತ ಕೂಲಿಕಾರರ ಸಂಘ



ರಾಜಕಾರಣದಲ್ಲಿ ಕ್ರೌರ್ಯ ಹೆಚ್ಚುತ್ತಿದೆ. ಮಾನವೀಯ ಸ್ಪಂದನ ಬೇಕು. ರೈತರ ಆತ್ಮಹತ್ಯೆ ಕಳವಳಕಾರಿ, ಜನರಿಂದ ದೂರವಾದ ಸರ್ಕಾರಗಳು ಉಳಿದಿಲ್ಲ ಎಂಬುದು ಗಮನಿಸ ಬೇಕು. ವಸಾಹತುಶಾಹಿ ಕಾಲದಿಂದ ರಾಜ್ಯಪಾಲರಿಗೆ ಇರುವ ಟೊಳ್ಳು ಕಟ್ಟುಪಾಡುಗಳನ್ನು ನಾವು ಪ್ರತಿಭಟಿಸುತ್ತೇವೆ. ಉನ್ನತ ಕಛೇರಿಯಾದ ರಾಜ್ಯಪಾಲರು ಯೋಚಿಸಬೇಕು. ಜನಪರ-ಜನ ಹತ್ತಿರವಾಗಬೇಕು. ಈ ನೀತಿಗಳು ಬದಲಾವಣೆ ಆಗಬೇಕು. ದೇಶದ ರಕ್ಷಣೆ ಆಗಬೇಕು.

ವೀರಭದ್ರ ಚನ್ನಮಲ್ಲ ಸ್ವಾಮೀಜಿ
ನಿಡುಮಾಮಿಡಿ ಮಾನವ ಧರ್ಮಪೀಠ

ರೈತರ ವಿರೋಧಿಯಾದ ಸರ್ಕಾರಗಳು ಮಣ್ಣು ಮುಕ್ಕುತ್ತವೆ. ನೀತಿ ಬದಲಾಯಿಸಿಕೊಳ್ಳಿ ಎಂದು ಆಗ್ರಹಿಸುತ್ತೇವೆ.

ಜಿ.ಸಿ.ಬಯ್ಯಾರೆಡ್ಡಿ , ಕ.ಪ್ರಾ.ರೈತ ಸಂಘ



..............ಅರಳಿದ ಬದುಕು

ಟ 9 ರಿಂದ

ಡೆದುಕೊಂಡಿದ್ದಾರೆ. ಸಾಮಾನ್ಯ ದುಡಿಯುವ
ನರ ನಡುವೆಯಿಂದ ಬೆಳೆದು ಬಂದ ನಾಗಪ್ಪ
ಗೊಳ್ಳಿ ಪಂಚಾಯತಿ ಅಧ್ಯಕ್ಷರಾದದ್ದು ಇಲ್ಲಿಯ
ನಗಳಿಗೆ ಹೆಮ್ಮೆಯ ವಿಷಯವಾಗಿದೆ.

ಚ್ಛ ಗ್ರಾಮದ ಕೆಲಸ: ಸ್ವಚ್ಛ ಗ್ರಾಮದ
ೋಜನೆಯನ್ನು ತುರನೂರು ಪಂಚಾಯತಿಗೆ
ಂಜೂರು ಮಾಡಿಸಿಕೊಳ್ಳಲು ದೇಣಿಗೆ ಕೊಡಿಸ
ೇಕೆಂದು ನಿರ್ಧರಿಸಿದಾಗ ತುರನೂರು ಗ್ರಾಮ
ತ್ತು ರಂಕಲಕೊಪ್ಪ ಗ್ರಾಮದವರು ಒಪ್ಪಲಿಲ್ಲ.
ಸ್ವಚ್ಛ ಗ್ರಾಮಕ್ಕೆ 2 ಲಕ್ಷ ಕೊಡಿಸಿಕೊಟ್ಟರೆ 20
ದ ಕೆಲಸವಾಗುವುದೆಂದು ಶ್ರೀಪತಿನಗರ ಮತ್ತು
ಗ್ಯನಗರದ ಜನರಿಗೆ ತಿಳಿಸಿ ಹೇಳಲಾಯಿತು.
ನೆ-ಮನೆಗೆ ಹೋಗಿ ದೇಣಿಗೆ ಸಂಗ್ರಹಿಸಿ
ವನ್ನು ತುಂಬಿ ಸ್ವಚ್ಛ ಗ್ರಾಮ ಯೋಜನೆಯಡಿ
ಲ್ಲಿ ಭಾಗ್ಯನಗರ ಮತ್ತು ಶ್ರೀಪತಿ ನಗರಗಳನ್ನು
ಯ್ಕೆ ಮಾಡಿಸಲಾಯಿತು.
ಸೆಪ್ಟೆಂಬರ್ 2002 ರಂದು ಸ್ವಚ್ಛ ಗ್ರಾಮದ
ಸಗಳ ಉದ್ಘಾಟನೆ ಮಾಡಿಸಲಾಯಿತು. ಕೆಲಸದ
ತ್ತಿಗೆ ಹಿಡಿಯಲು ಬಹಳಷ್ಟು ಜನ ಕಂಟ್ರಾಕ್ಟರ್
ಬಂದಿದ್ದರು. ಅವರಿಗೆ ಮನವರಿಕೆ ಮಾಡಿ
ಸದ ಗುತ್ತಿಗೆಯನ್ನು ಸ್ವತಃ ಸಂಘಟನೆಯ
ವಾಗಿ ವಹಿಸಿಕೊಳ್ಳಲಾಯಿತು. ಆ ಮೂಲಕ
ಕೆಲಸ ಆಗುವುದನ್ನು ತಡೆಯಲಾಯಿತು.
ಈಗ ಶ್ರೀಪತಿನಗರ- ಭಾಗ್ಯನಗರ ಗುರುತು
ದ ಹಾಗೆ ಆಗಿದೆ ಎಂದು ರಾಮದುರ್ಗ ಶಹರದ
ಅಚ್ಚರಿ ಪಡುತ್ತಿದ್ದಾರೆ. ಮೊದಲಿದ್ದ ದೊಡ್ಡ-
ಡ್ಡ ಬಂಡೆಗಳು ದೊಡ್ಡ-ದೊಡ್ಡ ತಗ್ಗುಗಳು
ಗ ಡಾಂಬರ ರಸ್ತೆ ಆಗಿದೆ. ಚರಂಡಿ ನಿರ್ಮಾಣ
ಓಣಿ-ಓಣಿಯಲ್ಲಿ ಫರಸಿ ಕೆಲಸವಾಗಿದೆ.
ಗಿಯೂ ಭಾಗ್ಯನಗರ - ಶ್ರೀಪತಿನಗರ ಜನರಿಗೆ
ದ ಬಾಗಿಲು ತೆರೆದಂತೆ ಆಗಿದೆ ಎಂದು ಜನ
ಕೊಳ್ಳುತ್ತಿದ್ದಾರೆ. ಶಾಸಕರು, ಜಿಲ್ಲಾ ಪರಿಷತ್
ಕಾರಿಗಳು ಇಡೀ ಬೆಳಗಾಂವ ಜಿಲ್ಲೆಯಲ್ಲಿ

ಎಲ್ಲಿಯೂ ನಡೆಯದ ಕೆಲಸ ಇಲ್ಲಿ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮನೆ ಇಲ್ಲದವರಿಗೆ ಮನೆ: ಬಹಳಷ್ಟು ಬಡವರಿಗೆ ಮನೆಗಳಿರಲಿಲ್ಲ. ಖುಲ್ಲಾ ಜಾಗಗಳು ಇದ್ದವರಿಗೆ ರಾಜೀವಗಾಂಧಿ ವಸತಿ ಯೋಜನೆ ಅಡಿಯಲ್ಲಿ ಮನೆಗಳನ್ನು ಪಡೆಯಬಹುದೆಂದು ಮನೆಯಿಲ್ಲದ್ದವರನ್ನು ಸಭೆ ಕರೆದು ಹೇಳಲಾಯಿತು. ಕಳೆದ ಒಂದೂವರೆ ವರ್ಷದಿಂದ ಕಾಂ.ವ್ಹಿ.ಪಿ.ಕುಲಕರ್ಣಿ ಅವರು ರಾಜೀವಗಾಂಧಿ ಗೃಹ ನಿರ್ಮಾಣ ಮಂಡಳಿಯಿಂದ ಮನೆಗಳನ್ನು ಮಂಜೂರು ಮಾಡಿಸಿ 100 ಕುಟುಂಬಗಳನ್ನು ಬಿಸಿಲಿನಿಂದ ನೆರಳಿಗೆ ತಂದರು.

ಮನೆಯ ಕಂತುಗಳಿಗೆ ಮತ್ತೆ ಅನೇಕ ಸಲ ಕುಲಕರ್ಣಿರವರು ಓಡಾಡಿ ವಸತಿ ಪಡೆದ ಜನರಿಂದ ಸುಮಾರು 80 ಸಾವಿರ ರೂ. ಸಾಲದ ಕಂತು ಪಾವತಿಸಿದ್ದಾರೆ. ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿ ಮತ್ತೆ 500 ಮನೆ ಕೊಡಲು ಮುಂದೆ ಬಂದಿದ್ದಾರೆ. ಇದು ಕುಲಕರ್ಣಿಯವರ ಪರಿಶ್ರಮ ಮತ್ತು ಜನತೆಯ ಒಗ್ಗಟ್ಟಿಗೆ ದೊರೆತ ಜಯ.

ಶಾಲೆಗಾಗಿ ಒತ್ತಾಯ: ಭಾಗ್ಯನಗರದಿಂದ ಮಕ್ಕಳು ನಗರದ ಶಾಲೆಗೆ ಬರಬೇಕಾದರೆ 1 ಕಿ.ಮೀ. ದೂರವಾಗುವುದರಿಂದ ಭಾಗ್ಯನಗರಕ್ಕೆ ಪ್ರತ್ಯೇಕ ಶಾಲೆ ಬೇಕು ಎಂಬ ಬೇಡಿಕೆಯನ್ನು ಎತ್ತಲಾಯಿತು.

ಪುರಸಭೆ ವ್ಯಾಪ್ತಿಗೆ ಬರುವ ಉದ್ಯಾನವನವನ್ನು ಪುರಸಭೆಯವರು ಬೇರೆಯವರಿಗೆ ಬಿಟ್ಟುಕೊಡುವ ತರಾತುರಿಯಲ್ಲಿದ್ದಾಗ ಕೂಡಲೇ ಮಧ್ಯ ಪ್ರವೇಶ ಮಾಡಿ ಭಾಗ್ಯನಗರದ ಮಕ್ಕಳಿಗೆ ಪ್ರತ್ಯೇಕ ಶಾಲೆಗಾಗಿ ಆ ಸ್ಥಳವನ್ನು ಪಡೆಯಲು ಸಾಧ್ಯವಾಯಿತು. ಭಾಗ್ಯನಗರದಲ್ಲಿ ಜಾತಭೇಧವೆನ್ನದೆ ಎಲ್ಲರೂ ಸೇರಿ ಕೆಲಸ ನಿಭಾಯಿಸುತ್ತಾರೆ. ಅಂದರೆ ಯಾವುದೇ ಕೆಲಸ ಬಂದರೂ ಎಲ್ಲಾ ಜಾತಿಯ ಜನರು ಸೇರಿ ಅದನ್ನು ಪೂರ್ತಿಯಾಗಿ ನಿಂತು ಮಾಡುತ್ತಾರೆ. "ಹೋರಾಟದಿಂದ ನಮ್ಮ ಬದುಕು ಬಂಗಾರವಾಯಿತು" ಎಂದು ಅಲ್ಲಿಯ ಜನ ಹೇಳಿಕೊಳ್ಳುತ್ತಿದ್ದಾರೆ. ●

ಹಾಕಿಯಲ್ಲಿ ಭಾರತಕ್ಕೆ ಮರುಕಳಿಸಿದ ಕೀರ್ತಿ



ಭಾರತ ಹಾಕಿಯಲ್ಲಿ ವಿಶ್ವಕಪ್ ಗೆದ್ದ ನಂತರ ಇಳಿಮುಖ ದಾರಿಯಲ್ಲಿ ಸಾಗಿತ್ತು. ನಂತರ ಇದೀಗ ಪುನಃ ಏಷ್ಯಕಪ್ ಅನ್ನು ಗೆದ್ದುಕೊಂಡು ದೇಶದ ಹಾಕಿ ಪ್ರಿಯರಿಗೆ ಹರುಷ ತಂದಿದೆ.

ಹಾಕಿಯಲ್ಲಿ ಭಾರತ ಪ್ರಪ್ರಥಮ ಬಾರಿ ಏಷ್ಯಾ ಕಪ್ ಗೆದ್ದು ದೇಶಕ್ಕೆ ಕೀರ್ತಿ ತಂದಿದೆ. ಹಾಕಿ ಭಾರತದ ರಾಷ್ಟ್ರೀಯ ಕ್ರೀಡೆ (ಆದರೆ ದುರಂತವೆಂದರೆ ಅನೇಕರು ಕ್ರಿಕೆಟ್ ಭಾರತದ ರಾಷ್ಟ್ರೀಯ ಕ್ರೀಡೆ ಎಂದುಕೊಂಡಿದ್ದಾರೆ). ಕಳೆದ ಸೆಪ್ಟೆಂಬರ್ 28 ರಂದು ಮಲೇಶಿಯಾದ ರಾಜಧಾನಿ ಕೌಲಾಲಂಪುರದಲ್ಲಿ ನಡೆದ ಏಷ್ಯಾಕಪ್ ಹಾಕಿ ಪಂದ್ಯಾವಳಿಯಲ್ಲಿ ಭಾರತ ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಸೋಲಿಸಿ ಏಷ್ಯಾಕಪ್ ಅನ್ನು ಪ್ರಥಮ ಬಾರಿಗೆ ಗೆದ್ದುಕೊಂಡಿದೆ. ಸೆಮಿಫೈನಲ್‌ನಲ್ಲಿ ಭಾರತ ಏಷ್ಯಾ ಖಂಡದ ಮತ್ತೊಂದು ಪ್ರಬಲ ಶಕ್ತಿಯಾದ ದಕ್ಷಿಣ ಕೋರಿಯಾವನ್ನು ಸೋಲಿಸಿತು.

ಹಿಂದೆ ಕ್ರೀಡೆ ಎಂದರೆ ಭಾರತವನ್ನು ಹಾಕಿ ಆಟದ ಮೂಲಕವೇ ಜಗತ್ತು ಗುರುತಿಸುತ್ತಿತ್ತು. ಒಲಂಪಿಕ್ಸ್‌ನಲ್ಲಿ ಹಾಕಿ ಸೇರ್ಪಡೆಯಾದ ನಂತರ ಸತತ 8 ಬಾರಿ ಒಲಂಪಿಕ್ಸ್‌ನಲ್ಲಿ ಭಾರತ ಚಿನ್ನ ಗೆದ್ದುಕೊಂಡಿದೆ. ದೇಶ ವಿಭಜನೆಯಾದ ನಂತರ ಪಾಕಿಸ್ತಾನ ಹಾಕಿಯಲ್ಲಿ ಇನ್ನೊಂದು ಪ್ರಬಲ ಶಕ್ತಿಯಾಯಿತು. 70 ರ ದಶಕದ ನಂತರ ಆಸ್ಟ್ರೇಲಿಯಾ, ಜರ್ಮನಿ, ಹಾಲೆಂಡ್ ಹಾಕಿಯಲ್ಲಿ ಪ್ರಬಲ ರಾಷ್ಟ್ರಗಳಾದವು. 1975 ರಲ್ಲಿ ಪ್ರಥಮ ಬಾರಿಗೆ ಭಾರತ ಹಾಕಿಯಲ್ಲಿ ವಿಶ್ವಕಪ್ ಗೆದ್ದ ನಂತರ ಇಳಿಮುಖ ದಾರಿಯಲ್ಲಿ ಸಾಗಿತ್ತು. ನಂತರ ಇದೀಗ ಪುನಃ ಏಷ್ಯಕಪ್ ಅನ್ನು ಗೆದ್ದುಕೊಂಡು ದೇಶದ ಹಾಕಿ ಪ್ರಿಯರಿಗೆ ಹರುಷ ತಂದಿದೆ.

ಹಾಕಿಯಲ್ಲಿ ಸಹಜವಾಗಿ ಭಾರತ ಪಾಕಿಸ್ತಾನಗಳ ನಡುವಿನ ಪಂದ್ಯಗಳು ರೋಚಕವಾಗಿರುತ್ತವೆ. (ಭಾರತ ಪಾಕಿಸ್ತಾನದ ನಡುವಿನ ಹಾಕಿ ಪಂದ್ಯಕ್ಕೆ ಇನ್ನೂ ಕೋಮುವಾದದ ಬಣ್ಣ ಹಚ್ಚಿಲ್ಲ!) ಭಾರತ ಪಾಕಿಸ್ತಾನ ನಡುವಿನ ಹಾಕಿ ಪಂದ್ಯಾವಳಿಗಳನ್ನು ವಿಶ್ವದ ಹಾಕಿ ಪ್ರಿಯರು ಕೌತುಕದಿಂದ ಎದುರು ನೋಡುತ್ತಾರೆ. ವಿಶ್ವದ ಎಲ್ಲೆಡೆಯಾಗಲಿ ಭಾರತ ಪಾಕಿಸ್ತಾನ ನಡುವೆ ಹಾಕಿ ಪಂದ್ಯಾವಳಿ ನಡೆದರೆ ಅಪಾರ ಜನಸ್ತೋಮ ಪಂದ್ಯ ವೀಕ್ಷಿಸಲು ಸೇರುತ್ತದೆ. ಕಾರಣ ಭಾರತ ಹಾಗೂ ಪಾಕಿಸ್ತಾನ ಎರಡೂ ಕೌಶಲ್ಯಪೂರ್ಣ ಸಾಂಪ್ರದಾಯಿಕ ಹಾಕಿ ಆಡುತ್ತವೆ. ವಿಶ್ವದ ಉಳಿದ ಯಾವುದೇ ರಾಷ್ಟ್ರಗಳು ಕೌಶಲ್ಯಪೂರ್ಣ ಹಾಕಿ ಆಡುವುದಿಲ್ಲ, ಬದಲಾಗಿ ಕೇವಲ ಶಕ್ತಿಯುತ ಆಟವಾಡುತ್ತವೆ. ಭಾರತ-ಪಾಕಿಸ್ತಾನ ನಡುವೆ ಕ್ರಿಕೆಟ್ ಆಟ ನಡೆಯಬಾರದು ಎಂದು ಬೊಬ್ಬಿಡುತ್ತಿರುವ ಕೋಮುವಾದಿಗಳ ಕಣ್ಣು ಇನ್ನೂ ಹಾಕಿಯ ಮೇಲೆ ಬಿದ್ದಿಲ್ಲ.

ಭಾರತ ಪಾಕಿಸ್ತಾನದ ಕ್ರೀಡಾ ವಲಯದ ಅಧಿಕಾರಿಗಳ ನಡುವೆ ಎರಡೂ ರಾಷ್ಟ್ರಗಳ ನಡುವೆ ಪ್ರತಿವರ್ಷ ಹಾಕಿ ಪಂದ್ಯಾವಳಿ ಸರಣಿ ಆರಂಭಿಸುವ ಮಾತುಕತೆ ಪ್ರಗತಿಯಲ್ಲಿದೆ. ಮಲೇಶಿಯಾ, ದುಬೈ, ಶಾರ್ಜಾ, ಜರ್ಮನಿಗಳು ಭಾರತ ಪಾಕಿಸ್ತಾನ ನಡುವಿನ ಹಾಕಿ ಪಂದ್ಯಗಳಿಗೆ ಆತಿಥ್ಯ ನೀಡಲು ಮುಂದಾಗಿವೆ. ಭಾರತ ಪಾಕಿಸ್ತಾನ ನಡುವಿನ ಹಾಕಿ ಪಂದ್ಯದಲ್ಲಿ ಸಹಜವಾಗಿ ಎರಡೂ ದೇಶಗಳ ಆಟಗಾರರಿಂದ ಶ್ರೇಷ್ಠ ಆಟ ಹೊರಹೊಮ್ಮುತ್ತದೆ ಎಂದು ವಿಶ್ವದ ಕ್ರೀಡಾ ತಜ್ಞರು ಹೇಳುತ್ತಾರೆ. ಏಷ್ಯಾಕಪ್ ವಿಜಯದ ನಂತರ ರಾಷ್ಟ್ರೀಯ ಕ್ರೀಡೆ ಹಾಕಿಗೆ ಗೌರವ ಮರುಕಳಿಸಿದೆ. ಇತ್ತೀಚಿನ



ದಿನಗಳಲ್ಲಿ ಅತ್ಯುತ್ತಮ ತಯಾರಿಯೊಡನೆ ಭಾರತದ ಹಾಕಿ ತಂಡ ಸಜ್ಜಾಗಿವೆ. 2001 ರಲ್ಲಿ ವಿಶ್ವ ಜೂನಿಯರ್ ಪಂದ್ಯಾವಳಿಯಲ್ಲಿ ವಿಜೇತರಾದ ಭಾರತದ ಕಿರಿಯರ ತಂಡದಲ್ಲಿದ್ದ ಅನೇಕ ಯುವ ಆಟಗಾರರು ಇದೀಗ ಹಿರಿಯರ ತಂಡದಲ್ಲಿ ಸೇರಿ ಭಾರತ ಯುವ ಹಾಗೂ ಅನುಭವಿ ಹಿರಿಯ ಆಟಗಾರರಿಂದ ಕೂಡಿದ ಸಮ್ಮಿಳಿತ ಹಾಕಿ ತಂಡವಾಗಿ ಏಷ್ಯಾಕಪ್‌ನಲ್ಲಿ ವಿಜಯ ಸಾಧಿಸಿದೆ.

ಭಾರತದ ಹಾಕಿ ತಂಡದಲ್ಲಿ ದೇಶದ ಉದ್ದಗಲದಿಂದ ಆರಿಸಿ ಬಂದ ಆಟಗಾರರಿದ್ದಾರೆ. ದೇಶಕ್ಕೆ 400 ಪಂದ್ಯಗಳನ್ನು ಆಡಿರುವ ಹಿರಿಯ ಅನುಭವಿ ಆಟಗಾರ ವಿಶ್ವಶ್ರೇಷ್ಠ ಮುನ್ನಡೆ ಆಟಗಾರರಲ್ಲಿ ಒಬ್ಬರಾದ ಧನರಾಜ ಪಿ... ನೇತೃತ್ವದಲ್ಲಿ ಫೈನಲ್‌ನಲ್ಲಿ ಪಾಕಿಸ್ತಾನದ ಎದು... ಯುವ ಪ್ರತಿಭೆ ಪ್ರಬ್‌ಜೋತಸಿಂಗ್... ಕನ್ವಲ್‌ಪ್ರೀತಸಿಂಗ್, ಗಗನ್ ಅಜಿತ್‌ಸಿಂ... ಹಾಗೂ ಇಗ್ನೇಷಿಯಸ್ ಟರ್ಕಿ ಗೋಲು ಗಳ... ಭಾರತ ಪಾಕಿಸ್ತಾನವನ್ನು 4-2 ಗೋಲುಗ... ಅಂತರದಿಂದ ಸೋಲಿಸಿತು. ಭಾರ... ತಂಡದಲ್ಲಿರುವ ದಿಲೀಪ್ ಟಿಕಿ... ಇಗ್ನೇಷಿಯಸ್ ಟರ್ಕಿ, ಬಿಮಲ್ ಲಾ... ಬಿಹಾರ- ಒರಿಸ್ಸಾದ ಆದಿವಾ... ಪ್ರತಿಭೆಗಳು.

ಕರ್ನಾಟಕದ ಹಿರಿಮೆ

ಏಷ್ಯಾ ಕಪ್ ಗೆದ್ದ ಹಾಕಿ ತಂಡದ... ಕರ್ನಾಟಕದ ಪ್ರತಿಭಾವಂತ ಆಟಗಾ... ಸಂದೀಪ್ ಮೈಕಲ್ ಸಹಾ ಒಬ್ಬರ... ಇದಲ್ಲದೆ ವಿಜಯದ ಗೋಲು ಬಾರಿ... ಇಗ್ನೇಷಿಯಸ್ ಟರ್ಕಿ ಸೈನ್ಯಕ್ಕೆ ಸೇ... ಬೆಂಗಳೂರಿನ ಎಂ.ಇ.ಜಿ. ಯ... ಯೋಧ. ಇದಲ್ಲದೆ ಬಿಮಲ್ ಲಾಕ್ರಾ ಹಾ... ಗೋಲ್‌ಕೀಪರ್ ದೇವೇಶ್ ಚೌಹಾ... ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾ... ಅಡಿಯಲ್ಲಿರುವ ಸೆಂಟರ್ ಆಫ್ ಎಕ್ಸಲೆ... ತಂಡದಲ್ಲಿ ಉದಯಿಸಿ ಬಂದ ಪ್ರತಿಭೆಗ... ಇದಲ್ಲದೆ ತಂಡದ ಗೋಲ್‌ಕೀಪ... ತರಬೇತುದಾರ ಎ.ಕೆ.ಸುಬ್ಬಯ್ಯ, ದೈ... ತರಬೇತುದಾರ ಸಂಪತ್ ಕುಮಾರ್, ತಂ... ಮ್ಯಾನೇಜರ್ ಕೃಷ್ಣಮೂರ್ತಿ ಸ... ಬೆಂಗಳೂರಿನವರು. ಹಿಂದಿನಿಂದಲೂ ದೇ... ಹಾಕಿ ಪ್ರತಿಭೆಗೆ ಕರ್ನಾಟಕ ಕೊಡುಗೆ ಅಪಾ...

■ **ಮೆಲ್ಕಿಯೋರ್.ಆರ್...**

‘ಎ’ ಯಿಂದ ‘ಎಂ’ ಗೆ ಬಡ್ತಿ ಪಡೆದ ಉಪೇಂದ್ರ

ಸಿನಿವಾರ್ತೆ

ಬಿಗಿಯಾಗಿರುವ ಭಾರತೀಯ ಕುಟುಂಬ ವ್ಯವಸ್ಥೆ ಹುಸಿಯೆಂದು ನಿರೂಪಿಸ ಹೊರಡುವ ನಾಯಕ ದಾರಿ ತಪ್ಪಿ ವೇಶ್ಯೆಯೊಬ್ಬಳ ದಾಸನಾಗು ವುದು, (ತಾಯಿ ಹಾಗೂ ಹೆಂಡತಿ ಯೊಂದಿಗೆ ಸಂಬಂಧ ಕಡಿದುಕೊಳ್ಳದೆ) ಭಾರತೀಯ ಕುಟುಂಬ ವ್ಯವಸ್ಥೆಗೆ ಪರ್ಯಾಯ ವಿಲ್ಲವೆಂಬ ಸಂದೇಶವನ್ನೇ ನೀಡಿದಂತಾಗುತ್ತದೆ ‘ರಕ್ತಕಣ್ಣೀರು’

1953 ರ ಸತ್ಯ ಘಟನೆಯೆಂದು ಪ್ರಾರಂಭ ವಾಗುವ ಈ ಚಿತ್ರ ಭಾರತೀಯ ಸಮಾಜದ ಪ್ರಸ್ತುತ ಸನ್ನಿವೇಶವನ್ನೇ ಚಿತ್ರೀಕರಿಸಿದೆ. ಉತಪ್ಪ ಸಂಸತಿಯ ಒಡೆಯ ತಾನೆಂದು ಜಗತ್ತಿನೆದುರು ಜಂಭ ಹೊಡೆಯುವ ಈ ದೇಶ, ತನ್ನೊಡಲೊಳಗೆ ಹುದುಗಿಸಿ ಕೊಂಡಿರುವ ವಿಕೃತಗಳನ್ನು ಬಯಲಿಗೆಳೆಯುವ ಸಾಹಸದ ಚಿತ್ರ ಇದಾಗಿದೆ.

ವಿದೇಶದಲ್ಲಿ ಎರಡೆರಡು ಪದವಿ ಪಡೆದು ಸ್ವದೇಶಕ್ಕೆ ಹಿಂದಿರುಗಿದ ಶ್ರೀಮಂತ ಕುಟುಂಬವೊಂದರ ಯುವಕ ಮೋಹನ್ (ಉಪೇಂದ್ರ) ಈ ದೇಶದ ನಡೆ, ನುಡಿ, ಆಚಾರ, ವಿಚಾರ, ಸಂಪ್ರದಾಯ ಭಾಷೆ ಪರಂಪರೆಗಳೆಲ್ಲವುಗಳನ್ನು ಗುಮಾನಿಯಿಂದಲೇ ನೋಡುತ್ತಾನೆ. ಇಂತವುಗಳ ಕುರಿತಾಗಿ ತನ್ನದೇ ವಿಭಿನ್ನ ತರ್ಕವನ್ನು ಮಂಡಿಸುತ್ತಾ ಹೋಗುತ್ತಾನೆ.

ಇಲ್ಲಿನ ನಡೆ-ನುಡಿಯ ನಡುವಿನ ವೈರುಧ್ಯವೇ ಈತನ ತರ್ಕದ ಹೂರಣ. ಉದಾಹರಣೆಗೆ, ದೇವರಿಗೆ ಮುಡಿ ಕೊಡುವ ವಿಚಾರ ಬಂದಾಗ ಕತ್ತರಿಸಿದರು ಬೆಳೆಯುವುದೆಂಬ ಕಾರಣಕ್ಕೆ ತಾನೇ ಮುಡಿ ಕೊಡುವುದು ಭಕ್ತಿ ಇದ್ದವರು ಕಾಲೋ, ಕಣ್ಣೋ, ಕೈಯ್ಯೋ ಏಕೆ ಕತ್ತರಿಸ ಬಾರದೆಂಬ ತರ್ಕ. ಹಾಗೆಯೆ ಉದ್ದುದ್ದ ನಾಮ ಹಾಕಿಕೊಂಡರೆ ಅದೊಂದು ಜಾತಿ, ಅಡ್ಡಡ್ಡ ಹಾಕಿದರೆ ಮತ್ತೊಂದು ಜಾತಿ, ಯಾವುದೂ ಹಾಕದೇ ಇರುವುದು ಮಗದೊಂದು ಜಾತಿ. ಇವು ಜಾತಿಯ ಸಂಕೇತ ಭಕ್ತಿಯ ಸಂಕೇತವಲ್ಲವೆಂಬ ವಾದ ಹೀಗೆ...

ವಿದೇಶದಿಂದ ಆಗಮಿಸಿದ ಮೋಹನ್‌ಗೆ ಸ್ವಾಗತ ಕೋರುವ ಭಾಗವಾಗಿ ಸಭೆಯೊಂದನ್ನು ಏರ್ಪಡಿಸಲಾಗುತ್ತದೆ. ಕಾರ್ಮಿಕರು,



ಶ್ರಮಿಕರು, ಕೂಲಿನಾಲಿ ಮಾಡುವ ಜನ ಅಲ್ಲಿ ಭಾಗವಹಿಸಿ ರುತ್ತಾರೆ. ಸೋಪು ಕಾಣದ ಕೊಳಕು ಶರೀರ, ಒಗೆತ ಕಾಣದ ಮಾಸಲು ಬಟ್ಟೆ, ಪೇಸ್ಟೇ ಗೊತ್ತಿಲ್ಲದ ಹಳದಿ ಹಲ್ಲುಗಳ ಜನರಿಲ್ಲಿ ನೆರೆದಿದ್ದೀರಿ ಡರ್ಟಿ ಇಂಡಿಯನ್ಸ್. ನನಗೆ ಈ ವಾಸನೆಯಿಂದ ವಾಕರಿಕೆ ಬರುತ್ತಿದೆ ಎಂದು ಪ್ರಾರಂಭವಾಗುವ ನಾಯಕನ ಮಾತುಗಳು ಪ್ರಸ್ತುತ ರಾಜಕಾರಣದ ಅಂತರಂಗ ವನ್ನು ಪ್ರತಿನಿಧಿಸುತ್ತವೆಂದರೆ ತಪ್ಪಾಗಲಾರದೇನೋ. ಶ್ರಮಪಟ್ಟು ದುಡಿಯುವ ಜನತೆಯನ್ನು ಇಂತಹ ದರಿದ್ರಾವಸ್ಥೆಯಲ್ಲಿಟ್ಟು ಅವರ ಓಟುಗಳಿಗಾಗಿ ಮಾತ್ರವೇ ಮೇಲ್ನೋಟಕ್ಕೆ ಬೆಣ್ಣೆ ಮಾತನಾಡುವ ರಾಜಕಾರಣಿಗಳು ಅಂತರಂಗದಲ್ಲಿ ಈ ಜನರ ಬಗೆಗೆ ಹೊಂದಿರುವ ಅಭಿಪ್ರಾಯ ಖಂಡಿತ ಇದೇ ಆಗಿದೆ!.

ಪ್ರಭಾ.ಎನ್

ಎಲ್ಲ ರಂಗಗಳಲ್ಲಿ ಸಮರ್ಥೆಯಾಗಿರುವ ಮಹಿಳೆಯನ್ನು ಸರಿ ಸಮನಾಗಿ ಸ್ವೀಕರಿಸಲು ಹೆದರಿದ ಪುರುಷ ತಾನು ‘ಆಳು’ವ ಸಲುವಾಗಿ ‘ಅಳು’ವನ್ನು ಮಹಿಳೆಯ ಪಾಲಿಗಿಟ್ಟು ಆಕೆಯನ್ನು ಗೃಹಬಂಧನದಲ್ಲಿರಿಸಿದ್ದಾನೆ. ಇದರ ಲಾಭ ಪಡೆಯುತ್ತಿರುವ ಪುರುಷ ಕುಟುಂಬದ ಹೊರಗಡೆ ಸಮಾಜದಲ್ಲಿನ ಎಲ್ಲ ಸಂತೋಷ ಸವಲತ್ತುಗಳನ್ನು ಮೋಜಿನಿಂದ ಅನುಭವಿಸುತ್ತಾನೆ. ಇಂಥಹ ಕಪಟ ನೀತಿಗಳನ್ನು ಹಿಮ್ಮೆಟ್ಟಿಸಬೇಕು. ಪ್ರತಿಭಟನೆ ಕಲಿಯಬೇಕು. ಸ್ವತಂತ್ರವಾಗಿ ಬದುಕುವ ಧೈರ್ಯ ಮಾಡಬೇಕು. ಪ್ರಶ್ನೆ ಮಾಡಬೇಕು.... ಮುಂತಾಗಿ ಸ್ತ್ರೀವಾದಿ ಭಾಷಣ ಮಾಡುವ ನಾಯಕ ಮೋಹನ್ ವೇಶ್ಯೆಯೊಬ್ಬಳ ಮೋಹಕ್ಕೆ ಬಿದ್ದು ಸಾವನ್ನಪ್ಪುವುದೇ ಈ ಕಥೆಯ ದುರಂತ.

ಬಿಗಿಯಾಗಿರುವ ಭಾರತೀಯ ಕುಟುಂಬ ವ್ಯವಸ್ಥೆ ಹುಸಿಯೆಂದು ನಿರೂಪಿಸ ಹೊರಡುವ ನಾಯಕ ದಾರಿ ತಪ್ಪಿ ವೇಶ್ಯೆಯೊಬ್ಬಳ ದಾಸನಾಗುವುದು, (ತಾಯಿ ಹಾಗೂ ಹೆಂಡತಿ ಯೊಂದಿಗೆ ಸಂಬಂಧ ಕಡಿದುಕೊಳ್ಳದೆ) ಭಾರತೀಯ ಕುಟುಂಬ ವ್ಯವಸ್ಥೆಗೆ ಪರ್ಯಾಯ ವಿಲ್ಲವೆಂಬ ಸಂದೇಶವನ್ನೇ ನೀಡಿದಂತಾಗುತ್ತದೆ.

ಒಂದು ಕಡೆ ಉಗ್ರ ಸ್ತ್ರೀವಾದಿ ಭಾಷಣ... ಮತ್ತೊಂದು ಕಡೆ ಇಟ್ಕೊಂಡೋಳ... ಇರೋತನಕ, ಕಟ್ಕೊಂಡೋಳು ಕೊನೆತನ... ಎನ್ನುವ ಸ್ಲೋಗನ್ ಪ್ರೇಕ್ಷಕರ ಪಾಲಿಗಂತೂ ಕನ್‌ಫ್ಯೂಷನ್.

ಹಾಗೆಯೇ ಪ್ರೇಯಸಿಯ... ಸಂಗಕ್ಕಾಗಿ ಸಕಲ ಸಂಪತ್ತನ್ನು... ಧಾರೆಯೆರೆವ ಈ ಭೂಪ ಹೆ... ತಾಯಿ, ಮಡದಿಯನ್ನು ಕಾಲಕಸಕ್ಕಿಂ... ಕಡೆಗಾಣಿಸುತ್ತಾನೆ. ವಿದೇಶದಿಂದ ಮರ... ಬರುವಾಗಲೇ ಜಗತ್ತಿನ ಫಿಲಾಸಫಿಯನ್ನೇ... ಅರೆದು ಕುಡಿದವನಂತೆ ತರ್ಕಿಸುವ ಈತನಿ... ಇವರಿಬ್ಬರ ಬದುಕು ಅದೇಕೋ ತೃಣ... ಸಮನಾಗಿ ಬಿಡುತ್ತದೆ. ಹೀಗೆ ಮಾಡಿದ್ದ... ಪ್ರಾಯಶ್ಚಿತ್ತ ವಾಗಿ ಕುಷ್ಟರೋಗವನ್ನು... ಪ್ರತಿಪಾದಿಸುವ ತರ್ಕ ಮಾತ್ರ ಅಪ್ರಸ್ತುತ... ಶಿಕ್ಷೆಯ ಸ್ವರೂಪ ಅಪ್-ಡೇಟ್ ಆಗಿದ್ದ... ಚೆನ್ನಾಗಿರುತ್ತಿತ್ತು. ಏಕೆಂದರೆ ಜ್ವರಕ್ಕಿಂ... ಸಲೀಸಾಗಿ ವಾಸಿಮಾ... ಕೊಳ್ಳಬಹುದಾದ ಕುಷ್ಟರೋಗವನ್ನು... ವಾಸಿಯಾಗದ ಚಿಕಿತ್ಸೆಯೇ ಇಲ್ಲದ ದೊ... ರೋಗವೆಂದು ಈಗ ಪ್ರತಿಪಾದಿಸುವುದ... ಕುತರ್ಕವಾಗಿಬಿಡುತ್ತದೆ. ಮೂಢನಂಬಿಕೆಗೆ ಗ... ನೆಲೆಯೊದಗಿಸಿದಂತಾಗುತ್ತದೆ.

ಎಲ್ಲಾ ಬಲ್ಲ ಪಂಡಿತನೊಬ್ಬ ಅರಾ...

ಪುಟ 8 ನೋ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12. 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH